BUDGET ESTIMATES FOR 1968-69—DEMANDS FOR GRANTS

Demands Nos. 2, 7, 8, 33, 38, 42 and 51.

(*Debate Continued*)

†ಶ್ರೀ ಬಿ. ರಾಚಯ್ಯ. (ಅರಣ್ಯ ಮತ್ತು ಕಂದಾಯ ಮಂತ್ರಿಗಳು).–ಮಾನ್ಯ ಸಭಾಪತಿಯವರೇ, ಕಂದಾಯ ಮತ್ತು ಅರಣ್ಯ ಇಲಾಖೆಗಳಿಗೆ ಸಂಬಂಧಪಟ್ಟ ಹಾಗೆ ಮೂರು ದಿವಸಗಳಿಂದಲೂ ಆಗುತ್ತಿರುವ ಚರ್ಚೆಯನ್ನೂ ಹಾಗೂ ಮುಂಗಡ ಪತ್ರದ ಮೇಲೆ ಮಾನ್ಯ ಸದಸ್ಯರು ಭಾಷಣಗಳನ್ನು ಮಾಡಿರುವುದನ್ನೂ ನಾನು ಕೇಳಿದ್ದೇನೆ. ಆ ರೀತಿಯಾಗಿ ಭಾಷಣ ಮಾಡಿದಂಥ ಈ ಸಭಾ ಸದಸ್ಯರೆಲ್ಲರಿಗೂ ಕೂಡ ನಾನು ಮೊಟ್ಟ ಮೊದಲನೆಯದಾಗಿ ಹೃತ್ಪೂರ್ವಕವಾದ ವಂದನೆಗಳನ್ನು ಅರ್ಪಿಸುತ್ತೇನೆ. ಈ ಬೇಡಿಕೆಗಳ ಮೇಲೆ ಸುಮಾರು 151 ಖೋತಾ ಸೂಚನೆಗಳು ಬಂದಿವೆ. ಸುಮಾರು 28 ಜನ ಮಾನ್ಯ ಸದಸ್ಯರು ಈ ಇಲಾಖೆಗಳಲ್ಲಿ ಮಾಡತಕ್ಕ ಕೆಲಸದ ಮೇಲೆ ಬೆಳಕನ್ನು ಚೆಲ್ಲಿದ್ದಾರೆ. ಈ ಖೋತಾ ಸೂಚನೆಗಳಲ್ಲಿ ಅಡಕವಾಗಿರತಕ್ಕ ಅಂಶಗಳು ಮತ್ತು ಈ ಮಾನ್ಯ ಸಭೆಯಲ್ಲಿ ಸದಸ್ಯರುಗಳು ಮಾಡಿದಂಥ ವಿಷಯಗಳು ಅವುಗಳ ಬಗ್ಗೆ ಪ್ರತಿಯೊಂದಕ್ಕೂ ಕೂಡ ಪ್ರತಿಯೊಬ್ಬರಿಗೂ ಉತ್ತರ ಕೊಡುವುದು ಸ್ವಲ್ಪಮಟ್ಟಿಗೆ ಕಷ್ಟವಾದರೂ ಕೂಡ ಅವುಗಳನ್ನು ಸ್ಥೂಲವಾಗಿ ವಿಂಗಡಣೆ ಮಾಡಿಕೊಂಡಿದ್ದೇನೆ. ಬಹು ಮುಖ್ಯವಾಗಿ ಅಂದರೆ, ಮೊಟ್ಟ ಮೊದಲನೆಯದಾಗಿ ಈ ಖೋತಾ ಸೂಚನೆಗಳ ಸಂಬಂಧವಾಗಿ ಸುಮಾರು ಹತ್ತು ಜನ ಸದಸ್ಯರು ಕೇವಲ ಭೂಸುಧಾರಣೆ ಮೇಲೆ ಮಾತನಾಡಿದ್ದಾರೆ.

1-30 P.M.

ಭೂಸುಧಾರಣೆಯನ್ನು ಜಾರಿಗೆ ತರತಕ್ಕದ್ದರಲ್ಲಿ ಸರ್ಕಾರ ವಿಳಂಬ ಮಾಡಿದೆ. ಸರ್ಕಾರಕೆ ಆಸಕ್ತಿ ಇದೆಯೋ ಇಲ್ಲವೋ ಏನೋ ಎನ್ನುವ ರೀತಿಯಲ್ಲಿ ಮಾನ್ಯ ಸದಸ್ಯರು ಭಾಷಣ ಮಾಡಿದರು. ಶ್ರೀಮಾನ್ ಸಿದ್ಧಯ್ಯನವರು ಶ್ರೀ ಬೊಮ್ಮಾಯಿಯವರು ಮತ್ತು ಶ್ರೀ ವೆಂಕಟಗಿರಿಯಪ್ಪನವರು ಮತ್ತು ಇನ್ನೂ ಅನೇಕ ಸದಸ್ಯರು ಭೂಮಿಯ ಒಂದು ಪರಮಾವಧಿಯನ್ನು ಏನು ಗೊತ್ತು ಮಾಡಿದ್ದಾರೆ, ಆ ಪರಮಾವಧಿ ಪ್ರಕಾರ ಬಹುಶಃ ಈಗಿರತಕ್ಕದ್ದನ್ನು ಒಪ್ಪಿಕೊಳ್ಳಬೇಕಾದರೆ ಹೆಚ್ಚು ಜನಗಳಿಗೆ ಅದಕ್ಕಿಂತ ಹೆಚ್ಚಿಗೆ ಭೂಮಿ ಸಿಕ್ಕಲಾರದು ಎಂದು ಹೇಳಿದರು. ಶ್ರೀಮಾನ್ ಶೆಟ್ಟರು ಕೂಡ ಹೀಗೆಯೇ ತಿಳಿಸಿದರು. ಬಹುಶಃ 20 ವರ್ಷಗಳಿಂದ ಉಳತಕ್ಕವರಿಗೇ ಭೂಮಿಯ ಒಡೆತನ ಕೊಡಬೇಕೆಂದು ಹೇಳಿ ಕಾಂಗ್ರೆಸ್ ಅಸ್ತಿತ್ವಕ್ಕೆ ಬಂದ ಮೇಲೆ ಅನೇಕ ಗೇಣಿ ಶಾಸನಗಳನ್ನು ಅನೇಕ ರಾಜ್ಯಗಳಲ್ಲಿ ಜಾರಿಗೆ ತಂದರು. ಮೈಸೂರು ಒಳಗೊಂಡಿರತಕ್ಕ 5 ಭಾಗಗಳಲ್ಲಿ ಅನೇಕ ಗೇಣಿ ಶಾಸನಗಳು ಇದ್ದು ಅವುಗಳನ್ನು ಒಟ್ಟುಗೂಡಿಸಿ ಒಂದು ಸಮನ್ವಯ ಕಾಯಿದೆ ಮಾಡಬೇಕು ಎಂದು ಜತ್ತಿಯವರ ಸಮಿತಿಯನ್ನು ನೇಮಕ ಮಾಡಿ ಅವರು ಶಿಫಾರಸ್ಸು ಮಾಡಿದರು. 1961ನೇ ಇಸವಿಯಲ್ಲಿ ಒಂದು ಕಾಯಿದೆ ಆಯಿತು. ಆ ಕಾಯಿದೆಯಲ್ಲಿ ಕೆಲವು ತಿದ್ದುಪಡಿಗಳನ್ನು 12–10-1965 ರಲ್ಲಿ ಮಾಡಿದರು. ಅವು ಜಾರಿಯಲ್ಲಿವೆ. 66-67ರಲ್ಲಿ ಈ ಕಾಯಿದೆಯಲ್ಲಿರತಕ್ಕ 14ನೇ ಸೆಕ್ಷನ್ ಪ್ರಕಾರ ಭೂಮಾಲಿಕರು ಸ್ವಂತಸಾಗುವಳಿಗೆ ಭೂಮಿಯನ್ನು ವಾಪಸ್ಸು ತೆಗೆದುಕೊಳ್ಳಬೇಕಾದರೆ ಕಾಲವನ್ನು ವಿಸ್ತರಿಸಬೇಕು, ಅದೇ ರೀತಿ ಗೇಣಿದಾರರಿಗೂ ಅವರ ಹಕ್ಕನ್ನು ಕಾಪಾಡಿಕೊಳ್ಳುವುದಕ್ಕೆ ಇವೊತ್ತಿನ ದಿವಸ ಅವಕಾಶ ಮಾಡಿಕೊಡಬೇಕೆಂದು ಒಂದು ತಿದ್ದುಪಡಿಯನ್ನು ತಂದಿದ್ದೆವು ಈ ಕಾಯಿದೆಯನ್ನು ಜಾರಿಗೆ ಕೊಡತಕ್ಕ ಕಾಲದಲ್ಲಿ ನಮಗೆ ಅನೇಕ ತೊಂದರೆಗಳು ಕಾಣುತ್ತಿವೆ. ಬಹು ಮುಖ್ಯವಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ಕೊಡಗು, ಕೊಳ್ಳೇಗಾಲ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ರೆಕಾರ್ಡ್ಸ್ ಆಫ್ ರೈಟ್ಸ್ ಇರಲಿಲ್ಲ. ಅವುಗಳನ್ನು ಬಹುಮಟ್ಟಿಗೆ ಅಪ್‌ಟುಡೇಟ್ ಮಾಡಬೇಕಾಗಿದ್ದರೆ ಕಷ್ಟವಾಗಿತ್ತು. ಎಲ್ಲಾ ರೆಕಾರ್ಡ್ಸ್ ಆಫ್ ರೈಟ್ಸ್‌ಗಳನ್ನೂ ಇಂಟ್ರಡ್ಯೂಸ್ ಮಾಡಿ ಅವರವರ ಹಕ್ಕು ಬಾಧ್ಯತೆಗಳಿಗೆ ಧಕ್ಕೆ ಬಾರದ ರೀತಿಯಲ್ಲಿ ನೋಡಿಕೊಳ್ಳಬೇಕು ಎಂದು ಈ ವಿಷಯದಲ್ಲಿ ತೀವ್ರಗಮನ ಕೊಟ್ಟು ಸಂಬಂಧಪಟ್ಟ ಸಿಬ್ಬಂದಿಯನ್ನು ನೇಮಕಮಾಡಿ ಆ ಕೆಲಸ ತೀವ್ರತೆಯಿಂದ ನಡೆಯುತ್ತಿದೆ.

ಇನ್ನು ಭೂಸುಧಾರಣಾ ಕಾನೂನಿಗೆ ಸಂಬಂಧಪಟ್ಟ ಹಾಗೆ ಜಮೀನಿನ ಮಾಲಿಕತ್ವಕ್ಕೆ ಸಂಬಂಧಿಸಿದ ತಕರಾರುಗಳನ್ನು ಪರಿಶೀಲಿಸಲು ಈಗಿರತಕ್ಕ 21 ಲ್ಯಾಂಡ್ ಟ್ರಿಬ್ಯೂನಲ್‌ಗಳ ಜೊತೆಗೆ ಮತ್ತೆ 24 ಲ್ಯಾಂಡ್ ಟ್ರಿಬ್ಯುನಲ್‌ಗಳನ್ನು ನೇಮಿಸಿದ್ದೇವೆ. ಒಟ್ಟು 45 ಲ್ಯಾಂಡ್ ಟ್ರಿಬ್ಯುನಲ್‌ಗಳನ್ನು ಮಾಡಿ ಅವು 2-11-67ಕ್ಕೆ ಅಸ್ತಿತ್ವಕ್ಕೆ ಬಂದಿದೆ. ಇದರಲ್ಲಿ ಕೆಲಸಗಳನ್ನು ಹಂಚಿಕೆ ಮಾಡತಕ್ಕ ಕಾಲದಲ್ಲಿ

ಕೆಲವು ಭಾಗಗಳಲ್ಲಿ ಜನಗಳು ಬಹಳ ದೂರ ಹೋಗಬೇಕಾಗಿದೆಯೆಂದು ಹೇಳುತ್ತಿದ್ದಾರೆ. ಆದ್ದರಿಂದ ಎಲ್ಲೆಲ್ಲಿ ತೊಂದರೆಯಾಗಿದೆಯೋ ಅದನ್ನು ಆಯಾ ಮುನ್ಸಿಫ್ ಮ್ಯಾಜಿಸ್ಟ್ರೇಟರುಗಳಿಗೆ ಈ ಕೆಲಸಗಳನ್ನು ಹಂಚುವುದರಿಂದ ಕೆಲಸ ತೀವ್ರವಾಗಿ ಆಗುತ್ತದೆ ಎಂದು ನಾವು ಆ ಕೆಲಸದಲ್ಲಿ ಉದ್ಯುಕ್ತರಾಗಿದ್ದೇವೆ. ಈ ನ್ಯಾಯಾಲಯಗಳಲ್ಲ ಟ್ರಿಬ್ಯುನಲ್‌ಗಳಲ್ಲಿ 77 ಸಾವಿರಕ್ಕೂ ಹೆಚ್ಚು ಅರ್ಜಿಗಳು ಬಂದಿದೆಯೆಂದು ತಿಳಿಸಿದ್ದಾರೆ. ಬಹುಶಃ ಅತ್ಯಂತ ತ್ವರಿತವಾಗಿ ಇದರ ಕೆಲಸವನ್ನು ಮ್ಯಾಜಿಸ್ಟ್ರೇಟರಿಗೆ ಹಂಚಿಕೆ ಮಾಡ ಬೇಕೆಂದು ಹೈಕೋರ್ಟಿನವರನ್ನು ಕೆಲವು ವಿವರಗಳನ್ನು ಕೇಳಿದ್ದೇವೆ. ಅವು ಬಂದನಂತರ ಈ ಕೆಲಸ ಗಳನ್ನು ಅವರಿಗೆ ವಹಿಸುತ್ತೇವೆ. ಈ ಭೂಸುಧಾರಣಾ ಕಾನೂನಿನ ಉದ್ದೇಶ ಏನೆಂದರೆ, ಯಾರೇ ಆಗಲಿ ಇನ್ನೊಬ್ಬ ಮನುಷ್ಯ ಬೆವರು ಸುರಿಸಿ ಮಾಡಿದ ಸಂಪಾದನೆಯಿಂದ ಇವನು ಕುಳಿತುಕೊಂಡು ಜೀವನವನ್ನು ಸಾಗಿಸುವುದು ಇನ್ನು ಮುಂದೆ ಇರಬಾರದು, ದುಡಿಮೆಗೆ ತಕ್ಕ ಪ್ರತಿಫಲ ಸಿಕ್ಕಬೇಕು, ಪ್ರತಿಯೊಬ್ಬರೂ ಒಂದಲ್ಲ ಒಂದು ಉದ್ಯೋಗದಲ್ಲಿ ಇರಬೇಕು ಎಂಬುದು ಮೂಲ ಉದ್ದೇಶ. ಗೇಣಿ ದಾರರಿಗೆ ಹಿತರಕ್ಷಣೆ ಕೊಡುವುದಕ್ಕಾಗಿ ಗೇಣಿ ಶಾಸನವನ್ನು ಸಮನ್ವಯಗೊಳಿಸಲಾಗಿದೆ.

ಇನ್ನು ಮೂರನೆಯದಾಗಿ ಟ್ರಿಬ್ಯುನಲ್‌ಗಳು ತೀರ್ಮಾನ ಮಾಡಿದಮೇಲೆ, ಪ್ರತಿಯೊಂದು ಲ್ಯಾಂಡ್ ಟ್ರಿಬ್ಯುನಲ್‌ಗಳು ಏನು ಸರ್‌ಪ್ಲಸ್ ಲ್ಯಾಂಡನ್ನು ಗೊತ್ತುಮಾಡುತ್ತಾರೆಯೋ ಅದನ್ನು ಆಯಾ ಭಾಗಗಳಿಗೆ ಹಂಚುವ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಭೂಮಾಲೀಕರಿಗೆ ಏನು ಒಂದು ಪರಿಹಾರ ಧನವನ್ನು ಕೊಡಬೇಕಾಗಿದೆ, ಅದಕ್ಕೆ ಕೂಡ ವ್ಯವಸ್ಥೆ ಮಾಡಬೇಕಾಗಿದೆ, ಈ ಒಂದು ದೃಷ್ಟಿಯಿಂದ ಏಕಕಾಲದಲ್ಲಿ, ಒಂದೆರಡು ವರ್ಷಗಳಲ್ಲಿ ಇಂಥಾ ಮಹತ್ವ ಪೂರ್ಣವಾದ ಒಂದು ಸಮಸ್ಯೆಯನ್ನು ಬಗೆಹರಿಸುವುದು ಕಷ್ಟವಾಗುತ್ತದೆ. ನಮ್ಮ ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಈ ಕೆಲಸವನ್ನು ಮಾಡಬೇಕಾಗಿರುವುದರಿಂದ, ನಾನು ಈ ಒಂದು ಜವಾಬ್ದಾರಿ ಯನ್ನು ತೆಗೆದುಕೊಂಡಮೇಲೆ ಇದರಲ್ಲಿ ಕಾಯಿದೆಯಲ್ಲಿ ನ್ಯೂನತೆಗಳು ಏನೇನು ಇವೆ ಅವುಗಳಿಗೆ ಯಾವರೀತಿ ಪರಿಹಾರವನ್ನು ಒದಗಿಸಬೇಕೋ ಆ ರೀತಿ ಒದಗಿಸಲು ತ್ವರಿತವಾಗಿ ಕೆಲಸವನ್ನು ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಇದರ ಜೊತೆಗೆ ನಾವು ಕೇಂದ್ರ ಸರ್ಕಾರವನ್ನೂ ಹಣ ಸಹಾಯ ನೀಡುವಂತೆ ಕೇಳಿದ್ದೇವೆ. ಭೂ ಸುಧಾರಣಾ ಕಾನೂನನ್ನು ಸಂಪೂರ್ಣವಾಗಿ ಜಾರಿಗೆ ಕೊಡಲು 35 ಕೋಟಿ ರೂಪಾಯಿಗಳು ಆಗಬಹುದೆಂದು ನಾವು ಅಂದಾಜು ಮಾಡಿದ್ದೇವೆ. ಈ ವರ್ಷ ಇದರಲ್ಲಿ ಕನಿಷ್ಟ ಪಕ್ಷ 10 ಕೋಟಿ ರೂಪಾಯಿಗಳನ್ನಾದರೂ ಒದಗಿಸಬೇಕೆಂದು ನಾವು ಕೇಂದ್ರ ಸರ್ಕಾರದವರನ್ನು ಒತ್ತಾಯ ಮಾಡಿದ್ದೇವೆ. ಈ ಹಂತದಲ್ಲಿ ಭೂಸುಧಾರಣೆ ಇವೆ. ಒಟ್ಟಿನಲ್ಲಿ ಹೇಳುವುದಾದರೆ ಈ ಒಂದು ಮಾನ್ಯ ಸಭೆಯಲ್ಲಿ ಮಾತನಾಡಿದ ಎಲ್ಲಾ ಸದಸ್ಯರು ಕೂಡ ಭೂ ಸುಧಾರಣೆ ಅಂತ್ಯಂತ ತ್ವರಿತವಾಗಿ ಆಗಬೇಕು ಅದು ಆಗುವುದು ವಿಳಂಬವಾಗಿದೆ ಎಂದು ಸೂಚನೆ ಕೊಟ್ಟು ಸರ್ಕಾರದ ಮೇಲೆ ಹೆಚ್ಚು ಒತ್ತಾಯವನ್ನು ತಂದಿದ್ದಾರೆ. ಅದಕ್ಕಾಗಿ ನಾನು ಆ ಮಾನ್ಯ ಸದಸ್ಯರೆಲ್ಲರಿಗೂ ಋಣಿಯಾಗಿದ್ದೇನೆ.

ಇನ್ನು ನಾಲ್ಕನೇಯದಾಗಿ ಭೂ ಕಂದಾಯ ಏನಿದೆ ಈ ಭೂ ಕಂದಾಯದ ವಿಚಾರದಲ್ಲಿ ಚುನಾವಣೆಗೆ ಹಿಂದೆ ಮತ್ತು ಚುನಾವಣೆಯ ನಂತರ ಹಣಕಾಸಿನ ಸಚಿವರು ಈಗಿರತಕ್ಕ ಕಂದಾಯದ ಪದ್ಧತಿಯನ್ನು ರದ್ದುಮಾಡಿ ಇದರಲ್ಲಿ ನಷ್ಟವಾಗತಕ್ಕ ಹಣವನ್ನು ಬೇರೆ ರೀತಿಯಲ್ಲಿ ಕೂಡಿಸಿಕೊಳ್ಳಲು ಒಂದು ಮಾರ್ಗವನ್ನು ಕಂಡುಹಿಡಿಯಬೇಕಾಗಿದೆ ಎಂದು ಮಾನ್ಯ ಹಣಕಾಸಿನ ಸಚಿವರು ತಿಳಿಸಿದ್ದರು ಅದರ ಪ್ರಕಾರ ಮಂತ್ರಿಮಂಡಲದ ಒಂದು ಉಪಸಮಿತಿಯನ್ನು ನೇಮಿಸಿದ್ದರು. ಆ ಉಪ ಸಮಿತಿ ಯವರು ಒಂದು ವರದಿಯನ್ನು ಕೊಟ್ಟಿದ್ದಾರೆ. ಈ ಸಭೆಯಲ್ಲಿ ಕಳೆದ ಅಧಿವೇಶನದಲ್ಲಿ ಆ ವರದಿಯು ನನ್ನ ಮುಂದೆ ಇದೆ, ಅದನ್ನು ಮಂತ್ರಿಮಂಡಲದ ಮುಂದೆ ಇಡುವುದಕ್ಕೆ ಸ್ವಲ್ಪ ಕಾಲವನ್ನು ತೆಗೆದು ಕೊಂಡಿದ್ದೇನೆ ಎಂದು ನಾನು ಹೇಳಿದ್ದೇನೆ. ಭೂ ಕಂದಾಯವನ್ನು ರದ್ದುಮಾಡುವ ವಿಚಾರದಲ್ಲಿ ಮಂತ್ರಿಮಂಡಲದ ಉಪ ಸಮಿತಿಯವರು ಪರಿಶೀಲನೆ ಮಾಡಿ ಭೂಮಿಯ ಮೇಲೆ ವ್ಯವಸಾಯೋತ್ಪನ್ನ ಗಳ ಆಧಾರದ ಮೇಲೆ ಒಂದು ತೆರಿಗೆಯನ್ನು ಹಾಕತಕ್ಕಂಥಾದ್ದು ಸೂಕ್ತವೆಂದು ಅಭಿಪ್ರಾಯಪಟ್ಟು ರೈತರಿಗೆ ಜಮೀನಿನ ರೆಕಾರ್ಡ್ಸ್ ಆಫ್‌ರೈಟ್ಸ್‌ನ್ನು ಹೇಗೆ ಕಾಪಾಡುವುದು ಎಂಬ ಅಂಶವನ್ನು ಸೂಚಿಸಿ ದ್ದರು. ಈ ದೃಷ್ಟಿಯಲ್ಲಿ ವ್ಯವಸಾಯ ತೆರಿಗೆಯನ್ನು ಹಾಕಿದರೆ ಅದರಿಂದ ರೈತರಿಗೆ ಹೆಚ್ಚಿನ ತೊಂದರೆ ಯಾಗುತ್ತದೆ. ಲೆಕ್ಕಪತ್ರಗಳನ್ನು ಇಡಲು ಬಾರದ ರೈತರಿಗೆ ಹೆಚ್ಚಿನ ರೀತಿಯಲ್ಲಿ ಕಿರುಕುಳಗ ಳಾಗುತ್ತವೆ, ಲಂಚಕ್ಕೆ ಎಡೆಕೊಟ್ಟ ಹಾಗೆ ಆಗುತ್ತದೆ ಎಂದು ಅನೇಕ ಮಂದಿ ಶಾಸನ ಸಭಾಸದಸ್ಯರು ಮತ್ತು ಅನೇಕ ಮಂದಿ ರೈತರು ಹೇಳಿದರು. ಮತ್ತು ಈ ವ್ಯವಸಾಯೋ ತ್ಪನ್ನದ ಮೇಲೆ ತೆರಿಗೆಯನ್ನು ಹಾಕಬೇಡಿ ಎಂದು ಹೇಳಿದರು. ಒಟ್ಟಿನಲ್ಲಿ ಕಾಂಗ್ರೆಸ್ ಶಾಸನ ಸಭ ಪಕ್ಷದಲ್ಲಿ ಇದಕ್ಕೆ ಹೆಚ್ಚು ಬೆಂಬಲ ಇಲ್ಲವೆ ಇರುವುದರಿಂದ ಈ ಒಂದು ವ್ಯವಸಾಯದ ಉತ್ಪನ್ನದ ಮೇಲೆ ತೆರಿಗೆ ಹಾಕತಕ್ಕದ್ದನ್ನು ಸದ್ಯಕ್ಕೆ ನಿಲ್ಲಿಸಬೇಕಾಗಿ ಬಂತು. ಈ

(ಶ್ರೀ ಬಿ. ರಾಚಯ್ಯ)

ಭೂ ಕಂದಾಯದಲ್ಲಿ ಶೇಕಡಾ 65-70 ಭಾಗ ಹಣವನ್ನು ಸ್ಥಳೀಯ ಸಂಸ್ಥೆಗಳಿಗೆ ಕೊಡಬೇಕೆಂದು ಒಪ್ಪಿಕೊಂಡಿರುವುದರಿಂದ ಈ ಕಂದಾಯವನ್ನು ಸಂಪೂರ್ಣವಾಗಿ ವಜಾಮಾಡುವುದರಿಂದ ಸ್ಥಳೀಯ ಸಂಸ್ಥೆಗಳಿಗೆ ಕೊಡತಕ್ಕ ಹಣವನ್ನು ಕೊಡಬೇಕಾದರೆ ಸುಮಾರು 8 ಕೋಟಿ ರೂಪಾಯಿಗಳನ್ನು ಬೇರೆ ರೀತಿಯಲ್ಲಿ ಒದಗಿಸಿಕೊಳ್ಳಬೇಕಾಗುತ್ತದೆ. ರೆವಿನ್ಯೂ ಕಂದಾಯದಿಂದ ಸ್ಥಳೀಯ ಸಂಸ್ಥೆಗಳಿಗೆ ಇಷ್ಟು ಹಣವನ್ನು ಕೊಡಬೇಕೆಂದು ಗೊತ್ತುಮಾಡಿರುವುದರಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚು ಅಭಿವೃದ್ಧಿ ಕಾರ್ಯಗಳು ನಡೆಯುವುದಕ್ಕೆ ಅವಕಾಶವಾಗಿದೆ. ಈ ಒಂದು ದೃಷ್ಟಿಯಿಂದ 8 ಕೋಟಿ ರೂಪಾಯಿಗಳ ಉತ್ಪತ್ತಿ ಬರುವುದಕ್ಕಿಂತ ಮುಂಚೆ ಈ ಭೂ ಕಂದಾಯವನ್ನು ರದ್ದು ಮಾಡತಕ್ಕ ವಿಷಯದಲ್ಲಿ ಆತುರವಾಗಿ ನಿರ್ಧಾರವನ್ನು ತೆಗೆದುಕೊಂಡರೆ ಸ್ಥಳೀಯ ಸಂಸ್ಥೆಗಳ ಕೆಲಸ ಕಾರ್ಯಗಳು ಸರಿಯಾಗಿ ನಡೆಯುವುದಿಲ್ಲ. ಮತ್ತೆ ಹೊಸ ತೆರಿಗೆಯನ್ನು ಹಾಕಿ ಅದು ಕಾರ್ಯ ರೂಪಕ್ಕೆ ಬರುವವರೆಗೆ ಬಹಳ ಕಷ್ಟವಾಗುತ್ತದೆಂದು ತೀರ್ಮಾನಕ್ಕೆ ಬಂದಿದ್ದೇವೆ. ಆದ್ದರಿಂದ ಹಳೆಯ ಭೂ ಕಂದಾಯದ ಪದ್ಧತಿ ಏನಿದೆ ಅದನ್ನೇ ಸಧ್ಯಕ್ಕೆ ಮುಂದುವರಿಸಿಕೊಂಡು ಬರಬೇಕೆಂದು ತೀರ್ಮಾನ ಕೈಕೊಂಡಿದ್ದೇವೆ. ಒಟ್ಟಿನಲ್ಲಿ ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ ಯಾವತ್ತಾದರೂ ಒಂದು ದಿನ ಬೆಳೆಯ ಉತ್ಪತ್ತಿಯ ಮೇಲೆ ತೆರಿಗೆಯನ್ನು ಹಾಕಲೇಬೇಕಾಗುತ್ತದೆ. ಅಂತಹ ದಿನಗಳು ಬರುವವರೆಗೆ ಈಗಿನ ಪದ್ಧತಿಯನ್ನೇ ಮುಂದುವರಿಸಬೇಕಾಗುತ್ತದೆಂದು ಈ ಮಾನ್ಯ ಸಭೆಗೆ ತಿಳಿಸುತ್ತೇನೆ. ಒಟ್ಟಿನಲ್ಲಿ ಹೇಳುವುದಾದರೆ, ಕಂದಾಯದ ಹೊರೆ ಹೆಚ್ಚಾಗುತ್ತಿರುವುದಕ್ಕೆ ಕಾರಣ ವೆಂದರೆ, ಸ್ವಲ್ಪಮಟ್ಟಿಗೆ 30 ವರ್ಷಗಳ ಹಿಂದೆ ರೀಕ್ಲಾಸಿಫಿಕೇಷನ್ ಆಗಿತ್ತು, ಇನ್ನು ಕೆಲವು ಕಡೆ 30 ವರ್ಷಗಳಿಗೆ ಇನ್ನೂ ಹಿಂದೆಯೇ ಆಗಿತ್ತು. 30 ವರ್ಷಕ್ಕೆ ಒಂದು ಸಾರಿ ಏಕಕಾಲದಲ್ಲಿ ರೀಕ್ಲಾಸಿ ಫಿಕೇಷನ್ ಆಗಿದ್ದ ಪಕ್ಷದಲ್ಲಿ ಒಂದಕ್ಕೆ ಎರಡರಷ್ಟು ಕಂದಾಯ ಹಾಕುವುದಕ್ಕೆ ಸಾಧ್ಯವಾಗುತ್ತಿತ್ತು. ಆದರೆ ಈಗ ಬೇರೆ ಬೇರೆ ವರ್ಷಗಳಲ್ಲಿ ಬೇರೆ ಬೇರೆ ರೀತಿಯಲ್ಲಿ, ಅಂದರೆ, ಹದಿನಾರನೆಯ ಒಂದು ಭಾಗದಷ್ಟು ಕಂದಾಯವನ್ನು ವಿಧಿಸುತ್ತಿರುವುದರಿಂದ ಕಾನೂನುಬದ್ಧವಾಗಿ ಎಲ್ಲಾ ಕಡೆಯಲ್ಲೂ ಒಂದೇ ರೀತಿ ಕಂದಾಯವನ್ನು ವಸೂಲು ಮಾಡುವುದಕ್ಕೆ ಸಾಧ್ಯವಾಗಿಲ್ಲ. ಆದ್ದರಿಂದ ಎಲ್ಲೆಲ್ಲಿ ರೀಕ್ಲಾಸಿಫಿಕೇಷನ್‌ನಲ್ಲಿ ತಪ್ಪುಗಳಿವೆಯೋ ಅದನ್ನು ಕಂಡುಹಿಡಿದು ತಿದ್ದುವುದಕ್ಕೆ ಈಗಿನ ಕಾಯಿದೆ ಪ್ರಕಾರ ಅವಕಾಶವಾಗಿಲ್ಲ. ಆದ್ದರಿಂದ ಈಗ ಇರತಕ್ಕಂಥ ತಪ್ಪುಗಳನ್ನು ತಿದ್ದಿ ರೈತರಿಗೆ ಅನುಕೂಲ ವಾಗುವಂತೆ ಕೆಲವು ನಿಯಮಗಳ ಬಗ್ಗೆ ತಿದ್ದುಪಡಿಯನ್ನು ಈ ಸಭೆಯ ಮುಂದೆ ತರುವುದರಲ್ಲಿದ್ದೇವೆ. ಅಂತಹ ಸಂದರ್ಭ ಬಂದಾಗ ಮಾನ್ಯ ಸದಸ್ಯರುಗಳು ಸಹಾನುಭೂತಿಯಿಂದ ನೆರವಾಗಬೇಕೆಂದು ಕೇಳಿಕೊಳ್ಳುತ್ತೇನೆ.

ಈಗ ರೈತರು ಪ್ರತಿವರ್ಷ ಕಂದಾಯವನ್ನು ಕೊಡುವುದರಲ್ಲಿ ತಕರಾರು ಮಾಡುತ್ತಿಲ್ಲ. ಒಟ್ಟಿ ನಲ್ಲಿ ಹೇಳುವುದಾದರೆ ಬಹುಶಃ ಅನೇಕ ವರ್ಷಗಳಿಂದ ಅನೂಚಾನವಾಗಿ ಬಂದಿರತಕ್ಕ ಈ ಭೂ ಕಂದಾಯದ ಪದ್ಧತಿಯನ್ನು ರದ್ದುಮಾಡಬೇಕೆಂದು, ಬೇರೆ ಪ್ರಾಂತ್ಯಗಳಲ್ಲಿ ರದ್ದು ಮಾಡಿರುವ ಬಗ್ಗೆ ಇರುವ ನಿಯಮಗಳನ್ನು ತರಿಸಿಕೊಂಡು ನೋಡಿದ್ದಾಯಿತು. ಅದರಂತೆ ಮದ್ರಾಸ್‌ನಲ್ಲಿ ಈಗ 10 ಎಕರೆ ಖುಷ್ಕಿ ಜಮೀನು ಇರುವವರಿಗೆ ಕಂದಾಯದ ವಿನಾಯಿತಿಯನ್ನು ತೋರಿಸಿದ್ದಾರೆ. ಇದರಿಂದ 62 ಲಕ್ಷ ರೂಪಾಯಿಗಳು ಮಾತ್ರ ಆ ಸರ್ಕಾರಕ್ಕೆ ನಷ್ಟವಾಗುತ್ತದೆ. ಮದ್ರಾಸ್ ಪ್ರಾಂತ್ಯದಲ್ಲಿ 47 ಪರ್‌ಸೆಂಟ್ ತರಿ ಜಮೀನು ಇರುವುದರಿಂದ ಖುಷ್ಕಿ ಜಮೀನಿನ ಕೆಲವು ಭಾಗಗಳಿಗೆ ಕಂದಾಯದ ರಿಯಾಯಿತಿ ತೋರಿಸಿದ್ದಾರೆ. ಈ ರೀತಿ ರಿಯಾಯಿತಿ ಕೊಡುವ ಕಾಲಕ್ಕೆ ನಾಲ್ಕೂವರೆ ಕೋಟಿ ರೂಪಾಯಿಗಳಷ್ಟು ಹೆಚ್ಚು ವರಮಾನ ಸರ್ಕಾರಕ್ಕೆ ಬರುವಂತೆ ಸೇಲ್ಸ್ ಟ್ಯಾಕ್ಸನ್ನು ಒಂದಕ್ಕೆ ಎರಡರಷ್ಟು ಮಾಡಿಕೊಂಡು ಶಾಸನಸಭೆಯ ಒಪ್ಪಿಗೆ ತೆಗೆದುಕೊಂಡಿದ್ದಾರೆ. ಒಟ್ಟಿನಲ್ಲಿ 62 ಲಕ್ಷ ರೂಪಾಯಿಗಳನ್ನು ರಿಯಾಯಿತಿ ಕೊಟ್ಟು ನಾಲ್ಕೂವರೆ ಕೋಟಿ ರೂಪಾಯಿಗಳಷ್ಟು ಹೆಚ್ಚು ವರಮಾನ ಬರುವಂತೆ ಮಾಡಿಕೊಂಡಿದ್ದಾರೆ. ಇನ್ನು ಆಂಧ್ರ ಪ್ರದೇಶದಲ್ಲಿ ಖುಷ್ಕಿ ಕಂದಾಯ ವನ್ನು ಕೆಲವು ಭಾಗಗಳಲ್ಲಿ ಸೇಕಡ 25ರಂತೆ ಮತ್ತೆ ಕೆಲವು ಭಾಗಗಳಲ್ಲಿ ಸೇಕಡ 35ರಂತೆ ಹಾಕು ತ್ತಿದ್ದು, ಈಗ ಈ ತಾರತಮ್ಯವನ್ನು ತೆಗೆದುಹಾಕಿ, ರೈತರಿಗೆ ಪರಿಹಾರ ಒದಗಿಸಿಕೊಡಬೇಕೆಂಬ ದೃಷ್ಟಿ ಯಿಂದ 5 ಎಕರೆಯವರೆಗೆ ಖುಷ್ಕಿ ಜಮೀನು ಇರುವವರಿಗೆ ಕಂದಾಯದ ರಿಯಾಯಿತಿಯನ್ನು ತೋರಿಸಿ ದ್ದಾರೆ. ಪಂಜಾಬ್ ಮತ್ತು ಹರಿಯಾಣ ರಾಜ್ಯಗಳಲ್ಲೂ ಸಹ ಖುಷ್ಕಿ ಜಮೀನು ಬಹಳ ಕಡಿಮೆಯಿರು ವುದರಿಂದ ಅಲ್ಲಿ ಕಂದಾಯದ ವಿನಾಯಿತಿ ತೋರಿಸಿದ್ದಾರೆ. ಒಟ್ಟಿನಲ್ಲಿ ಹೇಳುವುದಾದರೆ ಈ ರಾಜ್ಯ ದಲ್ಲೂ ಕೂಡ ಆ ಒಂದು ರೀತಿಯ ರಿಯಾಯಿತಿಯನ್ನು ಕೊಡಬೇಕೆಂದು ಮಾನ್ಯ ಸದಸ್ಯರುಗಳಾದಂಥ ಬಸವರಾಜು, ವೆಂಕಟಗಿರಿಯಪ್ಪ ಇನ್ನೂ ಮೊದಲಾದವರು 5 ಎಕರೆಗಿಂತ ಕಡಿಮೆ ಜಮೀನು ಇರುವವ

ರಿಗೆ ಕಂದಾಯ ದ ವಿನಾಯಿತಿ ಕೊಡಬೇಕೆಂದು ಸೂಚನೆ ಮಾಡಿದರು. ಆ ರೀತಿ ಕೊಡುವುದಕ್ಕೆ ಏನಾದರೂ ಸಾಧ್ಯತೆ ಇದೆಯೇ ಎಂಬುದರ ಬಗ್ಗೆ ಲೆಕ್ಕಾಚಾರ ಹಾಕಿಸಿ ತರಿಸಿದ್ದೇನೆ. ಈ ಲೆಕ್ಕದ ಪ್ರಕಾರ ನಮ್ಮ ರಾಜ್ಯದಲ್ಲಿ ಐದು ಎಕರೆಗಳಿಗಿಂತ ಕಡಿಮೆ ಜಮೀನು ಇರತಕ್ಕಂಥವರು 41.45 ಪರ್‌ಸೆಂಟ್ ಇದ್ದಾರೆ. ಇವರುಗಳಿಗೆ ಕಂದಾಯದ ವಿನಾಯಿತಿ ತೋರಿಸಿದರೆ ಒಂದು ಕೋಟಿ ಎರಡು ಸಾವಿರದ ತೊಂಭತೊಂಭತ್ತು ರೂಪಾಯಿಗಳು ಸರ್ಕಾರಕ್ಕೆ ಬರುವ ಆದಾಯದಲ್ಲಿ ಕಡಿಮೆಯಾಗುತ್ತದೆ. 10 ಎಕರೆಗಳಿಗಿಂತ ಕಡಿಮೆಯಿರುವವರಿಗೆ ಕಂದಾಯದ ವಿನಾಯಿತಿ ತೋರಿಸಿದರೆ ಸರ್ಕಾರಕ್ಕೆ ಬರುವ ವರಮಾನದಲ್ಲಿ ರೂ. 1,14,96,583-61 ಪೈಸಾ ಕಡಿಮೆಯಾಗುತ್ತದೆ. ಮತ್ತು ಇದರಿಂದ 38 ಪರ್‌ಸೆಂಟ್ ಜನರಿಗೆ ಅನುಕೂಲವಾಗುತ್ತದೆ. ಅದೇ ರೀತಿ 15 ಎಕರೆಗಿಂತ ಕಡಿಮೆ 10 ಎಕರೆಗಿಂತ ಜಾಸ್ತಿ ಇರುವವರಿಗೆ ಕಂದಾಯದ ವಿನಾಯಿತಿಯನ್ನು ತೋರಿಸಿದರೆ ಸರ್ಕಾರಕ್ಕೆ ಬರುವ ವರಮಾನದಲ್ಲಿ 1,42,18,383 ರೂಪಾಯಿಗಳು ಕಡಿಮೆಯಾಗುತ್ತದೆ. ಇಲ್ಲಿಯವರೆಗೆ ಲೆಕ್ಕ ಹಾಕಿಸಿದ್ದೇನೆ. 10 ಎಕರೆಗಳಿಗಿಂತ ಕಡಿಮೆ ಇರುವ ರೈತರಿಗೆ ರಿಯಾಯಿತಿ ಕೊಡುವುದಾದರೆ ಪ್ರತಿ ಭಾಗಗಳು ಮತ್ತು ವಿಭಾಗಗಳಾಗಿ ಕನ್‌ಸಾಲಿಡೇಷನ್ ಅಂಡ್ ಪ್ರಿವೆನ್‌ಷನ್ ಆಫ್ ಫ್ರಾಗ್‌ಮೆಂಟೇಷನ್‌ಗೆ ಸಹಾಯ ಮಾಡಿದಹಾಗೆ ಆಗುವುದಿಲ್ಲ. ಕಂದಾಯ ಕೂಡ ಉತ್ಪತ್ತಿಯಮೇಲೆ ಹಾಕುತ್ತಿರುವುದರಿಂದ ಈಗಿರುವ ಈ ಪದ್ಧತಿಯನ್ನು ರದ್ದು ಮಾಡುವುದರಿಂದ ಕಷ್ಟವಾಗುತ್ತದೆಂದು ತಿಳಿದು ಈ ಬಗ್ಗೆ ಸಧ್ಯಕ್ಕೆ ಯಾವ ಕ್ರಮವನ್ನೂ ತೆಗೆದುಕೊಳ್ಳುವುಕ್ಕಾಗಲಿಲ್ಲ. ಒಟ್ಟಿನಲ್ಲಿ ಮಳೆಬೆಳೆಯಿಲ್ಲದೆ ಅಭಾವ ಉಂಟಾಗಿರುವ ಪ್ರದೇಶಗಳಲ್ಲಿ ಕಳೆದ ಮೂರು ವರ್ಷಗಳಿಂದ ಅಲ್ಲಿಯ ಜನರು ಕಂದಾಯ ಕೊಡುವುದು ಕಷ್ಟವಾಗಿವೆ. ಅಲ್ಲದೆ ಈ ವರ್ಷದಲ್ಲಿ ಪುನರ್ವಿಮರ್ಶೆಯಾಗಿರತಕ್ಕಂಥ ಕಂದಾಯದ ಹೆಚ್ಚಳ, ಸರ್‌ಚಾರ್ಜು ಎಲ್ಲವನ್ನೂ ಒಟ್ಟಿಗೆ ಕೇಳುವುದರಿಂದ ರೈತರಿಗೆ ಭಾರಿ ಭಾರವಾಗುತ್ತದೆಂದು ತಿಳಿದು ಎಲ್ಲಿ ಮಳೆ ಬೆಳೆಯಾಗಿಲ್ಲವೋ ಅಂತಹ ಭಾಗಗಳಲ್ಲಿ ಫಸಲಿನ ಪಹಣಿಯಿಲ್ಲದಿದ್ದರೂ ಕಂದಾಯದ ರಿಯಾಯಿತಿ ಕೊಡಬೇಕೆಂದು ಮಾನ್ಯ ಸದಸ್ಯರ ಅಭಿಪ್ರಾಯವಾಗಿತ್ತು. ರಿಮಿಷನ್ ಅಂಡ್ ಸಸ್‌ಪೆನ್‌ಷನ್ ರೂಲ್ಸನ್ನು ಏನು ಮಾಡಿದ್ದೇವೆ ಅದು ಬೇರೆ ಬೇರೆ ಭಾಗದಲ್ಲಿ ಬೇರೆ ಬೇರೆ ನಿಯಮಾವಳಿಗಳು ಇರುವುದರಿಂದ, ಮೂರು ವರ್ಷದ ಬಾಕಿಯನ್ನು ವಸೂಲು ಮಾಡುವುದಕ್ಕೆ ಬದಲಾಗಿ, ಮೊದಲನೆಯ ವರ್ಷ ಎಲ್ಲಿ 25 ಪರ್‌ಸೆಂಟ್‌ಗಿಂತ ಕಡಿಮೆ ಬೆಳೆಯಾಗಿದೆಯೋ ಅಂತಹ ಪ್ರದೇಶಗಳಲ್ಲಿ ಪೂರ್ಣವಾಗಿ ಕಂದಾಯವನ್ನು ವಜಾ ಮಾಡಬೇಕೆಂದು, 25 ರಿಂದ 37 ಪರ್‌ಸೆಂಟ್‌ವರೆಗೆ ಎಲ್ಲಿ ಬೆಳೆಯಾಗಿದೆಯೋ ಆ ಭಾಗದ ಕಂದಾಯವನ್ನು ಪೂರ್ಣವಾಗಿ ಮುಂದೂಡಬೇಕೆಂದು ಎಲ್ಲಿ 37 ರಿಂದ 50 ಪರ್‌ಸೆಂಟ್‌ವರೆಗೆ ಬೆಳೆಯಾಗಿದೆಯೋ ಆ ಭಾಗಗಳಲ್ಲಿ ಅರ್ಧ ಕಂದಾಯವನ್ನು ವಸೂಲು ಮಾಡಬೇಕೆಂದು ಒಂದು ನಿಯಮ ಮಾಡಿ ಈ ಬಗ್ಗೆ ಮೊನ್ನೆ ತೀರ್ಮಾನ ತೆಗೆದುಕೊಂಡಿದ್ದೇವೆ. ಈ ರೀತಿಯ ಒಂದು ಪರಿಹಾರವನ್ನು ಕೊಡುವುದರಿಂದ ಬಹುಮಟ್ಟಿಗೆ ಎಲ್ಲೆಲ್ಲಿ ಆಗಿಂದಾಗ್ಗೆ ಅಭಾವ ಪರಿಸ್ಥಿತಿ ಉಂಟಾಗುತ್ತದೋ, ಆ ಪ್ರದೇಶದ ಜನರಿಗೆ ಸ್ವಲ್ಪಮಟ್ಟಿಗೆ ಪರಿಹಾರ ಕೊಟ್ಟಹಾಗೆ ಆಗುತ್ತದೆಂದು ಭಾವಿಸಿಕೊಂಡಿದ್ದೇನೆ. ಈ ಒಂದು ದೃಷ್ಟಿಯಿಂದ ಕೆಲವು ಭಾಗಗಳಲ್ಲಿ 1965-66, 1966-67ನೇ ಸಾಲಿನಿಂದ ಕಂದಾಯದ ರಿಯಾಯಿತಿ ಕೊಡಬೇಕಾಯಿತು.

ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಈ ಒಂದು ರಿಯಾಯಿತಿಯನ್ನು 1964ನೆ ಸಾಲಿನಿಂದ ಜಾರಿಗೆ ಕೊಡುತ್ತೀರಾ?

ಶ್ರೀ ಬಿ. ರಾಚಯ್ಯ.—ಮೇಲೆ ಹೇಳಿದಂಥ ರಿಯಾಯಿತಿಗಳನ್ನು 1964ನೇ ಸಾಲಿನಿಂದ ಜಾರಿಗೆ ತರಬೇಕೆಂದು ಒಂದು ನಿಯಮಾವಳಿ ಮಾಡಿದ್ದೇವೆ. ಮತ್ತು ಪರಿಹಾರ ಕಾರ್ಯಕ್ರಮಗಳನ್ನು ಕೈಕೊಳ್ಳುವ ಕಾಲಕ್ಕೆ ಆಗಾಗ್ಗೆ ಅಭಾವ ಉಂಟಾಗತಕ್ಕಂಥ ಪ್ರದೇಶಗಳಲ್ಲಿ ಶಾಶ್ವತವಾಗಿರತಕ್ಕಂಥ ಖಾಯಂ ಪರಿಹಾರಗಳನ್ನು ಮಾಡಿಸಬೇಕೆಂದು ಮಾನ್ಯ ಸದಸ್ಯರುಗಳು ಸೂಚನೆ ಮಾಡಿದ್ದಾರೆ. ಬಹುಶಃ ಒಂದಲ್ಲ ಒಂದು ಭಾಗದಲ್ಲಿ ಇಡೀ ಮೈಸೂರು ಸಂಸ್ಥಾನದಲ್ಲೇ ಅಲ್ಲ, ಇಡೀ ಇಂಡಿಯಾ ದೇಶದಲ್ಲಿ ಪ್ರವಾಹದಿಂದ, ಮಳೆಯ ಅಭಾವದಿಂದ ಮತ್ತು ಪ್ರಕೃತಿಯ ವಿಕೋಪದಿಂದ ಕಷ್ಟಗಳು ಉಂಟಾಗುತ್ತಿವೆ. ಈ ಒಂದು ದೃಷ್ಟಿಯಿಂದ ನಮ್ಮ ಮೈಸೂರು ಸಂಸ್ಥಾನದಲ್ಲಿ ಯಾವಯಾವ ಭಾಗಗಳಲ್ಲಿ ಮಳೆಯ ಅಭಾವದಿಂದ ಬೆಳೆ ಹಾಳಾಗುತ್ತಿದೆಯೋ ಅಂತಹ ಪ್ರದೇಶಗಳಿಗೆ ರಾಮಮೂರ್ತಿ ಕಮಿಟಿಯವರು ಹೋಗಿ ನೋಡಿಕೊಂಡು ಬಂದು ಒಂದು ರಿಪೋರ್ಟ್ ಕೊಟ್ಟಿದ್ದಾರೆ. ಅದರಂತೆ ಒಬ್ಬ ಐ.ಎ.ಎಸ್. ಆಫೀಸರನ್ನು ಅಭಾವ ಪೀಡಿತ ಪ್ರದೇಶಗಳಿಗೆ ಕಳಿಸಿ ಅವರಿಂದ ಸಹ ಒಂದು ರಿಪೋರ್ಟ್ ತರಿಸಿಕೊಂಡಿದ್ದೇವೆ. ಆಗಾಗ್ಗೆ ಎಲ್ಲೆಲ್ಲಿ ಮಳೆಯ ಅಭಾವದಿಂದ ಬೆಳೆಗಳು ಹಾಳಾಗುತ್ತವೋ, ಅಂತಹ ಪ್ರದೇಶಗಳಲ್ಲಿ ಕೈಕೊಳ್ಳಲು 40 ಕೋಟಿ ರೂಪಾಯಿಗಳ ಕೆಲವಾರು ಯೋಜನೆಗಳನ್ನು ತಯಾರು ಮಾಡಿದ್ದೇವೆ. ಮತ್ತು ಇದೂ ಸಾಲುವುದಿಲ್ಲವೆಂದು ತಿಳಿದುಕೊಂಡು, ನಮ್ಮ ರಾಜ್ಯದ 19 ಜಿಲ್ಲೆಗಳ ಪೈಕಿ 13 ಜಿಲ್ಲೆಗಳಲ್ಲಿ ಆಗಿಂದಾಗ್ಗೆ ಮಳೆಯ ಅಭಾವ ಉಂಟಾಗುತ್ತದೆಂದು ತಿಳಿದು

(ಶ್ರೀ ಬಿ. ರಾಚಯ್ಯ)

ಕೊಂಡು, ಈ ಜಿಲ್ಲೆಗಳಲ್ಲಿ ದೊಡ್ಡ ದೊಡ್ಡ ನೀರಾವರಿ ಯೋಜನೆಗಳನ್ನು, ಸಣ್ಣ ಸಣ್ಣ ನೀರಾವರಿ ಯೋಜನೆಗಳನ್ನು ಕೈಕೊಳ್ಳಲು, ಬಾವಿಗಳನ್ನು ತೋಡಿಸಲು ಮತ್ತು ಸಾಯಿಲ್ ಕನ್ಸರ್‌ವೇಷನ್ ಮಾಡಿಸುವುದು, ಈ ರೀತಿಯಾದಂಥ ಕೆಲಸಗಳನ್ನು ಮಾಡಿಸಲು 280 ಕೋಟಿ ರೂಪಾಯಿಗಳ ಅಂದಾಜಿನಲ್ಲಿ ಒಂದು ಯೋಜನೆಯನ್ನು ತಯಾರು ಮಾಡಿದ್ದೇವೆ. ಆದರೆ ಕೇಂದ್ರ ಸರ್ಕಾರದವರು ಈ ಎಲ್ಲಾ ಕೆಲಸಗಳನ್ನೂ ಏಕಕಾಲದಲ್ಲಿ ಕೈಕೊಳ್ಳುವುದು ಕಷ್ಟವಾಗುತ್ತದೆ, ಅದಕ್ಕೋಸ್ಕರ ಈ ಎಲ್ಲಾ ಯೋಜನೆಗಳನ್ನೂ ಒಳಗೊಂಡಂಥ ಒಂದು ಯೋಜನೆಯನ್ನು ಬಿಜಾಪುರ ಜಿಲ್ಲೆಯ ನಾಲ್ಕು ತಾಲ್ಲೂಕ್‌ಗಳಲ್ಲಿ, ಚಿತ್ರದುರ್ಗ ಜಿಲ್ಲೆಯ ಮೂರು ತಾಲ್ಲೂಕ್‌ಗಳಲ್ಲಿ ಪ್ರಯೋಗ ಮಾಡೋಣ, ಆ ನಂತರ ದಲ್ಲಿ ಬೇರೆ ಕಡೆಗಳಲ್ಲಿ ನಡೆಸೋಣವೆಂದು ಹೇಳಿದ್ದಾರೆ. ನಮ್ಮ ಸರ್ಕಾರದವರು ಇನ್ನೂ ಹೆಚ್ಚು ಕಡೆ ಗಳಲ್ಲಿ ತೆಗೆದುಕೊಳ್ಳಬೇಕೆಂದು ಮತ್ತೆ ಕೇಂದ್ರ ಸರ್ಕಾರಕ್ಕೆ ಬರೆದಿದ್ದಾರೆ. ಆದರೆ ನಮ್ಮ ಸಂಸ್ಥಾನ ದಲ್ಲಿ ನಾವು ತೆಗೆದುಕೊಂಡಿರತಕ್ಕಂತಹ ಕಾರ್ಯಗಳು ಏನಿವೆ ಅವುಗಳಲ್ಲಿ ಕಳೆದ ಮೂರು ವರ್ಷಗಳಲ್ಲಿ ಬಹುಶಃ ಮೈನರ್ ಇರಿಗೇಶನಿನಲ್ಲಿ ಹೆಚ್ಚಿನ ರೀತಿಯಲ್ಲಿ ನಾವು ಕಾರ್ಯ ಸಾಧನೆ ಮಾಡಿದ್ದೇವೆ. ಅದರಲ್ಲೂ ಬಾವಿಗಳನ್ನು ತೋಡಿಸುವುದಕ್ಕೋಸ್ಕರ ರೈತರಿಗೆ ಹೆಚ್ಚಿನ ರೀತಿಯಲ್ಲಿ ಧನ ಸಹಾಯವನ್ನು ಒದಗಿಸಲಾಗಿದೆ. ಇವತ್ತಿನವರೆಗೆ ಎರಡು ಲಕ್ಷ ಮೂವತ್ತು ಸಾವಿರ ಬಾವಿಗಳು ಮಂಜೂರಾಗಿ, ಅದರಲ್ಲಿ 15 ಸಾವಿರ ಬಾವಿಗಳು ಮಾತ್ರ ಅಪೂರ್ಣವಾಗಿ ನಿಂತಿವೆ. ಒಟ್ಟು 20 ಸಾವಿರ ಬಾವಿಗಳನ್ನು ತೆಗೆಯಲು ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕುಗಳ ಮೂಲಕ ಹಣ ಕೊಡುವ ಏರ್ಪಾಡನ್ನು ಮಾಡಿಕೊಂಡಿದ್ದೇವೆ. ಮತ್ತು ಈ ಅಪೂರ್ಣವಾಗಿರತಕ್ಕ ಬಾವಿಗಳನ್ನು ಪೂರ್ಣಗೊಳಿಸುವುದಕ್ಕೆ ಕೊಡಬೇಕಾದ ಸುಮಾರು 45 ಲಕ್ಷ ರೂಪಾಯಿಗಳನ್ನು ಒದಗಿಸಿಕೊಟ್ಟಿದ್ದೇವೆ. ಎಲ್ಲೆಲ್ಲಿ ಕುಡಿಯುವ ನೀರಿನ ಅಭಾವ ಇದೆ ಅಲ್ಲಿ ಒದಗಿಸಲು ಕುಡಿಯುವ ನೀರಿನ ಬಾವಿಗಳನ್ನು ಆಳಪಡಿಸುವುದಕ್ಕೋಸ್ಕರ ಆರು ಲಕ್ಷ ರೂಪಾಯಿಗಳನ್ನು ಹೆಚ್ಚಿನ ರೀತಿಯಲ್ಲಿ ಕೊಟ್ಟಿದ್ದೇವೆ. ಮತ್ತು ಎಲ್ಲೆಲ್ಲಿ ಅಭಾವಕ್ಕೆ ಈಡಾಗ ತಕ್ಕ ಪ್ರದೇಶಗಳಿವೆ, ಅಲ್ಲಿ ಮುದುಕರಿಗೆ, ಗರ್ಭಿಣಿ ಸ್ತ್ರೀಯರಿಗೆ ಎಲ್ಲಾ ಪರಿಹಾರ ಕೊಡುವುದಕ್ಕೆ 5 ಲಕ್ಷ ರೂಪಾಯಿ ಹೆಚ್ಚುವರಿ ಕೊಟ್ಟಿದ್ದೇವೆ. ಕಳೆದ ಸಾರಿ ಈ ಒಂದು ಕ್ಷಾಮ ಪರಿಹಾರದ ವಿಷಯ ಮಾತನಾಡಿದಾಗ ಒಂದು ಕೋಟಿ ರೂಪಾಯಿ, 64-B ಫ್ಯಾಮಿನ್‌ನಲ್ಲಿ ಒದಗಿಸಿಕೊಟ್ಟಿದ್ದೇವೆಂದು ಹೇಳಿದ್ದೇನೆ. ಅದರಲ್ಲಿ 86 ಲಕ್ಷ ರೂಪಾಯಿಗಳನ್ನು ಸಂಸ್ಥಾನಾದ್ಯಂತ ಈ 64-B ಫ್ಯಾಮಿನಲ್ಲಿ ಒದಗಿಸಿಕೊಟ್ಟಿದ್ದೇವೆ. ಇದಲ್ಲದೆ, 217 ಮೈನರ್ ಇರಿಗೇಶನ್ ಕೆಲಸಗಳನ್ನು ಪಿ.ಡಬ್ಲ್ಯು.ಡಿ. ಮಂತ್ರಿಯವರು ಮಂಜೂರು ಮಾಡಿ ಕೆಲಸಕಾರ್ಯಗಳನ್ನು ಆ ಭಾಗದಲ್ಲಿ ಪ್ರಾರಂಭ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ. ತಾಲ್ಲೂಕು ಬೋರ್ಡು, ಪಂಚಾಯತಿ ಮತ್ತು ಇತರ ಇಲಾಖೆಗಳಲ್ಲಿ, ಅಭಾವ ಈಡಾಗತಕ್ಕ ಪ್ರದೇಶಗಳಲ್ಲಿ ಏನೇನು ಹಣ ಇದೆ, ಅವುಗಳನ್ನೆಲ್ಲಾ ಕ್ರೋಢೀಕರಿಸಿ ಆ ಒಂದು ಸಮಿತಿಯವರು ಪ್ಲಾನನ್ನು ಮಂಜೂರು ಮಾಡಬೇಕೆಂದು ಆದೇಶವನ್ನು ಕಳಿಸಿಕೊಟ್ಟಿದ್ದೇವೆ. ಮತ್ತು ಈ ಸಾಯಿಲ್ ಕನ್‌ಸರ್ವೇಶನ್‌ನಲ್ಲಿ ಕೆಲಸ ಮಾಡತಕ್ಕ ಕೂಲಿಗಾರರಿಗೆ ಕೊಡುತ್ತಿರುವ 1-30 ರೂಪಾಯಿ ಕೂಲಿ ಏನೂ ಗಿಟ್ಟುವುದಿಲ್ಲ ಎಂದು ಅದಕ್ಕೆ 50 ಪೈಸೆಯನ್ನು ಈ 64 ಫ್ಯಾಮಿನ್‌ನಲ್ಲಿ ಸೇರಿಸಿಕೊಳ್ಳಬೇಕೆಂದು ಮಾಡಿದ್ದೇವೆ. ಎಲ್ಲೆಲ್ಲಿ ಹುಲ್ಲು ದನಕರುಗಳಿಗೆ ಸಿಗುವುದಿಲ್ಲವೋ, ಅಲ್ಲಿಗೆ ಅದನ್ನು ತರಿಸಿಕೊಡುವುದಕ್ಕೆ ಜಿಲ್ಲಾಧಿಕಾರಿಗಳಿಗೆ ಸಾಕಷ್ಟು ಹಣವನ್ನು ಕೊಟ್ಟಿದ್ದೇವೆ. ಇಷ್ಟು ಹೇಳಿದರೂ, ಶಾಶ್ವತವಾದ ಪರಿಹಾರ ಆಗಿದೆಯೇ, ಇದು ತಾತ್ಕಾಲಿಕವಾದ ಪರಿಹಾರವಾಯ್ತು ಎಂದು ಮಾನ್ಯ ಸದಸ್ಯರುಗಳು ಹೇಳಬಹುದು. ಈ ಸಾಯಿಲ್ ಕನ್‌ಸರ್ವೇಶನ್ ಮೆಜರ್ಸ್ ಶಾಶ್ವತ ವಾದ ಪರಿಹಾರ, ಬಾವಿಗಳನ್ನು ಮಾಡುವುದು ಶಾಶ್ವತವಾದ ಪರಿಹಾರವೆಂದು ಹೇಳಬಹುದು. ಬೇರೆ ಶಾಶ್ವತವಾದ ಪರಿಹಾರವನ್ನು ಎಲ್ಲಾ ಕಡೆಗೂ ಕೊಡುವುದಕ್ಕಾಗುವುದಿಲ್ಲ. ಎಲ್ಲಾ ಕಡೆಗಳಲ್ಲೂ ಕೆರೆಗಳನ್ನು ಕೊಡುವುದಕ್ಕಾಗುವುದಿಲ್ಲ. ಆದರೆ ಒಟ್ಟಿನಲ್ಲಿ ಇಂಟೆನ್ಸಿವ್ ಸರ್ವೆ ಮಾಡಿ, ಎಲ್ಲೆಲ್ಲಿ ಟ್ಯೂಬ್ ವೆಲ್ಸ್‌ಗಳಿಗೆ ಸಾಧ್ಯವಿದೆ, ಅದನ್ನು ನಮ್ಮ ಜಿಯಲಾಜಿಕಲ್ ಇಲಾಖೆಯವರು ಮಾಡುತ್ತಿದ್ದಾರೆ ಆದ್ದರಿಂದ ಯಾವ ಭಾಗದಲ್ಲಿ ಆಗಾಗ್ಗೆ ಅಭಾವಕ್ಕೆ ಈಡಾಗತಕ್ಕ ಪ್ರದೇಶಗಳಿವೆಯೋ, ಅಂಥ ಕಡೆ ಗಳಲ್ಲಿ ಟ್ಯೂಬ್ ವೆಲ್ಸ್ ಮಾಡತಕ್ಕ ಯೋಜನೆ ಸರ್ಕಾರದ ಮುಂದೆ ಇದೆ. ಈ ಅಭಾವ ಪ್ರದೇಶಗಳಲ್ಲಿ ಅನೇಕ ಸರ್ಕಾರಿ ಸಾಲಗಳು ಬಾಕಿ ನಿಂತಿವೆ ಸರ್ಕಾರಿ ಸಾಲಗಳನ್ನು ಸ್ವಲ್ಪಮಟ್ಟಿಗೆ ಸುಲಭ ಕಂತಿನಲ್ಲಿ ವಸೂಲು ಮಾಡಬೇಕೆಂದು ನಮ್ಮ ಇಲಾಖೆಯ ಅಧಿಕಾರಿಗಳಿಗೆ ಆದೇಶ ಕೊಟ್ಟಿದ್ದೇವೆ. ಒಟ್ಟಿನಲ್ಲಿ ಲ್ಯಾಂಡ್‌ರೆವೆನ್ಯೂ ಅರಿಯರ್ಸ್ ಏಳು ಕೋಟಿ ಚಿಲ್ಲರೆ ರೂಪಾಯಿ ಇದ್ದುದು, ಕೇವಲ 78 ಲಕ್ಷ ಮಾತ್ರ ವಸೂಲಾಗಿದೆ. ಇನ್ನು 6 ಕೋಟಿ ಚಿಲ್ಲರೆ ಹಣ ಬಾಕಿ ಉಳಿದಿರುವುದರಿಂದ ತಾವು ತಿಳಿದುಕೊಳ್ಳಬಹುದು, ನಾವು ಕೋಯರ್ಸಿವ್ ಮೆಜರ್ ತೆಗೆದುಕೊಂಡಿಲ್ಲವೆಂದು. ಜನರ ಕಷ್ಟ ಸರ್ಕಾರಕ್ಕೆ ಗೊತ್ತಿರುವುದರಿಂದ ಸ್ವಲ್ಪಮಟ್ಟಿಗೆ, ಏನೋ ಕೇಳಿ, ಕೊಟ್ಟರೆ ತೆಗೆದುಕೊಳ್ಳಿ, ಎಂದು ಸೂಚನೆ ಮಾಡಿದ್ದೇವೆ.

ಮಾನ್ಯ ಸದಸ್ಯರನೇಕರು, ಕಂದಾಯ ವಸೂಲು ಮಾಡತಕ್ಕ ಕಾಲದಲ್ಲಿ ಅಧಿಕಾರಿಗಳಿಂದ ಅನೇಕ ಕಿರುಕುಳ ಇವೆಯೆಂದು ಹೇಳಿದರು. ಹೊರಗೆ ನೋಡುವುದಕ್ಕೆ ಬೆದರಿಸಿದರೂ, ಒಳಗಡೆ ಸಾಕಷ್ಟು ಕೆಲಸವಾಗಿಲ್ಲ. ಮಾನ್ಯ ದೊಡ್ಡನಗೌಡರು ಹೇಳಿದಂತೆ, ಒಬ್ಬ ಟ್ರಾಕ್ಟರ್ ತೆಗೆದುಕೊಂಡಿರ ತಕ್ಕವರು, ಹೆಚ್ಚು ಕಂದಾಯ ಕೊಡತಕ್ಕವರು, ಬಾಕಿಯನ್ನು ಕೇಳಿದಾಗ, ಸ್ವಲ್ಪಮಟ್ಟಿಗೆ ಮಾತಾಗಿ ಅವರ ಕಾರನ್ನು ಇಮ್ಮೂವಬಲ್ ಪ್ರಾಪರ್ಟಿಯಾಗಿ ತಿಳಿದುಕೊಂಡು ವಶಕ್ಕೆ ತೆಗೆದುಕೊಂಡು, ನಿಮ್ಮ ಕಂದಾಯ ಕೊಟ್ಟು ಬಿಡಿಸಿಕೊಂಡು ಹೋಗಬಹುದು ಎಂದು ಹೇಳಿದ್ದಾರೆ. ಆದ್ದರಿಂದ ಇಬ್ಬರಿಗೂ ಸ್ವಲ್ಪಮಟ್ಟಿನ ಘರ್ಷಣೆಯಾಗಿದೆ. ನಾನು ಇದನ್ನು ವಿಚಾರಣೆ ಮಾಡಿದೆ. ಆದರೂ ಕೂಡ ತಾಹಸೀಲ್ದಾರರು ಸ್ವಲ್ಪಮಟ್ಟಿಗೆ ಅಷ್ಟು ದೂರ ಹೋಗಬಾರದಿತ್ತು. ಇದನ್ನು ನಾನು ಅವರಿಗೆ ತಿಳಿಸಿದ್ದೇನೆ. ಆದರೂ ದೊಡ್ಡ ದೊಡ್ಡ ರೈತರೂ ಕೂಡ, ಮಳೆಯಾಗಿಲ್ಲ, ಬೆಳೆಯಾಗಿಲ್ಲವೆಂದು ಸರ್ಕಾರದಿಂದ ತೆಗೆದುಕೊಂಡಿರತಕ್ಕ ಸಾಲವನ್ನು ಕೊಡದಿದ್ದರೆ ಅದು ಬಹಳ ಕಷ್ಟ. ಆದ್ದರಿಂದ ತೆಗೆದುಕೊಂಡಿರತಕ್ಕ ಸಾಲವನ್ನು ಕೊಡುವುದಕ್ಕೆ ಮನಸ್ಸು ಮಾಡಬೇಕು. ಮತ್ತು ಸಹಕಾರ ಸಂಘಗಳ ಮುಖಾಂತರ ತೆಗೆದುಕೊಂಡಿರತಕ್ಕ ಅಲ್ಪಾವಧಿಯ ಸಾಲವನ್ನು ಮಧ್ಯಮಾವಧಿಯ ಹಾಗೆ ಪರಿವರ್ತನೆ ಮಾಡಿದರೆ ಅಭಾವ ಪೀಡಿತ ಪ್ರದೇಶಗಳಲ್ಲಿ ಅನುಕೂಲವಾಗುತ್ತದೆಂದು ಹೇಳಿದ್ದೇವೆ. ಕೆಲವು ಸಾಯಿಲ್ ಕನ್‌ಸರ್ವೇಶನ್ ಮೆಜರ್ಸ್ ತೆಗೆದುಕೊಳ್ಳುವುದಕ್ಕೆ ಏರ್ಪಾಡು ಮಾಡಿದ್ದೇವೆ. ಮತ್ತು ಬೆಂಕಿ, ಪ್ರವಾಹ ಇಂಥ ಅನಾಹುತಗಳಿಗೆ ಈಡಾಗತಕ್ಕ ಜನರಿಗೆ ಪರಿಹಾರವನ್ನು ಒದಗಿಸತಕ್ಕ ವಿಚಾರದಲ್ಲಿ ಕೆಲವು ಕಾಯಿದೆಗಳನ್ನು ಇಟ್ಟುಕೊಂಡಿದ್ದೇವೆ. ಅದನ್ನು ತಿದ್ದುಪಡಿ ಮಾಡುವುದಕ್ಕಾಗುವುದಿಲ್ಲವೇ ಎಂದು ಮಾನ್ಯ ಮುನಿಯಪ್ಪನವರು ಮತ್ತು ಇತರರು ಸೂಚನೆ ಮಾಡಿದರು. ಬಹುಶಃ ಅವರಿಗೆ ಈಗಾಗಲೇ ತಿಳಿದಿರಬಹುದು. ಬೆಂಕಿ ಬಿದ್ದ ಕಾಲದಲ್ಲಿ ತಾಹಸೀಲ್ದಾರವರಿಗೆ 25 ರೂಪಾಯಿ ಕೊಡತಕ್ಕದ್ದನ್ನು 50 ರೂಪಾಯಿಗೆ ಹೆಚ್ಚು ಮಾಡಿದ್ದೇವೆ. ಅಸಿಸ್ಟೆಂಟ್ ಕಮಿಾಶನರು 100 ರೂಪಾಯಿ ಡಿಪ್ಯೂಟಿ ಕಮಿಾಶನರು 250 ರೂಪಾಯಿ, ಡಿವಿಜನಲ್ ಕಮಿಾಶನರು 500 ರೂಪಾಯಿ ಕ್ಯಾಷ್ ಮೆಟೀರಿಯಲ್ಸ್ ಒಟ್ಟು ಕೊಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ. ಆದ್ದರಿಂದ ಈ ಪರಿಹಾರ ಸುಮಾರು ಎರಡು ಲಕ್ಷ 25 ಸಾವಿರದ 864 ರೂಪಾಯಿ. 67-68ರಲ್ಲಿ 7 ಲಕ್ಷ ಒದಗಿಸಿದ್ದೇವೆ ; 68—69ರಲ್ಲಿ 6ಲಕ್ಷ 30 ಸಾವಿರ ರೂಪಾಯಿ 32 Aid against Roods, and Rains : ಇದರಲ್ಲಿ 66-67ರಲ್ಲಿ 65, ಸಾವಿರದ 668, ರೂಪಾಯಿ 67-68ರಲ್ಲಿ ಮೂರು ಲಕ್ಷ, 68-69ರಲ್ಲಿ ನಾಲ್ಕು ಲಕ್ಷ ಒದಗಿಸಿಕೊಡುತ್ತೇವೆ. ಈಗ ಬೆಳಗಾಂನಲ್ಲಿ ಅಥವಾ ಬೆಂಗಳೂರಿನಲ್ಲಿ ಅಥವಾ ಬಿಜಾಪುರ, ಅಥನಿ, ಹರಪ್ಪನಹಳ್ಳಿಗಳಲ್ಲೆಲ್ಲ ಬೇರೆ ಬೇರೆ ರೀತಿಯ ಬೆಂಕಿ ಅನಾಹುತಕ್ಕೆ ಸಿಕ್ಕಿದರೂ ಕೂಡ ಅವರಿಗೆ ಬಡ್ಡಿ ಇಲ್ಲದ ಸಾಲವನ್ನು ಮತ್ತು ಮೆಟೀರಿಯಲ್ಸ್ ಕೊಟ್ಟಿದ್ದೇವೆ. ಒಟ್ಟಿನಲ್ಲಿ ಆಗಿರತಕ್ಕಂತಹ ನಷ್ಟವನ್ನು ಕೊಡಿಸಿಕೊಡುವ ಉದ್ದೇಶವಲ್ಲ. ಆದರೆ ಕಷ್ಟಕಾಲದಲ್ಲಿ ಸ್ವಲ್ಪಮಟ್ಟಿನ ಸಹಾಯವನ್ನು ಪರಿಹಾರ ರೂಪವಾಗಿ ಕೊಡಬೇಕೆನ್ನುವ ಉದ್ದೇಶದಿಂದ ಕೊಡುತ್ತಿದ್ದೇವೆ. ಮಹನೀಯರೆಲ್ಲ ಆಯಾ ಕ್ಷೇತ್ರದಲ್ಲಿ ಹೆಚ್ಚಿನ ರೀತಿಯಲ್ಲಿ ನೋಡಿಕೊಂಡರೆ ಬಹುಶಃ ಈತರಹ ಆಗುವುದಿಲ್ಲ. ಕಷ್ಟಕಾಲದಲ್ಲಿ ಮನುಷ್ಯನಿಗೆ ಒಂದು ಅನುಕಂಪ ತೋರಿಸಿ, ಅವನ ಕಷ್ಟದಲ್ಲಿ ಭಾಗಿಯಾದರೆ, ಅವನಿಗೆ ಹೆಚ್ಚು ಐಶ್ವರ್ಯ ಸಿಕ್ಕಿದಹಾಗೆ ಆಗುತ್ತದೆ, ಆ ದೃಷ್ಟಿಯಿಂದ ಅಧಿಕಾರಿಗಳು ನಿರ್ಲಕ್ಷ್ಯ ಮಾಡದೆ ಈ ಕೆಲಸಗಳನ್ನು ಮಾಡುತ್ತಿದ್ದಾರೆ. ಈ ಒಂದು ದೃಷ್ಟಿಯಿಂದ ಅನೇಕ ಸಂದರ್ಭಗಳಲ್ಲಿ ಇಂತಹ ಕಷ್ಟಕ್ಕೆ ಈಡಾಗಿರುವ ಜನಕ್ಕೆ ಆದಷ್ಟು ಬೇಗ ಪರಿಹಾರ ಕೊಡಬೇಕು ಎಂದು ಸೂಚನೆಗಳನ್ನು ಈಗಾಗಲೇ ಅಧಿಕಾರಿಗಳಿಗೆ ಕೊಟ್ಟಿದ್ದೇವೆ.

2-00 P.M.

ಶ್ರೀ ಎಚ್. ಬಿ. ಜ್ವಾಲನಯ್ಯ (ಹಾಸನ).—ಚಿಕ್ಕಮಗಳೂರು ಜಿಲ್ಲೆಗೆ ಪರಿಹಾರಕಾರ್ಯಗಳಿಗಾಗಿ ಸುಮಾರು ಒಂದೂವರೆ ಲಕ್ಷದಷ್ಟು ಹಣವನ್ನು ಸರಕಾರ ಕೊಟ್ಟಿದ್ದರೂ ಸರಕಾರ ಅದರಲ್ಲಿ 15 ಸಾವಿರದಷ್ಟನ್ನು ಕೂಡ ಅಲ್ಲಿನ ಅಧಿಕಾರಿಗಳು ಖರ್ಚು ಮಾಡಿಲ್ಲ. ಏಕೆ ಮಾಡಲಿಲ್ಲ ಎಂದರೆ, ಸರಕಾರದ ವಿವರಣೆಗಾಗಿ ಕಾಯುತ್ತಿದ್ದೇವೆ ಎಂದು ಹೇಳುತ್ತಾರೆ.

ಶ್ರೀ ಬಿ. ರಾಚಯ್ಯ.—ಚಿಕ್ಕಮಗಳೂರು ಜಿಲ್ಲೆಗಾಗಿ ಒಂದು ಲಕ್ಷದ ಅರವತ್ತು ಸಾವಿರದಷ್ಟು ರೂಪಾಯಿಗಳನ್ನು ಬಡ್ಡಿ ಇಲ್ಲದ ಸಾಲವಾಗಿ ಮತ್ತು ಐವತ್ತು ಸಾವಿರದಷ್ಟು ಕ್ರೆಡಿಟ್ ರಿಲೀಫ್ ಆಗಿ ಕೊಡಲಾಗಿದೆ ಮತ್ತು ಬೆಳಗಾಂ ಜಿಲ್ಲೆಯಲ್ಲಿ ಎಂಟು ಹತ್ತು ಸಾವಿರದಷ್ಟು ಹಣ ಕೊಡಬೇಕೆಂದೂ ಸೂಚನೆ ಕೊಡಲಾಗಿದೆ. ಆದರೆ ಇಲ್ಲಿ ಏನಾಗಿದೆ ಎಂದರೆ, ಕೆಲವು ಅಧಿಕಾರಿಗಳು ಕಷ್ಟದಲ್ಲಿರುವವರಿಗೆ ಹಂಚುವ ವಿಚಾರದಲ್ಲಿ ರಿಲೀಫ್ ರೂಲ್ಸ್ ಏನಿವೆ, ಅದರಂತೆಯೇ ಅನುಸರಿಸಿ ಕೊಡಬಹುದು. ಇದಕ್ಕಾಗಿ ಸರಕಾರದವರ ಸೂಚನೆಗಳನ್ನೇನೂ ಕಾಯುವ ಅವಶ್ಯಕತೆ ಇಲ್ಲ. ಆದರೆ ಕೆಲವು ಕಡೆಗಳಲ್ಲಿ

(ಶ್ರೀ ಬಿ. ರಾಚಯ್ಯ)

ಅಧಿಕಾರಿಗಳು ಸರಿಯಾಗಿ ಮಾನವೀಯತೆಯ ದೃಷ್ಟಿಯಿಂದ ಕೆಲಸ ಮಾಡುತ್ತಿಲ್ಲ ಎಂದು ನನಗೆ ತಿಳಿದು ಬಂದಿದೆ. ಅಂತಹವರ ಮೇಲೆ ಉಗ್ರವಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ನನ್ನ ಗಮನಕ್ಕೆ ಇಂತಹ ವಿಚಾರಗಳು ಬಂದಾಗ ಅಧಿಕಾರಿಗಳಿಗೂ ಸೂಕ್ತವಾದ ನಿರ್ದೇಶನಗಳನ್ನೂ ಕೊಡುತ್ತಿದ್ದೇವೆ.

ಇನ್ನು ಭೂಮಿಯನ್ನು ಸ್ವಾಧೀನ ಮಾಡುವ ಕಾಲದಲ್ಲಿ ಬಹಳ ನಿಧಾನವಾಗುತ್ತಿದೆ. ಇಲ್ಲಿಗೆ ಹೋಗತಕ್ಕ ಅಧಿಕಾರಿಗಳು ಕುಂಟರೂ ಆಗಿಲ್ಲ, ಮೋಟರೂ ಆಗಿಲ್ಲ, ಹೆಳವರೂ ಆಗಿಲ್ಲ. ಶ್ರೀಮತಿ ನಾಗರತ್ನಮ್ಮನವರು ನಂಜನಗೂಡಿನ ಒಂದು ಉದಾಹರಣೆಯನ್ನು ಇಲ್ಲಿ ತೆಗೆದುಕೊಂಡು ಹೇಳಿದರು ಎಂದು ನನಗೆ ಕಾಣುತ್ತದೆ. ಈ ದಿವಸ ಮೈಸೂರು ಸಂಸ್ಥಾನದಲ್ಲಿ ಪಟ್ಟಣಗಳನ್ನು ವಿಸ್ತರಣೆ ಮಾಡುವಾಗ ಆಗಲೀ ರಸ್ತೆಗಳನ್ನು ನಿರ್ಮಾಣ ಮಾಡುವುದರಲ್ಲಿಯಾಗಲೀ, ಬಂದರುಗಳನ್ನು ಮಾಡುವಾಗ ಆಗಲಿ, ರೈಲ್ವೆ ಲೈನುಗಳನ್ನು ಹಾಕುವಾಗ ಆಗಲೇ ಭೂಮಿಯನ್ನು ಅಲ್ಲಲ್ಲಿ ಅಕ್ವೈರು ಮಾಡಿಕೊಳ್ಳಬೇಕಾಗಿ ಬರುತ್ತದೆ. ಮಂಗಳೂರು ಹಾರ್ಬರು ಮಾಡುವಾಗ ಸುಮಾರು ಐದು ಸಾವಿರ ಎಕರೆಗಳಷ್ಟು ಭೂಮಿಯನ್ನು ಇಲ್ಲಿ ಸ್ವಾಧೀನಪಡಿಸಿಕೊಳ್ಳಬೇಕಾಗಿ ಬಂದಿದೆ. ಆದರೆ ಇಂದು ರೈತ ತನ್ನ ಭೂಮಿಯನ್ನು ಬಹಳ ಪವಿತ್ರವಾದುದು ಎಂದು ಅದನ್ನು ಅವನು ಬಿಡುವುದಕ್ಕೆ ಇಷ್ಟಪಡುವುದಿಲ್ಲ. ಇದರಿಂದ ಕೆಲವು ಕಡೆಗಳಲ್ಲಿ ಭೂಮಿಯನ್ನು ಸ್ವಾಧೀನ ಮಾಡಿಕೊಳ್ಳುವುದು ತಡವಾಗುತ್ತಿದೆ. ಇಂತಹ ಕಡೆಗಳಲ್ಲಿ ಸೂಕ್ತವಾದ ಕಾರ್ಯಕ್ರಮ ತೆಗೆದುಕೊಳ್ಳಬೇಕಾದರೆ ನಾನಾಗಲೇ ಹೇಳಿದಹಾಗೆ ಅಧಿಕಾರಿಗಳು ಕೆಲಸ ಮಾಡುವುದೂ ನಿಧಾನವಾಗುತ್ತಿದೆ. ಇದರ ಜೊತೆಗೆ ಹಳ್ಳಿಗಳಲ್ಲಿ ಭೂಮಿಗಳನ್ನು ಬಿಡಬೇಕು ಎಂದು ಹೇಳಿದರೆ ಅವರೂ ಬೇಗನೆ ಬಿಡುವುದಿಲ್ಲ. ಇದೂ ಅಲ್ಲದೆ ಕೆಲವು ಕಡೆಗಳಲ್ಲಿ ಪಂಚಾಯಿತಿಗಳ ಗ್ರೂಪುಗಳೂ ಇರುತ್ತವೆ, ಅವರು ಇಲ್ಲದ ತಕರಾರುಗಳನ್ನು ಹೂಡುತ್ತಾರೆ, ಇದರಿಂದ ಕೆಲಸ ನಿಧಾನವಾಗುತ್ತದೆ. ಮತ್ತು ಕಾಂಪನ್‌ಸೇಷನ್ ಕೊಡುವಾಗ ಹಣ ಸಾಕಷ್ಟು ಕೊಟ್ಟಿಲ್ಲ ಎಂದು ಕೆಲವರು ಕೋರ್ಟುಗಳಿಗೆ ಹೋಗುತ್ತಾರೆ. ಇದರಿಂದಲೂ ನಿಧಾನವಾಗುತ್ತದೆ. ಇದಕ್ಕಾಗಿ ಕೆಲವು ಕಡೆ ನಮ್ಮ ದೇಶದಲ್ಲಿ ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳು ಎಂದು ಎಲ್ಲಿ ಮಾಡುತ್ತಿದ್ದಾರೆ ಅಲ್ಲಿ ಭೂಮಿಯನ್ನು ಸ್ವಾಧೀನ ಮಾಡುವುದಕ್ಕಾಗಿ ಒಬ್ಬರು ಸ್ಪೆಷಲ್ ಆಫೀಸರ್ ಎನ್ನುವ ಅಧಿಕಾರಿಗಳನ್ನು ನೇಮಕ ಮಾಡಿದ್ದೇವೆ. ಆದರೆ ಸಬ್ ಡಿವಿಜನ್ನುಗಳಲ್ಲಿರುವ ಅಧಿಕಾರಿಗಳು ವಹಿಸುವಷ್ಟು ಉತ್ಸಾಹ ಹಾಗೂ ಆಸಕ್ತಿಗಳನ್ನು ಇಲ್ಲಿರುವ ಸ್ಪೆಷಲ್ ಆಫಿಸರುಗಳು ಕೆಲವು ಕಡೆ ವಹಿಸಿ ಕೆಲಸ ಮಾಡುತ್ತಿಲ್ಲ. ಇಂತಹ ಸ್ಪೆಷಲ್ ಆಫೀಸರುಗಳನ್ನು ಹೇಮಾವತಿ, ಘಟಪ್ರಭಾ ಹಾಗೂ ಮಲಪ್ರಭಾ ಇಂತಹ ಯೋಜನೆಗಳನ್ನು ಮಾಡುವ ಜಾಗಗಳಲ್ಲಿ ಒಬ್ಬೊಬ್ಬರು ಸ್ಪೆಷಲ್ ಅಧಿಕಾರಿಗಳನ್ನು ಚೆನ್ನಾಗಿ ಕೆಲಸ ಮಾಡುತ್ತಾರೆ ಎಂದು ವರ್ಗ ಮಾಡಿದರೆ ಅಂತಹ ಅಧಿಕಾರಿಗಳು ಅಲ್ಲಿಗೆ ಹೋಗುವುದಕ್ಕೇ ಇಷ್ಟಪಡುವುದಿಲ್ಲ. ಹೇಮಾವತಿ ಯೋಜನೆಗಾಗಿ ಒಬ್ಬರು ಅಧಿಕಾರಿಗಳನ್ನು ಮೊದಲು ಅಲ್ಲಿಗೆ ನೇಮಕ ಮಾಡಲಾಗಿತ್ತು. ಅವರೂ ಅಲ್ಲಿಗೆ ಹೋಗಲಿಲ್ಲ, ಹೀಗೆ ಮೂರು ಜನರನ್ನು ಅಲ್ಲಿಗೆ ವರ್ಗ ಮಾಡಿದರೂ ಅವರು ಹೋಗಲಿಲ್ಲ. ಆದರೆ ಒಬ್ಬರಿಗೆ ಮಾತ್ರ ಅವರು ಹೋಗದೇ ಇದ್ದರೆ ಸಸ್‌ಪೆಂಡು ಮಾಡುತ್ತೇವೆ ಎಂದು ಎಚ್ಚರಿಕೆ ನೋಟೀಸನ್ನು ಕೂಡ ನಾನು ಕಳುಹಿಸಿದ್ದೇನ. ಹೀಗೆ ಅಧಿಕಾರಿಗಳು ನಿರುತ್ಸಾಹದಿಂದ ಕೆಲಸ ಮಾಡುವುದರಿಂದ ಕೆಲಸಗಳು ನಿಧಾನವಾಗುತ್ತವೆ. ಕೆಲವು ಅಧಿಕಾರಿಗಳು ಚೆನ್ನಾಗಿ ಕಲಸ ಮಾಡುವವರನ್ನು ವರ್ಗ ಮಾಡುವುದಕ್ಕೆ ಹೋದರೆ ಅವರು ನಾನು ಚೆನ್ನಾಗಿ ಕೆಲಸ ಮಾಡುತ್ತಿದ್ದೇನೆ ಎಂದು ನನಗೆ ಪನಿಷ್‌ಮೆಂಟು ಕೊಡುವುದಕ್ಕಾಗಿ ಇಂತಹ ನೇಮಕ ಮಾಡುತ್ತೀರಾ ಎಂದು ಕೇಳುತ್ತಾರೆ. ಉತ್ಸಾಹ ಇರುವಂತಹ ಅಧಿಕಾರಿಗಳು ಹೋಗಿ ಕೆಲಸ ಮಾಡಿದರೆ ಭೂಮಿಯನ್ನು ಸ್ವಾಧೀನ ಮಾಡಿಕೊಳ್ಳುವಾಗ ಅದರ ಕೆಲಸಗಳು ಬೇಗ ಆಗುತ್ತವೆ. ಇಲ್ಲದೇ ನಿರುತ್ಸಾಹದಿಂದ ಇರುವ ಅಧಿಕಾರಿಗಳು ಹೋದರೆ ಅಲ್ಲಿ ಕೆಲಸಗಳು ನಿಧಾನವಾಗುತ್ತವೆ. ಅಲ್ಲದೆ ಕೆಲವು ಅಧಿಕಾರಿಗಳನ್ನು ಕಡ್ಡಾಯವಾಗಿ ಹೋಗಲೇಬೇಕು ಎಂದು ಒತ್ತಾಯ ಮಾಡಿದರೆ ಅದಕ್ಕೆ ಅನೇಕ ರೀತಿಯ ಅಪಾದನೆಗಳು ನನ್ನಲ್ಲಿಗೆ ಬರುತ್ತವೆ. ಹಾಗೂ ನಿಮಗೂ ತಿಳಿದಿರುವ ಹಾಗೆ ಇದರಲ್ಲಿ ಜಾತೀಯತೆಯಿಂದ ಹೀಗೆ ವರ್ಗ ಮಾಡುತ್ತಿದ್ದಾರೆ ಹಾಗೂ ಅವರ ಪಕ್ಷದವರಿಗೇ ಸೇರಿಧವರು ಎಂದು ವರ್ಗ ಮಾಡುತ್ತಿದ್ದಾರೆ ಇತ್ಯಾದಿ ಕಾರಣಗಳಿಂದ ಇಲ್ಲಿಗೆ ಅಧಿಕಾರಿಗಳು ಹೋಗುವುದು ನಿಧಾನವಾಗುತ್ತದೆ ಮತ್ತು ಅಲ್ಲಿನ ಕೆಲಸಗಳೂ ನಿಧಾನವಾಗುತ್ತದೆ. ಇದಕ್ಕಾಗಿ ನಾನು ಒಂದು ವಿಚಾರ ಹೇಳಬೇಕಾಗಿದೆ. ಪಿ. ಡಬ್ಲ್ಯು. ಡಿ. ಇಲಾಖೆಯಲ್ಲಿ ಯಾರಾದರೂ ಅಧಿಕಾರಿಗಳು ಹೊಸ ಪ್ರಾಜೆಕ್ಟ್ ಕೆಲಸಗಳಿಗೆ ಹೋಗುವಾಗ ಅಂತಹ ಅಧಿಕಾರಿಗಳಿಗೆ ಸ್ಪೆಷಲ್ ಪ್ರಾಜೆಕ್ಟ್ ಅಲೋಯನ್ಸ್ ಎಂದು ಕೊಡುತ್ತಾರೆ. ಅದರಂತೆ ನಮ್ಮ ರೆವೆನ್ಯೂ ಇಲಾಖೆಯಲ್ಲೂ ಕೂಡ ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳುವಾಗ ಸ್ಪೆಷಲ್ ಆಫೀಸರು ಎಂದು ನೇಮಕ ಮಾಡುವವರಿಗೆ ಒಂದು ರೀತಿ

ಯಾವ ಇನ್‌ಸೆಂಟೀವ್ ಇರುವಂತೆ ಆಸಕ್ತಿ ವಹಿಸಿ ಕೆಲಸ ಮಾಡುವ ಅಧಿಕಾರಿಗಳಿಗೆ ಇಂತಹ ಸ್ಪೆಷಲ್ ಅಲೋಯನ್ಸ್‌ಗಳನ್ನು ಕೊಡಬೇಕು ಎಂದು ನಾನು ಪೇ ಕಮಿಷನ್ನಿನವರಿಗೂ ಬರೆದಿದ್ದೇನೆ. ಆದುದರಿಂದ ನಾನು ಶ್ರೀಮತಿ ನಾಗರತ್ನಮ್ಮನವರಿಗೆ ಹೇಳುವುದು ಸ್ವಲ್ಪಮಟ್ಟಿಗೆ ಅಧಿಕಾರಿಗಳಿಂದ ಕೆಲಸ ನಿಧಾನವಾಗುತ್ತದೆ. ಒಳ್ಳೆಯ ಅಧಿಕಾರಿಗಳು ಉತ್ಸಾಹದಿಂದ ಕೆಲಸ ಮಾಡುವವರಿಗೆ ಒಂದು ರೀತಿಯಾದ ಇನ್‌ಸೆಂಟೀವ್ ಬರುವಂತೆ ಸ್ಪೆಷಲ್ ಅಲೋಯನ್ಸ್‌ಗಳನ್ನು ಕೊಡಬೇಕೆಂದು ಪೇ ಕಮಿಷನ್ನಿನವರಿಗೆ ರೆಫರ್ ಮಾಡಲಾಗಿದೆ. ಈ ವರ್ಷ ಲ್ಯಾಂಡ್ ಅಕ್ವಿಸಿಷನ್‌ಗೋಸ್ಕರ ಈಚೆಗೆ ಹೊರಡಿಸಿದ ನೋಟಿಫಿಕೇಷನ್ನಿನಂತೆ ಎಷ್ಟು ಕಾಗದ ಪತ್ರಗಳು ಬಂದವು ಎಂದರೆ, 1-4-67ರ ವರೆಗೆ 3,069 ಪೇಪರುಗಳು ಬಂದಿವೆ. ಇದರಲ್ಲಿ ಸುಮಾರು 2,600 ಚಿಲ್ಲರೆ ವ್ಯವಹಾರಗಳು ಮುಗಿದಿವೆ. ಇನ್ನೂ 300 ಚಿಲ್ಲರೆ ಪೇಪರುಗಳು ಇನ್ನೂ ನಿರ್ಧಾರವಾಗುವುದರಲ್ಲಿದೆ ಮತ್ತು 150 ಕಾಗದಗಳನ್ನು ಇನ್ನು ಒಂದು ತಿಂಗಳಲ್ಲಿ ಇತ್ಯರ್ಥ ಮಾಡಿ ಮುಗಿಸುತ್ತೇವೆ. ಮತ್ತು ಇದೇ ರೀತಿಯಾಗಿ ತಾಲ್ಲೂಕು ಮಟ್ಟದಲ್ಲಿ, ಅಸಿಸ್ಟೆಂಟ್ ಕಮಿಷನವರ ಮಟ್ಟದಲ್ಲಿ ಹಾಗೂ ಜಿಲ್ಲಾಧಿಕಾರಿಗಳ ಮಟ್ಟದಲ್ಲಿ ಇರುವ ಎಲ್ಲ ಅಂಕೆ ಅಂಶಗಳನ್ನೂ ಇಲ್ಲಿ ಕೊಡಲಾಗಿದೆ. ಇದನ್ನು ನೋಡಿದರೆ ಲ್ಯಾಂಡ್ ಅಕ್ವಿಸಿಷನ್ ಕೇಸುಗಳು ಇನ್ನು ಮುಂದೆ ನಿಧಾನವಾಗದ ರೀತಿಯಲ್ಲಿ ತ್ವರಿತವಾಗಿ ಕೆಲಸಗಳು ನಡೆಯುವುದಕ್ಕೆ ನಿಯಮಗಳನ್ನೂ ಕೂಡ ಸೂಕ್ತ ರೀತಿಯಲ್ಲಿ ಮಾಡಿ ಅದರಂತೆ ಮೂರು ವರ್ಷಗಳೊಳಗೆ ಇದರ ಕೆಲಸಗಳನ್ನೆಲ್ಲಾ ಮುಗಿಸಬೇಕು ಎಂದು ಮಾಡಲಾಗುತ್ತಿದೆ ಮತ್ತು ಎಲ್ಲ ಜಿಲ್ಲಾಧಿಕಾರಿಗಳಿಗೂ ಇದರ ಬಗ್ಗೆ ಸೂಚನೆಗಳನ್ನೂ ಕಳುಹಿಸಿ ಕೊಡಲಾಗಿದೆ.

ಮಾನ್ಯ ಸದಸ್ಯರಾದ ಶ್ರೀಮಾನ್ ದೇವೇಗೌಡರು ಇಲ್ಲಿ ಒಂದು ಸಲಹೆಯನ್ನು ಕೊಟ್ಟರು. ಲ್ಯಾಂಡ್ ಅಕ್ವಿಸಿಷನ್ ಕೆಲಸದಲ್ಲೇ ಆಗಲೇ ಅಥವಾ ಬೇರೆ ಯಾವ ಕೆಲಸದಲ್ಲೇ ಆಗಲೀ ಸರಕಾರ ಅಧಿಕಾರಿಗಳನ್ನು ನೇಮಕ ಮಾಡಿದಮೇಲೆ ಅಂತಹ ಅಧಿಕಾರಿಗಳಮೇಲೆ ಎಲ್ಲ ಜವಾಬುದಾರಿಗಳನ್ನೂ ಹಾಕಬೇಕು ಮತ್ತು ಆ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡದೇ ಇದ್ದ ಪಕ್ಷದಲ್ಲಿ ಅದರಿಂದಾಗುವ ನಷ್ಟಗಳಿಗೆ ಆ ಅಧಿಕಾರಿಗಳೇ ಜವಾಬುದಾರರು ಎನ್ನುವ ಒಂದು ಸೂಚನೆ ಕೊಟ್ಟಿದ್ದಾರೆ. ಇದೊಂದು ಸೂಕ್ತವಾದ ಸಲಹೆ. ಸರಕಾರ ಕೂಡ ಯಾವ ಅಧಿಕಾರಿಗಳಿಂದ ಕೆಲಸಗಳು ನಿಧಾನವಾಗಿ ಆಗುತ್ತಿವೆ ಅಂತಹ ಅಧಿಕಾರಿಗಳಿಂದ ಸರಕಾರಕ್ಕೆ ನಷ್ಟಗಳಾದರೆ ಅದರ ಜವಾಬುದಾರಿಯನ್ನು ಅವರಮೇಲೆ ಹಾಕುವುದಕ್ಕೆ ಪ್ರಯತ್ನ ಮಾಡುತ್ತೇವೆ ಎಂದು ಇಲ್ಲಿ ತಿಳಿಸಲು ಇಷ್ಟಪಡುತ್ತೇನೆ. ಮತ್ತು ಅಕ್ವಿಸಿಷನ್ ಕೆಲಸ ಮಾಡುವ ಅಧಿಕಾರಿಗಳು ಹುರುಪು ಹಾಗೂ ಉತ್ಸಾಹಗಳಿಂದ ಕೆಲಸ ಮಾಡತಕ್ಕವರು ಇರಬೇಕು ಎಂದು ಮಾನ್ಯ ಸದಸ್ಯರಾದ ಶ್ರೀಮತಿ ನಾಗರತ್ನಮ್ಮನವರು ಹೇಳಿದಂತೆ ಅಧಿಕಾರಿಗಳನ್ನು ಹಾಕಲು ಪ್ರಯತ್ನ ಮಾಡುತ್ತೇವೆ ಎಂದು ಅವರಿಗೆ ಇಲ್ಲಿ ತಿಳಿಸುತ್ತೇನೆ.

ಇನ್ನು ಭೂಮಿ ಹಂಚಿಕೆ ವಿಚಾರದಲ್ಲಿ ಆಗತಕ್ಕ ನಿಧಾನ ಹಾಗೂ ಇದರಲ್ಲಿರತಕ್ಕ ಲಂಚ ರುಷುವತ್ತುಗಳ ಬಗ್ಗೆ ಅನೇಕರು ಹೇಳಿದ್ದಾರೆ. ಮೈಸೂರು ಸಂಸ್ಥಾನದಲ್ಲಿ ಈಗಿರತಕ್ಕ ಅಂಕೆಗಳ ಪ್ರಕಾರ ಆರು ಲಕ್ಷ ಚಿಲ್ಲರೆ ಎಕರೆಗಳಷ್ಟು ಇದೆ. ಇದರಲ್ಲಿ ಅನೇಕ ಕಡೆಗಳಲ್ಲಿ ಅಕ್ರಮಗಳಾಗುತ್ತಿರುವುದು ನಿಜ. ಇದರಲ್ಲಿ ಸುಮಾರು ಒಂದು ಲಕ್ಷದ ಇಪ್ಪತ್ತೇಳು ಸಾವಿರ ಎಕರೆಯಷ್ಟು ಭೂಮಿಯನ್ನು ಕೆಲವರು ದುರುಪಯೋಗಮಾಡಿಕೊಂಡು ಒತ್ತುವರಿ ಮಾಡಿದ್ದಾರೆ ಹಾಗೂ ಅಕ್ರಮ ಪ್ರವೇಶ ಮಾಡಿದ್ದಾರೆ ಎಂದೂ ತಿಳಿದು ಬರುತ್ತದೆ. ಸುಮಾರು ಆರು ಲಕ್ಷ ಚಿಲ್ಲರೆಯಷ್ಟು ಸಾಗುವಳಿಗೆ ಇರುವ ಭೂಮಿಯಲ್ಲಿ ಇಷ್ಟು ಭೂಮಿಯನ್ನೂ ಯಾರಿಗೂ ಕೊಡಿಸಲಿಲ್ಲ, ಇದುವರೆಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಕೇಳಿದರು. ನಮಗೆ ಐದು ಭಾಗಗಳು ಬಂದುದರಿಂದ ಐದು ವಿಧವಾದ ದಾರಖಾಸ್ತು ನಿಯಮಗಳಿದ್ದವು. ಇವನ್ನೆಲ್ಲಾ ಏಕರೂಪವಾಗಿ ಮಾಡಿ ಈಗ ಪ್ರಕಟ ಮಾಡಿದ್ದೇವೆ. ಇದರಂತೆ ಎಲ್ಲೆಲ್ಲಿ ಜಮೀನುಗಳಿವೆಯೋ ಅಲ್ಲೆಲ್ಲಾ ಅಳತೆ ಮಾಡಿಸಿ ಅದರಲ್ಲಿದ್ದ ಮಾಲ್ಕಿ ಮರಗಳನ್ನು ಕಡಿಸಿ ಸಾಗು ಮಾಡಲು ಎಷ್ಟು ಭೂಮಿ ಸಿಗುತ್ತದೆ ಅದರ ಹದ್ದುಬಸ್ತುಗಳನ್ನು ಮಾಡಲು ಆಯಾ ಊರುಗಳಲ್ಲಿರುವ ತಾಲ್ಲೂಕುಗಳಲ್ಲಿ ಪ್ರಕಟಮಾಡಲಾಗಿದೆ. ಈ ವರ್ಷ ಸ್ವಲ್ಪ ಭೂಮಿಯನ್ನು ಕೊಡುವುದು ನಿಧಾನವಾಗಿದೆ. ಈಗ ಏಕರೂಪವಾದ ನಿಯಮಗಳನ್ನು ಮಾಡಿರುವುದರಿಂದ ಅಧಿಕಾರಿಗಳು ಅದರಂತೆ ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲು ಒಂದು ಸೆಲ್ಲನ್ನು ಏರ್ಪಾಡು ಮಾಡಲಾಗಿದೆ. ಸೆಲ್‌ನಲ್ಲಿರುವ ಅಧಿಕಾರಿಗಳು ಯಾವ ಯಾವ ಅಧಿಕಾರಿಗಳು ಕಾಯಿದೆ ಪ್ರಕಾರವಾಗಿ ಭೂಮಿಗಳನ್ನು ಹಂಚಿಲ್ಲ ಎಲ್ಲಿ ದುರುಪಯೋಗಗಳು ಆಗುತ್ತಿವೆ ಅದನ್ನು ಆಗಾಗ್ಗೆ ಪರಿಶೀಲನೆ ಮಾಡಲು ಅನುಕೂಲವಾಗುವಂತೆ ಇಂತಹ ಒಂದು ಸೆಲ್ ಏರ್ಪಾಡು ಮಾಡಲಾಗಿದೆ. ಈ ದೃಷ್ಟಿಯಿಂದ ಭೂಮಿಯ ಹಂಚಿಕೆ ಬೇಗ ಮಾಡಲು ಸಹಾಯವಾಗುತ್ತದೆ ಎಂದು ಮಾಡುತ್ತಿದ್ದೇವೆ. ಇನ್ನು ಮುಂದೆ ತ್ವರಿತವಾಗಿ ಹಂಚುವಿಕೆ ಕೆಲಸಗಳನ್ನು ನಡೆಸುವ ವ್ಯವಸ್ಥೆ ಮಾಡುತ್ತೇವೆ ಮತ್ತು ಈಗಾಗಲೇ ಅರಣ್ಯ ಪ್ರದೇಶಗಳಲ್ಲಿದ್ದ ಸುಮಾರು 83 ಸಾವಿರ ಎಕರೆಗಳಷ್ಟು

(ಶ್ರೀ ಬಿ. ರಾಚಯ್ಯ)

ಭೂಮಿಯನ್ನು ರೆವೆನ್ಯೂ ಇಲಾಖೆಗೆ ವರ್ಗಾಯಿಸಿ ಅವುಗಳನ್ನು ಸರ್ವೆ ಮಾಡಿ ಅಲ್ಲಿರುವ ಮರಗಳನ್ನೂ ಕತ್ತರಿಸುವ ಕೆಲಸಗಳನ್ನೂ ಮಾಡುತ್ತಿದ್ದಾರೆ. ಇನ್ನು ಮುಂದೆ ಆದಷ್ಟು ಬೇಗ ಮಾಡಲು ಪ್ರಯತ್ನ ಮಾಡುತ್ತೇವೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಶೇಕಡ 60 ರಷ್ಟು ಪ್ರದೇಶ ಅರಣ್ಯವಾಗಿದೆ, ಆದುದರಿಂದ ಅರಣ್ಯ ಪ್ರದೇಶವನ್ನು ಸಾಗುವಳಿ ಮಾಡುವುದಕ್ಕೆ ಕೊಡಬೇಕು ಎಂದು ಉತ್ತರ ಕನ್ನಡ ಜಿಲ್ಲೆಯಿಂದ ಬಂದಿರ ತಕ್ಕಂಥ ಮಾನ್ಯ ಸದಸ್ಯರಾದ ಶ್ರೀಮಾನ್ ಜಾಲಿಸಟ್ಟಿಗಿಯವರು ಹೇಳಿದರು. ಭೂಮಿಕೊಡದೇ ಇದ್ದರೆ ಉಳಿಗಾಲವಿಲ್ಲ ಎಂದು ಅವರು ಹೇಳಿದರು. ಒಂದು ಲಕ್ಷ ಎಕರೆ ಭೂಮಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಸಾಗುವಳಿಯಾದ ಭೂಮಿಗೆ ಲಗತ್ತಾಗಿ ಇದೆ. ಎರಡು ಮೂರು ಎಕರೆ ಒಬ್ಬರಿಗೆ ಕೊಡುವುದರ ಬದಲು ಗುಂಪು ಗುಂಪಾಗಿ 200, 300 ಎಕರೆ ಭೂಮಿ ಒಟ್ಟಿಗೆ ಕೊಡುತ್ತೇವೆ. ಈ ಕೆಲಸಕ್ಕಾಗಿ ಸಿಬ್ಬಂದಿ ನೇಮಕ ಮಾಡಿದ್ದೇವೆ. ಇದರಲ್ಲಿ ಕಾಫಿ ತೋಟ ಮಾಡಿ ಕಾಫಿ ಬೆಳೆಯುವುದಕ್ಕೆ ಅವಕಾಶ ಮಾಡಿ ಕೊಟ್ಟಿದ್ದೇವೆ. ಇದಲ್ಲದೆ ಕರಾವಳಿ ಪ್ರದೇಶದಲ್ಲಿ ಗೋಡಂಬಿ ಬೆಳೆಯುವುದಕ್ಕೆ ಅವಕಾಶ ಕಲ್ಪಿಸಿ ಕೊಟ್ಟಿದ್ದೇವೆ. ಕೆಲವು ಕಡೆ ಮೈದಾನ ಪ್ರದೇಶದಲ್ಲಿ ಭೂಮಿ ಕೊಡತಕ್ಕಂಥ ಕಾಲದಲ್ಲಿ ಪಕ್ಕಾ ಪೋಡು ಮಾಡದೇ ಇರುವುದರಿಂದ ಕಾಗದದ ಮೇಲೆ ಮಂಜೂರಾಗದೆ ಕೆಲವರು ಭೂಮಿಯ ಮೇಲೆ ಇರುತ್ತಾರೆ. ಕೆಲವು ಕಡೆ ವ್ಯಾಜ್ಯ ಪ್ರಾರಂಭ ಆಗುವ ಪರಿಸ್ಥಿತಿ ಬಂದಿದೆ. ಇದನ್ನು ಸರಿಯಾಗಿ ತೀರ್ಮಾನ ಮಾಡಿ ಭೂಮಿ ಹಂಚಿಕೆ ಮಾಡಬೇಕು ಎಂದು ಗೊತ್ತು ಮಾಡಿದ್ದೇವೆ. ಇದರಿಂದ ಸ್ವಲ್ಪ ನಿಧಾನವಾಗಿದೆ. ಮುಂದಿನ ವರ್ಷ ಒಂದು ಲಕ್ಷ ಎಕರೆ ಭೂಮಿ ಎಲ್ಲ ಕಡೆ ಹಂಚಿಕೆ ಯಾಗಬೇಕು ಎಂದು ಮಾಡಿದೆ. ಮುಂದಿನ ಬಜೆಟ್ ಅಧಿವೇಶನದಲ್ಲಿ ಇದರ ಬಗ್ಗೆ ವರದಿ ಕೊಡುತ್ತೇನೆ ಎಂದು ಇಷ್ಟು ಮಾತ್ರ ತಿಳಿಸುತ್ತೇನೆ.

ಕೆಲವು ಕಡೆ ಅತಿಕ್ರಮ ಪ್ರವೇಶ ಮಾಡಿ ಭೂಮಿ ಸಾಗುವಳಿ ಮಾಡಿದ್ದಾರೆ. ಪಹಾಣಿ ಬರೆದಿದ್ದರೂ ಕೂಡ ಭೂಮಿ ಇನ್ನೊಬ್ಬರ ಹೆಸರಿನಲ್ಲಿ ಇರುತ್ತವೆ. ಯಾರು ಸಾಗು ಮಾಡುತ್ತಾರೆ ಅಂಥವರಿಗೆ ಭೂಮಿ ಖಾಯಂ ಪಡಿಸುವ ವಿಚಾರದಲ್ಲಿ ಶ್ರೀಮಾನ್ ವಿ. ಎನ್. ಪಾಟೀಲ್‌ರವರು ಸಲಹೆ ಮಾಡಿದ್ದಾರೆ. ಸರ್ವೆ ಮಾಡಿದ್ದಾಗಿದ್ದರೆ ನಿಯಮದ ಪ್ರಕಾರ ಕೊಡಬೇಕಾಗುತ್ತದೆ. ಇದನ್ನು ಸರಿಯಾಗಿ ಪರಿಶೀಲನೆ ಮಾಡುವುದಕ್ಕೆ ಸಾಕಷ್ಟು ಸಿಬ್ಬಂದಿ ನೇಮಕ ಮಾಡಿದೆ.

ಇನಾಮ್ ಅಬಾಲಿಷನ್ ಮಾಡತಕ್ಕಂಥ ಕಾಲದಲ್ಲಿ ಇನಾಮುದಾರರಿಗೆ ಸಹಾಯವಾಗುವ ರೀತಿಯಲ್ಲಿ ಭೂಮಿ ಕೊಡಲಾಗಿದೆ, ಹಾಗು ಹೆಚ್ಚು ಪರಿಹಾರ ಧನ ಇನಾಮುದಾರರಿಗೆ ಕೊಟ್ಟಿದೆ ಎಂದು ಶ್ರೀಮಾನ್ ವೆಂಕಟಗಿರಿಯಪ್ಪನವರು ಪ್ರಸ್ತಾಪ ಮಾಡಿದರು. ಇನಾಮ್ ಅಬಾಲಿಷನ್ ಕಾನೂನು ಐದು ಭಾಗದಲ್ಲಿ ಐದು ತರಹ ಇದೆ. ಈಗಾಗಲೇ 4200 ಚಿಲ್ಲರೆ ಹಳ್ಳಿಗಳಲ್ಲಿ ಸರ್ವೇ ಕೆಲಸ ನಡೆದಿದೆ. 4 ಲಕ್ಷ ಎಕರೆ ಭೂಮಿಯನ್ನು ಗೇಣಿದಾರರಿಗೆ ಹಂಚಿದೆ. ಒಂದು ಲಕ್ಷ ಚಿಲ್ಲರೆ ಎಕರೆ ಭೂಮಿ ಬಗ್ಗೆ ಭೂ ಮಾಲೀಕರಿಗೆ ಇನಾಮುದಾರರಿಗೆ 1.85 ಲಕ್ಷ ರೂಪಾಯಿ ಹಣವನ್ನು ಪರಿಹಾರ ಧನವಾಗಿ ಇದುವರೆಗೆ ಕೊಟ್ಟಿದ್ದೇವೆ. 85 ಲಕ್ಷ ರೂಪಾಯಿ ಪರಿಹಾರ ಧನ ಇನ್ನೂ ಕೊಡಬೇಕಾಗಿದೆ. ಇನಾಮ್ ರದ್ದಿಯಾತಿ ಮಾಡತಕ್ಕಂಥ ವಿಷಯದಲ್ಲಿ ಸರಕಾರದವರು ಅತ್ಯಂತ ಆಸಕ್ತಿಯಿಂದ ತೀವ್ರ ಕೆಲಸ ಮಾಡಿದ್ದಾರೆ. ಉಳಿದಿರತಕ್ಕಂಥ ಕೆಲಸ ಕೆಲವು ಕಡೆ ಅಂದರೆ, ಹೈದರಾಬಾದ ಜಹಗೀರ ಬಗ್ಗೆ ಉಳಿದಿದೆ.

ಇನ್ನು ಇನಾಮುದಾರರು ಗೇಣಿದಾರನ ಭೂಮಿಯನ್ನು ಆಕ್ರಮವಾಗಿ ಆಕ್ರಮಿಸಿಕೊಂಡಿದ್ದಾರೆ ಎಂದು ನನಗೆ ಯಾರೂ ತಿಳಿಸಿಲ್ಲ. ಒಂದು ವೇಳೆ ಅದನ್ನು ತಿಳಿಸಿದ ಪಕ್ಷದಲ್ಲಿ ಗೇಣಿದಾರರಿಗೆ ರಕ್ಷಣೆ ಕೊಡಲು ನಾನು ಪ್ರಯತ್ನ ಮಾಡುತ್ತೇನೆ. ಕಾಯಿದೆಯಿಂದ ಗೇಣಿದಾರನಿಗೆ ತೊಂದರೆಯಾದರೆ ಹಾಗು ಭೂ ಮಾಲೀಕರು ಕೋರ್ಟಿಗೆ ಹೋದರೆ ಪ್ರತಿಯೊಬ್ಬ ಗೇಣಿದಾರನಿಗೆ ಬೇಕಾಗಿರತಕ್ಕಂಥ ಲಾಯರನ್ನು ಸರಕಾರ ಒದಗಿಸಿ ಕೊಡಬೇಕು ಎಂದು ಒಂದು ತಿದ್ದುಪಡಿ ಮಾಡಿದ್ದೇವೆ. ಇದರಿಂದ ಗೇಣಿದಾರನ ಹಿತ ರಕ್ಷಣೆಯಾಗುತ್ತದೆ. ಅನೇಕ ಲಾಯರುಗಳು ದುಡ್ಡು ತೆಗೆದುಕೊಳ್ಳದೆ ಗೇಣಿ ದಾರನ ಸಲುವಾಗಿ ಕೆಲಸ ಮಾಡಬೇಕು. ಈ ರೀತಿ ಹೆಚ್ಚಿಗೆ ಕೆಲಸ ಮಾಡಿದರೆ ನಮ್ಮ ದೇಶದಲ್ಲಿ ವರ್ಗ ರಹಿತ ಸಮಾಜ ಬೇಗ ಬರುತ್ತದೆ. ಸರಕಾರದ ವತಿಯಿಂದ ಏನು ಮಾಡುವುದಕ್ಕೆ ಸಾಧ್ಯವಿದೆಯೋ ಅದನ್ನು ಸರಕಾರ ಮಾಡಲಿ. ಆ ರೀತಿ ಪ್ರಯತ್ನ ಮಾಡಿ ಗೇಣಿದಾರನಿಗೆ ರಕ್ಷಣೆ ಕೊಡಲು ಪ್ರಯತ್ನ ಮಾಡಿದ್ದೇವೆ. ವಿಲೇಜ್ ಆಫೀಸರರಿಗೆ ಕೊಡಬೇಕಾದ ಭೂಮಿ ಇದ್ದರೆ ವಾಪಸ್ಸು ಕೊಡುವುದಕ್ಕೆ ಅವರು ಸರಕಾರಕ್ಕೆ ಅರ್ಜಿ ಹಾಕಬೇಕು. ಒಂದು ವೇಳೆ ಅವರು ಅರ್ಜಿ ಹಾಕದೇ ಇದ್ದರೆ ಅವರ ವಾರಸುದಾರರಿಗೆ ಭೂಮಿ ಹಂಚಬೇಕು ಎಂದು ತಿದ್ದುಪಡಿಯಲ್ಲಿ ತಿಳಿಸಿದೆ. ಪರಿಹಾರ ಧನ ಪಡೆಯಲು ಗ್ರಾಮಾಧಿಕಾರಿಗಳಿಗೆ ಸಾಕಷ್ಟು ಸಮಯ ಕೊಟ್ಟಿದೆ. ಇನ್ನೂ ಆರು ತಿಂಗಳು ಸಮಯ

ಕೊಟ್ಟಿದೆ. ಎಷ್ಟು ಭೂಮಿ ವಾಪಸ್ಸು ಕೊಟ್ಟಿದೆ ಈ ವಿಷಯ ಕುರಿತು ಆಗಾಗ್ಗೆ ರಿಪೋರ್ಟ್ ತರಿಸತಕ್ಕಂಥ ವ್ಯವಸ್ಥೆ ಮಾಡಿದ್ದೇವೆ. ಭೂಮಿಯನ್ನು ವಾಪಸ್ಸು ಕೊಡತಕ್ಕಂಥ ಕಾಲದಲ್ಲಿ ತೋಟಿ ತಳವಾರರುಗಳಿಂದ ಈಗಾಗಲೇ ಭೂಮಿಯನ್ನು ಬರೆಸಿಕೊಳ್ಳುತ್ತಿದ್ದಾರೆ. ಅವರು ಮಾರಾಟ ಮಾಡಲು ಅಡ್ಡಿ ಮಾಡಬೇಕು ಎಂದು ಮಾನ್ಯ ಸದಸ್ಯರಾದ ಶ್ರೀಮಾನ್ ಮುನಿಯಪ್ಪನವರು ತಿಳಿಸಿದ್ದಾರೆ. 15 ವರ್ಷ ಈ ಭೂಮಿಯನ್ನು ಪರಭಾರೆ ಮಾಡಕೂಡದು ಎಂದು ತಿಳಿಸಿದ್ದೇವೆ. ಈ ಅವಧಿಯಲ್ಲಿ ಭೂಮಿ ಕೊಂಡುಕೊಂಡರೆ ಸರಕಾರ ವಾಪಸ್ಸು ತೆಗೆದುಕೊಳ್ಳಬೇಕು ಎಂದು ಈ ಮಾನ್ಯ ಸಭೆಯಲ್ಲಿ ಕಳಿಸಿರುವ ಒಂದು ಖೋತಾ ನಿರ್ಣಯದಲ್ಲಿ ಸೂಚಿಸಿದೆ. ತುಮಕೂರು ಜಿಲ್ಲೆಯಲ್ಲಿ ತೋಟಿ ಇನಾಮು ಜಮೀನನ್ನು ಕೊಂಡುಕೊಂಡಿದ್ದಾರೆ ಎಂದು ತಿಳಿಸಿ ಇದರ ಬಗ್ಗೆ ವಿಚಾರಣೆ ಮಾಡಿ ಭೂಮಿ ಸರಕಾರ ತೆಗೆದುಕೊಳ್ಳಬೇಕು ಎಂದು ಹೇಳಿದ್ದಾರೆ. ಕೊಂಡುಕೊಂಡ ಭೂಮಿಯಿಂದ ಅವರನ್ನು ಹೊರದೂಡಬೇಕು ಎಂದು ಮಾಡಿದ್ದಾರೆ. ತೋಟಿ ತಳವಾರ ಇನಾಮ್ ಜಮೀನುಗಳ ವಿಚಾರದಲ್ಲಿ ಕಾಯಿದೆ ಉಲ್ಲಂಘನೆ ಮಾಡಿ ಪರಭಾರೆ ಮಾಡಿದರು ಎಂದು ಕಂಡುಬಂದರೆ ಅದನ್ನು ಸರಕಾರದ ಗಮನಕ್ಕೆ ತಂದರೆ ಕಾಯಿದೆ ಪ್ರಕಾರ ಅದನ್ನು ವಾಪಸ್ಸು ತೆಗೆದುಕೊಂಡು ಬೇರೆಯವರಿಗೆ ಹಂಚುವುದಕ್ಕೆ ವ್ಯವಸ್ಥೆ ಮಾಡುತ್ತೇವೆ ಎಂದು ಈ ಸಂದರ್ಭದಲ್ಲಿ ಅತಿ ವಿನಯದಿಂದ ತಿಳಿಸಲು ಇಷ್ಟಪಡುತ್ತೇನೆ.

ಇನ್ನು ಸ್ಟ್ಯಾಂಪ್ಸ್ ವಿಚಾರ. ಇದನ್ನು ಅನೇಕರು ಪ್ರಸ್ತಾಪ ಮಾಡಿದ್ದಾರೆ. ಇದು ರಿಜಿಸ್ಟ್ರೇಷನ್ ಡಿಪಾರ್ಟ್‌ಮೆಂಟಿಗೆ ಸಂಬಂಧಪಟ್ಟದ್ದು. ಈಗ ಇರತಕ್ಕಂಥ ರೀತಿಯಲ್ಲಿ ಸ್ಟ್ಯಾಂಪ್ಸ್ ಸಾಕಷ್ಟು ಸಿಕ್ಕುತ್ತಾ ಇಲ್ಲ. ಸ್ಟ್ಯಾಂಪ್ಸ್ ವಿಚಾರದಲ್ಲಿ ಅಲ್ಲಲ್ಲಿ ಕಳ್ಳ ವ್ಯಾಪಾರ ನಡೆಯುತ್ತಿದೆ, ಅದನ್ನು ಸರಿಯಾಗಿ ವ್ಯವಸ್ಥೆ ಮಾಡಬೇಕು ಎಂದು ಪ್ರಸ್ತಾಪ ಮಾಡಿದರು. ಈ ವರ್ಷ ಇಂಡೆಂಟ್ ಮಾಡಿದ ಅಂಕಿಅಂಶಗಳನ್ನು ಕೊಟ್ಟರೆ ಸರಕಾರ ಏನು ಪ್ರಯತ್ನ ಮಾಡಿದೆ ಎನ್ನುವುದನ್ನು ತಾವು ತಿಳಿದುಕೊಳ್ಳಬಹುದು. ಕಳೆದ ವರ್ಷಕ್ಕಿಂತ ಸುಮಾರು ಎರಡರಷ್ಟು ಜಾಸ್ತಿಯಾಗಿದೆ. ನಾಸಿಕದಲ್ಲಿರುವ ಕಂಟ್ರೋಲರ್ ಆಫ್ ಸ್ಟ್ಯಾಂಪ್ಸ್ ಅವರು ನಮಗೆ ಸಾಕಷ್ಟು ಸ್ಟ್ಯಾಂಪ್‌ಗಳನ್ನು ಒದಗಿಸಿಕೊಟ್ಟಿದ್ದಾರೆ. ನಮ್ಮ ಇಲಾಖೆಯ ಒಬ್ಬ ಅಧಿಕಾರಿಯನ್ನು ನಾಸಿಕಕ್ಕೆ ಕಳುಹಿಸಿಕೊಟ್ಟಮೇಲೆ ಸ್ಟ್ಯಾಂಪುಗಳ ಸಪ್ಲೈ ಹೆಚ್ಚಾಗಿ ಆಗಿದೆ. ಕಳೆದ ವರ್ಷ ನಾಲ್ಕು ಕೋಟಿ ರೂಪಾಯಿ ಬೆಲೆ ಬಾಳುವ ಸ್ಟ್ಯಾಂಪುಗಳು ಬಂದಿದೆ. ಈ ವರ್ಷ ಆರು ಕೋಟಿ ಚಿಲ್ಲರೆ ರೂಪಾಯಿಗಳ ಸ್ಟ್ಯಾಂಪುಗಳು ಈಗಾಗಲೇ ಒದಗಿಸಲ್ಪಟ್ಟಿವೆ. 1965–66ರಲ್ಲಿ 13,38,875 ಛಾಪಾ ಕಾಗದಗಳು, 1966–67ರಲ್ಲಿ 19,31,416 ಛಾಪಾ ಕಾಗದಗಳು ಮತ್ತು 1967–68ರಲ್ಲಿ 28,43,078 ಛಾಪಾ ಕಾಗದಗಳು ನಮಗೆ ಬಂದಿವೆ. ಈಗ ಸಬ್ ರಿಜಿಸ್ಟ್ರಾರ್, ಮತ್ತು ಸಬ್ ಟ್ರೆಜರಿ ಆಫೀಸರುಗಳು ಸಾದಾ ಕಾಗದದಲ್ಲಿ ಬರೆದ ಪತ್ರಗಳನ್ನು, ಟ್ರೆಜರಿಗೆ ಹಣ ತುಂಬಿದ ಬಗ್ಗೆ ಚಲನ್ ತಂದುಕೊಟ್ಟರೆ, ರಿಜಿಸ್ಟರ್ ಮಾಡಿಕೊಳ್ಳಬಹುದೆಂದು ತಿಳಿಸಲಾಗಿತ್ತು. ಇವರ ಜೊತೆಗೆ ಹೆಡ್ ಕ್ವಾರ್ಟರ್ಸ್ ಅಸಿಸ್ಟೆಂಟರಿಗೂ ಕೂಡ ಇದೇ ರೀತಿಯ ಅಧಿಕಾರವನ್ನು ಕೊಟ್ಟಿದೆ. ಈ ರೀತಿಯಲ್ಲಿ ಸೂಪರಿಂಟೆಂಡೆಂಟ್ ಆಫ್ ಸ್ಟ್ಯಾಂಪ್ಸ್, ಬೆಂಗಳೂರು, ಇವರು 1966–67ರಲ್ಲಿ 3·50 ಲಕ್ಷ ಪತ್ರಗಳನ್ನು ಸುಮಾರು 30 ಲಕ್ಷ ರೂಪಾಯಿಗಳಷ್ಟನ್ನು ಎಂಬಾಸ್ ಮಾಡಿದ್ದಾರೆ. ಈ ವರ್ಷ 28 ಲಕ್ಷ ರೂಪಾಯಿಯ ಮೌಲ್ಯ 28 ಲಕ್ಷ ಪತ್ರಗಳನ್ನು ಎಂಬಾಸ್ ಮಾಡಿದ್ದಾರೆ.

ಕಾಗದದ ಅಭಾವವಿರುವ ಈ ಕಾಲದಲ್ಲಿ ಪರದೇಶಗಳಿಂದ ಕಾಗದವನ್ನು ತರಿಸಬೇಕು. ಅಲ್ಲಿಂದ ಬರುವ ಸರಬರಾಯಿ ಕಡಮೆ ಇರುವುದರಿಂದ ಅದನ್ನು ಹೇಗೆ ಪರಿಹಾರ ಮಾಡಬೇಕು ಎಂದು ಯೋಚನೆ ಮಾಡಿ ಈ ತರಹ ಮಾಡುವುದನ್ನು ಜಾರಿಗೆ ತಂದಿದ್ದೇವೆ. ಅದರಿಂದ ಸ್ವಲ್ಪಮಟ್ಟಿಗೆ ಪರಿಹಾರ ದೊರಕಿತು ಎಂದು ನಾನು ತಿಳಿದುಕೊಂಡಿದ್ದೇನೆ. ಇದಲ್ಲದೆ ಪರದೇಶಗಳಿಂದ ಕಾಗದ ಬರುವುದಕ್ಕೆ ಇನ್ನು ಮುಂದೆ ನಾವು ಕಾಯಬೇಕಾಗಿಲ್ಲ, ಸ್ಥಳೀಯವಾಗಿ ಇಲ್ಲಿಯೇ ಅಂತಹ ಕಾಗದದ ತಯಾರಿಕೆಗೆ ಪ್ರಯತ್ನ ಮಾಡಿರುವುದರಿಂದ ಇನ್ನು ಮುಂದೆ ಹೆಚ್ಚು ತೊಂದರೆಯಾಗಲಾರದು ಎಂದು ಹೇಳಿದ್ದಾರೆ. ಇದರಿಂದ ಬಹುಮಟ್ಟಿಗೆ ಛಾಪಾ ಕಾಗದಗಳ ಅಭಾವ ಬೇಗ ಪರಿಹಾರವಾಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಈಗ ಇರತಕ್ಕ ಸ್ಟ್ಯಾಂಪುಗಳನ್ನು ವೆಂಡರುಗಳು ತೆಗೆದುಕೊಂಡು, ಅವರ ಹತ್ತಿರ ಇದ್ದರೂ ತಮ್ಮಲ್ಲಿಲ್ಲ, ಬೇರೆ ಊರಿನಿಂದ ತರಿಸಿಕೊಡಬೇಕಾಗುತ್ತದೆ ಎಂದು ಸತ್ಯವನ್ನು ಮರೆಮಾಚಿ ಜನರ ಹತ್ತಿರ ಹಣವನ್ನು ಹೆಚ್ಚಾಗಿ ವಸೂಲ್ಮಾಡುತ್ತಿದ್ದಾರೆಂದು ಮಾನ್ಯ ಸದಸ್ಯರು ತಿಳಿಸಿದ್ದಾರೆ. ಅದಕ್ಕೋಸ್ಕರ ಟ್ರೆಜರಿಗಳಲ್ಲಿ ಸರ್ಕಾರದಿಂದಲೇ ಸ್ಟ್ಯಾಂಪುಗಳ ಮಾರಾಟ ಮಾಡಬೇಕು ಎಂದು ಕಳೆದ ವರ್ಷವೇ ಯೋಚನೆ ಮಾಡಿದೆವು. ಆದರೆ ಟ್ರೆಜರಿ ಇಲಾಖೆಯಲ್ಲಿ ಸ್ವಲ್ಪಮಟ್ಟಿಗೆ ಕೆಲಸಕಾರ್ಯಗಳು ಹೆಚ್ಚಾಗಿವೆ ಎಂದು ತಡ ಮಾಡಿದರು. ಕೆಲವು ಬ್ಯಾಂಕುಗಳು ಈ ಕೆಲಸ ಮಾಡಲು ಮುಂದೆ ಬಂದಿವೆ, ಕೆಲವು ಟ್ರೆಜರಿಗಳವರೂ ಈ ವರ್ಷದಿಂದ ಈ ಕೆಲಸವನ್ನು ಪ್ರಾರಂಭ ಮಾಡುವುದಾಗಿ ಒಪ್ಪಿಕೊಂಡಿದ್ದಾರೆ. ಬಹುಶಃ ಇದರಿಂದ ವೆಂಡರುಗಳೂ ಎಚ್ಚರಿಕೆ ತೆಗೆದುಕೊಂಡು ವರ್ತಿಸುತ್ತಾರೆಂದು ನಿರೀಕ್ಷಿಸುತ್ತೇನೆ. ವೆಂಡರುಗಳು ತಮ್ಮಲ್ಲಿ ಪ್ರತಿ ದಿನ ಯಾವ ಮೌಲ್ಯದ

(ಶ್ರೀ ಬಿ. ರಾಚಯ್ಯ)

ಛಾಪಾ ಕಾಗದಗಳು ಇವೆ ಎನ್ನುವುದರ ಬಗ್ಗೆ ಸ್ಟಾಕ್ ಲೆಕ್ಕ ಇಡಬೇಕು. ಹಾಗೆ ಇಡದೆ ಇದ್ದರೆ ಅವರಿಂದ ವಾಪಸು ತೆಗೆದುಕೊಳ್ಳಬೇಕೆಂದು ಇನ್‌ಸ್ಪೆಕ್ಟರ್ ಜನರಲ್ ಆಫ್ ರಿಜಿಸ್ಟ್ರೇಷನ್ ಅವರಿಗೆ ತಿಳಿಸಿದ್ದೇವೆ. ಇದರಿಂದ ವೆಂಡರುಗಳೂ ಎಚ್ಚತ್ತು ಒಳ್ಳೆಯ ರೀತಿಯಿಂದ ನಡೆದುಕೊಳ್ಳುತ್ತಾರೆಂದು ಭಾವಿಸಿದ್ದೇನೆ. ಇಲ್ಲದೆ ಇದ್ದರೆ ಅವರನ್ನು ಕಿತ್ತುಹಾಕಿ ಸರ್ಕಾರದಿಂದ ಮ್ಯಾನೇಜ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಮಾತ್ರ ಈ ಮಾನ್ಯ ಸಭೆಯಲ್ಲಿ ನಿವೇದಿಸಿಕೊಳ್ಳುತ್ತೇನೆ.

ಸರ್ವೆ ಅಂಡ್ ಸೆಟಲ್‌ಮೆಂಟ್ ಇಲಾಖೆಯಲ್ಲಿ ರೀಕ್ಲಾಸಿಫಿಕೇಷನ್‌ಗೋಸ್ಕರ ಇದ್ದಂಥ ಸಿಬ್ಬಂದಿಯನ್ನು ಹಾಕಿದ್ದರಿಂದ ಸಾಕಷ್ಟುಮಟ್ಟಿಗೆ ಹದ್ದುಬಸ್ತು ಅಳತೆ ಮಾಡುವುದು ಇವೆಲ್ಲ ಆಗಿವೆ. ಫೀಲ್ಡ್ ಕೆಲಸ ನಿಧಾನವಾಗಿ ಸುಮಾರು ಒಂದು ಲಕ್ಷ ಬಾಕಿ ಉಳಿದಿತ್ತು, ಬುಕ್ ಸರ್ಚ್ ಆಫೀಸಿನಲ್ಲಿ 1,40,000 ಬಾಕಿ ಉಳಿದಿತ್ತು. ಈಗ ಅದರಲ್ಲಿ ಅರ್ಧ ಭಾಗದಷ್ಟು ಕೆಲಸವನ್ನು ನಿರ್ವಹಿಸಿದ್ದು ಉಳಿದ ಕೆಲಸ ನಡೆಯುತ್ತಿದೆ. ಪ್ರತಿ ಜಿಲ್ಲೆಯಲ್ಲಿಯೂ ಮ್ಯುಟೇಷನ್ ಮತ್ತು ರಿಕಾರ್ಡ್ ಆಫ್ ರೈಟ್ಸ್ ಕೆಲಸವನ್ನು ಇಂದಿನವರೆಗೂ ತರುವುದಕ್ಕೆ ಸಾಕಷ್ಟು ಸಿಬ್ಬಂದಿಯನ್ನು ನೇಮಕ ಮಾಡಿದ್ದೇವೆ. ಈಗ 1500 ಜನ ಸರ್ವೇಯರುಗಳು ಕೆಲಸ ಮಾಡುತ್ತಿದ್ದಾರೆ. ಮದ್ರಾಸಿನಲ್ಲಿ ಐದು ಸಾವಿರ ಜನರಿದ್ದಾರೆ. ಅದಕ್ಕಿಂತ ದೊಡ್ಡದಾದ ನಮ್ಮ ಸಂಸ್ಥಾನದಲ್ಲಿ 1500 ಜನ ಇದ್ದಾರೆ. ಹದ್ದುಬಸ್ತು ಪರೀಕ್ಷೆ ಮಾಡುವುದು, ಹೊಸ ಭೂಮಿಯನ್ನು ಅಳೆಯತಕ್ಕದ್ದು, ಕೆರೆ ಅಂಗಳ, ಒತ್ತುವರಿ ಮಾಡಿರುವುದು, ಸಿಟಿ ಸರ್ವೆ, ಊರುಗಳ ಸರ್ವೆ ಇವುಗಳನ್ನೆಲ್ಲ ಮಾಡಬೇಕಾದ ಪಕ್ಷದಲ್ಲಿ ಐದು ಸಾವಿರ ಜನ ಸಿಬ್ಬಂದಿ ಬೇಕಾಗುತ್ತದೆ. ಆದರೆ ಒಂದೇ ಸಾರಿ ಇಷ್ಟೊಂದು ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳುವುದಕ್ಕೆ ಸರ್ಕಾರಕ್ಕೆ ಶಕ್ತಿ ಇಲ್ಲದೆ ಇರುವುದರಿಂದ ಈ ವರ್ಷ ಹೊಸದಾಗಿ 500 ಜನ ಸರ್ವೇಯರುಗಳನ್ನು ನೇಮಕ ಮಾಡಿಕೊಳ್ಳಬೇಕೆಂದು ಪಬ್ಲಿಕ್ ಸರ್ವಿಸ್ ಕಮಿಷನ್ನಿಗೆ ತಿಳಿಸಿದ್ದೇವೆ. ಇದಾದರೆ ಎರಡು ಸಾವಿರ ಜನರಿರುತ್ತಾರೆ. ಇದರಲ್ಲಿ ಅದಲು ಬದಲು ಮಾಡಿಕೊಂಡು ಐದು ಸಾವಿರಕ್ಕಿಂತ ಹೆಚ್ಚು ಜನಸಂಖ್ಯೆ ಇರುವ ಗ್ರಾಮಗಳ ರೀಸರ್ವೆ ಮಾಡತಕ್ಕದು, ಪಟ್ಟಣಗಳ ಸರ್ವೆ, ಪೆಡಸ್ಟಲ್ ಸರ್ವೆ, ಇನಾಂ ಮತ್ತು ಧಾರ್ಮಿಕ ಸಂಸ್ಥೆಗಳಿಗೆ ಸಂಬಂಧಪಟ್ಟ ಭೂಮಿಗಳ ಸರ್ವೆ ಮಾಡುವುದಕ್ಕೆ ವ್ಯವಸ್ಥೆಯನ್ನು ಮಾಡಿದ್ದೇವೆ. ಈ ದೃಷ್ಟಿಯಿಂದ ಎಷ್ಟು ಭೂಮಿ ಒತ್ತುವರಿಯಾಗಿದೆ ಎಂದು ತಿಳಿದುಕೊಂಡು ಅದರಮೇಲೆ ಕಂದಾಯವನ್ನು ಹಾಕಿದರೆ ಎರಡು ಕೋಟಿ ರೂಪಾಯಿನಷ್ಟು ಸರ್ಕಾರಕ್ಕೆ ಆದಾಯ ಬರುತ್ತದೆ ಎನ್ನುವ ಆಸೆಯನ್ನು ಇಟ್ಟುಕೊಂಡಿದ್ದೇನೆ. ಆದ್ದರಿಂದ ಈ ಕೆಲಸವನ್ನು ಅತ್ಯಂತ ತ್ವರಿತವಾಗಿ ಮಾಡುತ್ತಿದ್ದೇವೆ .

ಗ್ರಾಮಾಧಿಕಾರಿಗಳ ಅನುವಂಶಿಕ ಹಕ್ಕು ಹೋದರೂ ಕೂಡ ಅವರಿಗೆ ಫೋಟಿಗೆಯನ್ನು ಕೊಡುವ ಪದ್ಧತಿಯನ್ನು ಇನ್ನೂ ಇಟ್ಟುಕೊಂಡಿದ್ದೀರಿ, ಹಕ್ಕು ಹೋದರೂ ಅವರನ್ನು ಮುಂದುವರಿಸಿಕೊಂಡು ಹೋಗುವುದು ಯಾವ ನ್ಯಾಯ ಎಂದು ಮಾನ್ಯ ಸದಸ್ಯರಾದ ಶೆಟ್ಟರ್ ಅವರು ಕೇಳಿದರು. ಬೊಂಬಾಯಿ ಕರ್ಣಾಟಕ ಮತ್ತು ಹೈದರಾಬಾದ್ ಕರ್ಣಾಟಕದಲ್ಲಿ ಈಗಾಗಲೇ paid servants ನೇಮಕ ಮಾಡಿದ್ದೇವೆ. ಅದೇ ರೀತಿಯಲ್ಲಿ ಬೆಂಗಳೂರು ಮತ್ತು ಮೈಸೂರು ಡಿವಿಜನ್ನುಗಳಲ್ಲಿ ಸರ್ಕಲ್‌ಗಳನ್ನು ಮಾಡಬೇಕಾಗಿತ್ತು. ಅದರಲ್ಲಿ ಕೆಲವು ತಪ್ಪುಗಳನ್ನು ಮಾಡಿದ್ದುದು ಕಂಡು ಬಂದುದರಿಂದ ಹಿಂದಕ್ಕೆ ಕಳಿಸಿದ್ದೇನೆ. ಅದು ಪುನಃ ಬಂದಮೇಲೆ ಇಲ್ಲಿಯೂ ಕೂಡ ಅದೇ ವ್ಯವಸ್ಥೆಯನ್ನು ಮಾಡಬೇಕು ಎಂದು ಇದ್ದೇವೆ. ಅನುವಂಶಿಕ ಹಕ್ಕನ್ನು ಕಳೆದುಕೊಂಡ ಹಳೆಯ ಶ್ಯಾನುಭೋಗರನ್ನು ವಿಲೇಜ್ ಪಂಚಾಯಿತಿ ಸೆಕ್ರೆಟರಿ ಮತ್ತು ವಿಲೇಜ್ ಅಕೌಂಟೆಂಟ್ ಆಗಿ ನೇಮಕ ಮಾಡಿಕೊಂಡಿದ್ದರು. ಅವರಿಗೆ ಸಂಬಳ ಕೊಡುವುದಕ್ಕೆ ಹಣವನ್ನು ಇಲ್ಲಿ ಒದಗಿಸಿಕೊಂಡಿದ್ದೇವೆ. ಇನ್ನು ಮೇಲೆ ಪ್ರತಿಯೊಂದು ಗ್ರೂಪ್ ಆಫ್ ವಿಲೇಜಸ್ ಎಂದು ಏನು ಮಾಡುತ್ತೇವೆ, ಅದಕ್ಕೆ ಸರ್ಕಲ್‌ಗಳೆಂದು ಕರೆದು ಅಲ್ಲಿ ಸರ್ಕಾರದ ಬಾಕಿಯನ್ನು, ಪಂಚಾಯಿತಿ ಬಾಕಿಯನ್ನು ಮತ್ತು ಇತರ ಬಾಕಿಗಳನ್ನು ವಸೂಲು ಮಾಡುವುದಕ್ಕೆ ಒಬ್ಬರೇ ಅಧಿಕಾರಿಯನ್ನು ನೇಮಿಸಬೇಕು ಎನ್ನುವ ಅಭಿಪ್ರಾಯವಿದೆ. ವಿಲೇಜ್ ಅಕೌಂಟೆಂಟ್-ಕಮ್-ಪಂಚಾಯಿತಿ ಸೆಕ್ರೆಟರಿ ಎಂದು ಇದ್ದುದರಿಂದ ಇಬ್ಬರು ಅಧಿಕಾರಿಗಳ ಆಡಳಿತಕ್ಕೆ ಸಿಕ್ಕಿ ಒಬ್ಬರ ಕೈಯಲ್ಲಿಯೂ ಅವರನ್ನು ಕಂಟ್ರೋಲ್ ಮಾಡುವುದಕ್ಕೆ ಆಗದೆ ಗ್ರಾಮಗಳಲ್ಲಿ ಬಾಕಿ ವಸೂಲಾಗಲಿಲ್ಲ. ಈ ಬಾಕಿಯನ್ನು ವಸೂಲು ಮಾಡುವುದಕ್ಕೆ ತಹಸೀಲ್ದಾರರ ನೇರ ಆಡಳಿತದಲ್ಲಿ ಒಬ್ಬರೇ ಇರಬೇಕು ಎನ್ನುವ ತೀರ್ಮಾನಕ್ಕೆ ಬಂದಿದ್ದೇವೆ. ಆದಕಾರಣ ಬಾಕಿಯನ್ನು ವಸೂಲು ಮಾಡುವುದಕ್ಕೆ ಒಬ್ಬರನ್ನೇ ನೇಮಕ ಮಾಡಿಕೊಳ್ಳುತ್ತೇವೆ. ಪಂಚಾಯಿತಿ ಚೇರ್‌ಮನ್ ಆಗುವವರು, ಪಂಚಾಯಿತಿ ಸದಸ್ಯರು ಊರಿನಲ್ಲಿ ನಿಷ್ಠುರರಾಗುವುದಕ್ಕೆ ತಯಾರಿರುವುದಿಲ್ಲ. ಇದಕ್ಕೆ ಕಾರಣ ಚುನಾವಣೆಗೆ ನಿಂತಾಗ ಜನತೆಯ ಹತ್ತಿರ ಅವರು ಹೋಗಬೇಕಾಗುತ್ತದೆ. ಇದರಿಂದಾಗಿ ಯಾವ ಪಂಚಾಯಿತಿಯವರೂ ಸಂಪೂರ್ಣವಾಗಿ ಕಂದಾಯವನ್ನು ವಸೂಲು ಮಾಡಿಲ್ಲ, ಹದ್ದುಬಸ್ತು

ಸರಿಯಾಗಿ ಇಟ್ಟುಕೊಂಡಿಲ್ಲ. ಇವೊತ್ತು ಗೋಮಾಳ, ತೋಪುಗಳು, ಸ್ಮಶಾನ ಏನೇನು ಅವರ ಸ್ವಾಧೀನಕ್ಕೆ ಕೊಟ್ಟಿದ್ದೆವೋ ಅವನ್ನು ಜವಾಬ್ದಾರಿಯಿಂದ ನೋಡಿಕೊಳ್ಳದೆ ಅಕ್ರಮ ಪ್ರವೇಶವಾಗಿದೆ. ಆದುದರಿಂದ ಸರ್ಕಾರದ ಪರವಾಗಿ ರೆವೆನ್ಯೂ ವಸೂಲು ಮಾಡುವುದಕ್ಕೆ ಒಬ್ಬ ಅಧಿಕಾರಿಯನ್ನು ನೇಮಕ ಮಾಡಿದರೆ ಅವರು ವಸೂಲು ಮಾಡಿದ್ದನ್ನು ಏನು ಗ್ರಾಮ ಪಂಚಾಯಿತಿಗಳಿಗೆ ಕೊಡುತ್ತೇವೆ ಅದನ್ನು ಅವರು ಹಂಚಿಕೆ ಮಾಡುವ ಒಳ್ಳೆಯ ಕೆಲಸವನ್ನು ಯಶಸ್ವಿಯಾಗಿ ಅಧ್ಯಕ್ಷರೂ ಮತ್ತು ಸದಸ್ಯರೂ ಮಾಡಲಿ ಎನ್ನುವ ಒಂದು ಅಭಿಪ್ರಾಯದಿಂದ ಈ ರೀತಿ ಮಾಡಿದ್ದೇವೆ ಮತ್ತು ಈಗಿರುವ ಪಟೇಲ ಶ್ಯಾನುಭೋಗರ ಅನುವಂಶಿಕ ಹಕ್ಕನ್ನು ತೆಗೆದುಹಾಕಬೇಕಾದರೂ ಸ್ವಲ್ಪ ದಿವಸ ಅವರನ್ನು ಮುಂದುವರೆಸಬೇಕಾಗುತ್ತದೆ. ಏಕೆಂದರೆ ಯಾರನ್ನು ಅವರ ಜಾಗದಲ್ಲಿ ತೆಗೆದುಕೊಳ್ಳುತ್ತೇವೆ ಅವರಿಗೆ ತರಬೇತಿ ಇರುವುದಿಲ್ಲ, ಅದರಿಂದ ತೊಂದರೆಯಾಗುತ್ತದೆ. ಈ ದೃಷ್ಟಿಯಿಂದ ಈ ವರ್ಷ ವಿಲೇಜ್ ಅಕೌಂಟೆಂಟ್ ಆಗಿ ತೆಗೆದುಕೊಳ್ಳುವವರಿಗೆ ಟ್ರೈನಿಂಗ್ ಕೊಡಲು ಹಣ ಒದಗಿಸಿದೆ, ಟ್ರೈನಿಂಗ್ ಕೊಟ್ಟಮೇಲೆ ಅನುವಂಶಿಕ ಹುದ್ದೆಗಳು ರದ್ದಾಗುವುವು. ಇದಕ್ಕೆ ಸ್ವಲ್ಪ ಕಾಲಾವಕಾಶ ಬೇಕು. ಹಳೆಯ ಶಾನುಭೋಗರಲ್ಲಿ ಕೆಲವರನ್ನು ಇಟ್ಟುಕೊಳ್ಳಬಹುದು, ಅವರೇನು ಪಾಪ ಮಾಡಿದ್ದಾರೆ ಎಂದು ಕೆಲವರು ಹೇಳಿದರು. 50 ವರ್ಷದ ಒಳಗಿರುವವರು ಎಲ್.ಎಸ್. ಆದರೂ ಪಾಸು ಮಾಡಿದ್ದರೆ ಅವರನ್ನು ತೆಗೆದುಕೊಳ್ಳಬಹುದು ಎಂದು ರಿಯಾಯಿತಿ ತೋರಿಸಿದೆ. ಪರಿಹಾರ ಕೊಡುವಾಗ ಅರ್ಜಿ ಹಾಕದಿದ್ದರೂ ಕೊಡಬಹುದು. ಹೆಚ್ಚು ಸಂಬಳ ಬರುವುದರಿಂದ ಇನ್ನುಮೇಲೆ ಇನ್ನುಮುಂದೆ ಈ ನೌಕರರು ಒಳ್ಳೆಯ ರೀತಿಯಿಂದ ಕೆಲಸಮಾಡಬಹುದು, ಮಾಡದಿದ್ದವರನ್ನು ತೆಗೆದುಹಾಕಿ ಹೊಸಬರನ್ನು ತೆಗೆದುಕೊಳಬೇಕಾಗುತ್ತದೆ.

2-30 P. M.

ಶ್ರೀ ಆರ್. ಎನ್. ಲಕ್ಷ್ಮೀಪತಿ (ಗೌರಿಬಿದನೂರು).—ಅವರನ್ನು ಆಯಾ ತಾಲ್ಲೂಕುಗಳಲ್ಲೇ ಇಡುತ್ತೀರಾ ಅಥವಾ ಬೇರೆ ಕಡೆಗೆ ಹಾಕುತ್ತೀರಾ ?

ಶ್ರೀ ಬಿ. ರಾಚಯ್ಯ.—ವರ್ಗಮಾಡಿದರೆ ಒಳ್ಳೆಯದು. ಒಂದೇ ಕಡೆ ಇದ್ದರೆ ಬೇರು ಊರುತ್ತಾರೆ. ಪಟೇಲ್ ಕೆಲಸ ಮಾಡುವವರಿಗೆ ಪೋಲೀಸು ಕೆಲಸವನ್ನು ಸಹ ಕೊಡಬೇಕು ಎಂದು ಹೇಳಿದ್ದಾರೆ. ಆಂಧ್ರದಲ್ಲಿರುವಂತೆ ಪೋಲೀಸು ಪಟೇಲರನ್ನು ನೇಮಕ ಮಾಡುವ ಬಗ್ಗೆ ಹೋಂ ಡಿಪಾರ್ಟ್‌ಮೆಂಟಿನ ಮೂಲಕ ವರದಿ ತರಿಸಲು ಪ್ರಯತ್ನಮಾಡಿದೆ, ಈ ಸಂಬಂಧದಲ್ಲಿ ಹಿಂದಿದ್ದ ಗೃಹಮಂತ್ರಿಗಳೊಡನೆ ಮಾತನಾಡಿದ್ದೆ. ಒಬ್ಬನೇ ಗ್ರಾಮಾಧಿಕಾರಿ 90 ಭಾಗ ರೆವೆನ್ಯೂ ಕೆಲಸ, 10 ಭಾಗ ಪೋಲೀಸು ಕೆಲಸ ಮಾಡಲು ಹಿಂದೆ ಅವಕಾಶವಿತ್ತು. ಹಾಗೆ ಮಾಡಲು ಅವಕಾಶ ಮಾಡಿದರೆ ಒಬ್ಬನೆ ಅಧಿಕಾರಿ ಕೆಲಸ ಮಾಡುವುದರಿಂದ ಸಿಬ್ಬಂದಿ ಖರ್ಚು ಕಡಿಮೆಯಾಗುವುದು ಎಂದು ಯೋಚಿಸಿದ್ದೇವೆ. ಹೀಗೆ ಎರಡು ಕೆಲಸವನ್ನೂ ಒಬ್ಬರಿಗೇ ವಹಿಸುವ ವಿಚಾರ ಪರಿಶೀಲಿಸುತ್ತಿರುವುದರಿಂದ ಸ್ವಲ್ಪ ನಿಧಾನವಾಗಿದೆ.

ರಿಲಿಜಿಯಸ್ ಅಂಡ್ ಛಾರಿಟೆಬಲ್ ಇನ್‌ಸ್ಟಿಟ್ಯೂಷನ್ಸ್‌ಗೆ ಸಂಬಂಧಪಟ್ಟ ಹಾಗೆ ಜಗಳೂರಿನ ಸದಸ್ಯರು ಮತ್ತು ಶ್ರೀಮತಿ ನಾಗರತ್ನಮ್ಮನವರು ಪ್ರಸ್ತಾಪಮಾಡಿದ್ದಾರೆ. ಸಂಸ್ಥಾನದಲ್ಲಿ 35 ಸಾವಿರ ದೇವಸ್ಥಾನಗಳಿವೆ, ಅವುಗಳಿಂದ 2 ಲಕ್ಷ 90 ಸಾವಿರ ರೂಪಾಯಿಗಳ ಉತ್ಪತ್ತಿ ಬರುತ್ತದೆ. ಯೂನಿಫಾರಂ ಬಿಲ್ ಆದರೆ ಎಂಟೂಕಾಲು ಕೋಟಿ ರೂಪಾಯಿ ಬರಬಹುದು. ಇದಕ್ಕೆ ಸಂಬಂಧಪಟ್ಟಂತೆ 1,14,07 ಎಕರೆ ಭೂಮಿಯಿಂದ ಉತ್ಪತ್ತಿ ಬರುತ್ತಿದೆ. ಆ ಭೂಮಿ ಗೇಣಿದಾರರ ವಶದಲ್ಲಿದೆ; ದೇವಸ್ಥಾನದ ಕೆಲಸ ನೋಡುವವರು ಕೆಲವರಿಗೆ ಕೊಡಲಾಗಿದೆ. 39,810 ಎಕರೆ 29 ಗುಂಟೆ ಇಂಥ ಜಮೀನಿದೆ. ಗೇಣಿದಾರರನ್ನು ಭೂಮಾಲಿಕರನ್ನಾಗಿ ಮಾಡಬೇಕು, ಇಲ್ಲದಿದ್ದರೆ ಅವರಿಗೆ ತೊಂದರೆಯಾಗುತ್ತದೆ ಎಂದು ಹೇಳುತ್ತಾರೆ. ಈಗ ತಾತ್ಕಾಲಿಕವಾಗಿ ಯಾರನ್ನು ಗೇಣಿದಾರರಾಗಿ ಮುಂದುವರಿಸುತ್ತಿದ್ದೇವೋ ಅವರು ಭೂಸುಧಾರಣಾ ಕಾನೂನಿನ 8ನೆಯ ಸೆಕ್ಷನ್ ಪ್ರಕಾರ ಗೇಣಿ ಉತ್ಪನ್ನದಲ್ಲಿ ಸೇಕಡ 5 ಭಾಗ ಕೊಡುವುದಾದರೆ ಮುಂದುವರಿಸಬೇಕು, ತಪ್ಪಿದರೆ ಗೇಣಿ ವಸೂಲು ಮಾಡುವುದಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಎಂಬ ಸೂಚನೆ ಇದೆ. ಆದುದರಿಂದ ಅವರ fixity of tenure ಕೇಳುವ ಕೆಲಸ ಸರಕಾರ ಮಾಡಿದೆ. ಮತ್ತು ಏಕರೂಪವಾದ ಕಾನೂನು ತರಬೇಕೆಂದು ಹಿಂದೆ ಶ್ರೀಮಾನ್ ಕೃಷ್ಣಪ್ಪನವರು ಶಾಸನ ಸಭೆಯಲ್ಲಿ ಕಾನೂನನ್ನು ಮಂಡಿಸಿದ್ದರು. ಆದರೆ ಕೇಂದ್ರ ಸರಕಾರ ವಾಕ್ಫ್ ಬೋರ್ಡ್ ಮಾಡಬೇಕು, ಅದನ್ನು ಇಲ್ಲಿ ಸೇರಿಸಬಾರದು ಎಂದು ತಿಳಿಸಿದೆ, ಅದು ಸೆಂಟ್ರಲ್ ಆಕ್ಟಿನಲ್ಲಿದೆ. ಅದನ್ನು ನಮ್ಮ ಕಾನೂನಿನಲ್ಲಿ ಅಳವಡಿಸಲು ಪ್ರಯತ್ನ ಮಾಡಲಾಗಿದೆ. ಈ ಅಧಿವೇಶನದಲ್ಲಿ ತ್ವರಿತವಾಗಿ ಯೂನಿಫಾರಂ ಬಿಲ್ಲನ್ನು ತರಬೇಕೆಂದಿದ್ದೇವೆ. ಅದು ಬಂದರೆ ಬಹುಶಃ ದೇವರಿಗೆ ಸಂಬಂಧಪಟ್ಟ ಆಸ್ತಿ ಪಾಸ್ತಿ ಇರುವುದನ್ನು ದುರ್ವ್ಯಯ

(ಶ್ರೀ ಬಿ. ರಾಚಯ್ಯ)

ವಾಗದಂತೆಯೂ ಕೆಲಸಕಾರ್ಯ ಸಾರೋದ್ಧಾರವಾಗಿ ನಡೆಯುವಂತೆಯೂ ವ್ಯವಸ್ಥೆ ಮಾಡಬಹುದು ಮತ್ತು ಅಲ್ಲಿನ ಕೆಲವಾರು ಅಭಿವೃದ್ಧಿ ಕಾರ್ಯಗಳನ್ನು ಮಾಡಬಹುದು. 9 ದೊಡ್ಡ ದೊಡ್ಡ ದೇವಸ್ಥಾನಗಳಲ್ಲಿ ಕೆಲಸ ಮಾಡಿರುವುದನ್ನು ಮುಂದುವರಿಸುವುದೂ ಅಲ್ಲದೆ ಶ್ರೀ ಶೈಲದ ವಿಷಯದಲ್ಲಿ ಹೇಳಿರುವಂತೆ ಬಂಗಾರು ತಿರುಪತಿ ಮತ್ತು ತಿರುಪತಿಯಲ್ಲಿ ಮಾಡಿರುವಂತೆ ವ್ಯವಸ್ಥೆ ಮಾಡಬೇಕು ಎಂದು ಹೇಳಿದ್ದಾರೆ. ಇದಕ್ಕಾಗಿ ಈಗಾಗಲೆ 200 ಅಡಿ 300 ಅಡಿ ಸೈಟನ್ನು ಕೊಟ್ಟಿದ್ದಾರೆ, 4.1 ಲಕ್ಷದ ಅಂದಾಜಾಗಿದೆ. ಇದನ್ನು ಬೇಗ ಮಂಜೂರು ಮಾಡಿ ದೇವಸ್ಥಾನಕ್ಕೆ ಬೇಕಾದ ಸೌಲಭ್ಯ ಕಲ್ಪಿಸಲು ಪ್ರಯತ್ನ ಮಾಡುತ್ತೇವೆ. ಈ ವರ್ಷ ಮುಂಗಡಪತ್ರದಲ್ಲಿ 1 ಲಕ್ಷ 40 ಸಾವಿರ ರೂಪಾಯಿ ಅಂದಾಜನ್ನು ಮಂಜೂರು ಮಾಡಿ ಛತ್ರದ ಕೆಲಸ ಪ್ರಾರಂಭಿಸಲಾಗಿದೆ. ಮಹದೇಶ್ವರ ಬೆಟ್ಟಕ್ಕೆ ಸಂಬಂಧಪಟ್ಟಂತೆ ಒಂದು ಬೃಹತ್ ಯೋಜನೆ ಮಾಡಬೇಕೆಂದು ಹೇಳಿದ್ದಾರೆ. ಈ ವರ್ಷ ಸುಮಾರು 15 ಲಕ್ಷ ರೂಪಾಯಿಗಳ ಅಂದಾಜಿನಲ್ಲಿ ಒಂದು ಮಲ್ಟಿ ಸ್ಟೋರೀಡ್ ಛತ್ರ ಕಟ್ಟಲು 3 ಲಕ್ಷ ರೂಪಾಯಿಗಳನ್ನು ಕೊಡಲಾಗಿದೆ. ಅಲ್ಲಿ ನೀರಿನ ಸೌಕರ್ಯಕ್ಕಾಗಿ 2 ಅಂದಾಜಾಗಿವೆ, ಮೊದಲು ಒಂದು ದೊಡ್ಡ ಅಂದಾಜನ್ನು ಮಾಡಲಾಗಿತ್ತು, ಆದರೆ ನ್ಯಾಷನಲ್ ರೂರಲ್ ವಾಟರ್ ಸಪ್ಲೈ ಯೋಜನೆ ಪ್ರಕಾರ ಹಣ ಕೊಡುವುದಕ್ಕಾಗುವುದಿಲ್ಲವೆಂದು ಎರಡು ಅಂದಾಜುಗಳನ್ನು ಮಾಡಲು ಪ್ರಯತ್ನ ಮಾಡಲಾಗಿದೆ. ಈ ವರ್ಷ ಗೋಪುರಕ್ಕೆ ದೀಪ ಹಾಕುವುದು, ರಸ್ತೆ ಮಾಡುವುದು ಮುಂತಾದ ಕೆಲಸ ಕಾರ್ಯಗಳು ನಡೆದಿವೆ. ದುರದೃಷ್ಟವಶಾತ್ ಈ ವರ್ಷ ಜನರ ಬಸ್ಸು ಅಪಘಾತಕ್ಕೀಡಾಗಿ ಕೆಲವರ ಅಕಸ್ಮಿಕ ಮರಣಕ್ಕೆ ಕಾರಣವಾಗಿದೆ. ಈ ಸಂದರ್ಭದಲ್ಲಿ ದೇವಸ್ಥಾನದ ಆಡಳಿತವರ್ಗದ ಅಗರೂಕತೆಯಿಂದ ಉದಾಸೀನದಿಂದ ಈ ಕೆಲಸವಾಗಿದೆ ಎಂದು ಕೆಲವರ ಮನಸ್ಸಿನಲ್ಲಿ ಶಂಕೆಯಿದೆ, ಆದರೆ ಅದು ಸರಿಯಲ್ಲ. ಸಾಕಾದಷ್ಟು ಬಸ್ಸುಗಳು ನಿಲ್ಲುವುದಕ್ಕೆ ಅವಕಾಶ ಕೊಡಲು ಪ್ರಯತ್ನ ಮಾಡಲಾಗುತ್ತಿದೆ. One way traffic ಎಂದು ಮಾಡಿದ್ದರೂ ಡ್ರೈವರ್‌ನ ಅಜಾಗರೂಕತೆಯಿಂದ ಇಳಿಜಾರು ಪ್ರದೇಶದಲ್ಲಿ ನಡೆಸುವಾಗ ಅನಾಹುತವಾಗಿದೆ. ಇದನ್ನು ತಿಳಿದು ವ್ಯಥೆಯಾಗಿದೆ. ಒಟ್ಟಿನಲ್ಲಿ ದೇವಸ್ಥಾನಗಳಿರುವ ಸ್ಥಳದಲ್ಲಿ ಒಳ್ಳೆಯ ರೀತಿಯಿಂದ ಪ್ರಯಾಣಿಕರಿಗೆ ಬಸ್ ಸೌಕರ್ಯ, ನೀರು, ವಸತಿ ಸೌಕರ್ಯ ಮುಂತಾದುವುಗಳಿಗೆ ಸಂಬಂಧಪಟ್ಟ ಕೆಲಸಕಾರ್ಯ ಹಿಂದಿನಿಂದ ಈ ಇಲಾಖೆಯಲ್ಲಿ ಮಾಡುತ್ತಾ ಬಂದಿದೆ, ಅದನ್ನು ತ್ವರಿತವಾಗಿ ಮುಂದುವರಿಸಲು ಪ್ರಯತ್ನ ಮಾಡಲಾಗಿದೆ. ತಿರುಪತಿಯಲ್ಲಿ 5 ಲಕ್ಷ ರೂಪಾಯಿಗಳಲ್ಲಿ, ವಸತಿಗೃಹ ಕಟ್ಟಿಸಿದ್ದರೂ ನಮ್ಮ ಛತ್ರವಿದ್ದರೂ ಆ ಸಂಬಂಧದಲ್ಲಿ ಏನಾದರೂ ಬರೆದರೆ ಉತ್ತರ ಬರುವುದಿಲ್ಲ ಅಲ್ಲಿಗೆ ಹೋಗುವವರಿಗೆ ಸರಕಾರದ ಪರವಾಗಿ ಇರುವವರಿಂದ ಮತ್ತು ಪೇಷ್ಕಾರರಿಂದ ಸಹಕಾರವಿಲ್ಲ ಎಂದು ಶ್ರೀಮತಿ ನಾಗರತ್ನಮ್ಮನವರು ಹೇಳಿದ್ದಾರೆ. ಇದಕ್ಕಾಗಿ ಬೆಂಗಳೂರಿನಲ್ಲಿ ಒಂದು ಇನ್‌ಫರ್ಮೇಷನ್ ಸೆಂಟರಿದ್ದರೆ ಅನುಕೂಲ, ಹಾಗೆ ಮಾಡಿ ಹೋಗುವವರಿಗೆ ಸೌಕರ್ಯ ಒದಗಿಸಬೇಕು ಎಂಬ ಸೂಚನೆ ಇದೆ, ಅದು ಒಳ್ಳೆಯ ಸೂಚನೆ. ಸಾಧ್ಯವಾದಮಟ್ಟಿಗೆ ಆ ಬಗ್ಗೆ ಕ್ರಮ ತೆಗೆದುಕೊಳ್ಳಲು ಪ್ರಯತ್ನ ಮಾಡುತ್ತೇವೆ. ಈಗ 19 ಲಕ್ಷ ರೂಪಾಯಿಗಳ ಅಂದಾಜಿನಲ್ಲಿ 90 ರೂಮುಗಳಿರುವ ಒಂದು ಮಲ್ಟಿ ಸ್ಟೋರೀಡ್ ಕಟ್ಟಡ ಪೂರ್ಣವಾಗಿದೆ. ಒಂದೆರಡು ತಿಂಗಳಲ್ಲಿ ವಾಸಕ್ಕೆ ಸಿದ್ಧವಾಗಬಹುದು. ಫರ್ನಿಷ್ ಮಾಡಬೇಕಾದ್ದು ಬಹಳವಿದ್ದು ಆದರಿಂದ ತಡವಾಗಿದೆ. ಆದಾದಮೇಲೆ ಕಷ್ಟವಿದೆಯೆಂದು ಹೇಳಿರುವುದು ಪರಿಹಾರವಾಗುವುದು. ಇದೇ ರೀತಿಯಲ್ಲಿ ಎಡಿಯೂರು ಸಿದ್ಧಲಿಂಗೇಶ್ವರ ಸ್ವಾಮಿ ದೇಸ್ಥಾನ, ಎಲ್ಲಮ್ಮ ದೇವರ ದೇವಸ್ಥಾನ, ಬಿಳಿಗಿರಿ ರಂಗನ ದೇವಸ್ಥಾನ ಮುಂತಾದವು ಇರುವ ಕಡೆ ಜಾತ್ರೆಗಳಿಗೆ ಬಂದುಹೋಗುವವರಿಗೆ ಸೌಕರ್ಯ ಕಲ್ಪಿಸಲು ಪ್ರಯತ್ನ ಮಾಡಲಾಗುತ್ತಿದೆ.

[MR. CHAIRMAN (Sir S. D. KOTHAVALE) in the Chair].

ಅನೇಕ ಭಕ್ತಾದಿಗಳು ಮುಂದೆ ಬರುತ್ತಾ ಇದ್ದಾರೆ, ಹೆಚ್ಚು ಹಣವನ್ನೂ ಕೂಡ ಒದಗಿಸಿ ಕೊಡುತ್ತಾ ಇದ್ದಾರೆ, ಈ ದೇವಸ್ಥಾನದ ಕೆಲಸಕಾರ್ಯಗಳು ಎಷ್ಟು ಶ್ರದ್ಧೆಯಿಂದ ನಡೆಯಬೇಕಾಗಿದೆಯೋ ಅದು ಇನ್ನೂ ಹೆಚ್ಚಿನ ರೀತಿಯಲ್ಲಿ ನಡೆಯುತ್ತದೆ. ಬಹುಶಃ ಆಹಾರದ ವಿಚಾರದಲ್ಲಿ ಮುಂದಿನ ವರ್ಷ ಅಭಾವ ಬರಲಾರದು ಎಂದು ನಂಬಿಕೊಂಡಿದ್ದೇನೆ.

ಶ್ರೀ ಜಿ. ತಮ್ಮಣ್ಣ (ಕುಣಿಗಲ್).—ಗ್ರಾಮದಲ್ಲಿರತಕ್ಕ ದೇವಸ್ಥಾನಗಳ ವಿಷಯದಲ್ಲಿ ಏನು ಹೇಳುತ್ತೀರಿ ಸ್ವಾಮಿ ?

ಶ್ರೀ ಬಿ. ರಾಚಯ್ಯ.—ಗ್ರಾಮದ ಭಕ್ತಾದಿಗಳು ನೋಡಿಕೊಳ್ಳಬೇಕು, ದೇವರುಗಳಲ್ಲೂ ಕೂಡ ಮನುಷ್ಯನಲ್ಲಿರುವ ಹಾಗೆ ದೊಡ್ಡ ಮಾಲೀಕರು ಸಣ್ಣ ಮಾಲೀಕರು ಎಂದು ಇರುವ ಹಾಗೆ ಇದೆ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ (ಚಿಕ್ಕನಾಯಕನಹಳ್ಳಿ).—ಹಿತ್ತಾಳೆ, ತಾಮ್ರದ ಬೆಲೆ ಜಾಸ್ತಿಯಾಗಿ ಗ್ರಾಮಾಂತರದಲ್ಲಿರತಕ್ಕ ದೇವಸ್ಥಾನಗಳಲ್ಲಿ ವಿಗ್ರಹಗಳ ಕಳುವಾಗುತ್ತಿದೆ, ಇದಕ್ಕೇನು ಮಾಡುತ್ತೀರಿ ?

ಶ್ರೀ ಬಿ. ರಾಚಯ್ಯ.—ಕೆಲವು ಕಡೆ ಕಳ್ಳತನವಾಗುತ್ತಿದೆ. ಬಹುಶಃ ಎಲ್ಲಿ ಯಾರಲ್ಲಿ ಭಕ್ತಿ ದೇವರಲ್ಲಿ ಇಲ್ಲವೊ ಅಂತಹ ಕಡೆ ಹೀಗೆ ಆಗುತ್ತಿದೆಯೇನೋ ಎಂದು ನನಗಾದರೂ ಅನಿಸುತ್ತದೆ.

ಶ್ರೀ ಕೆ. ಎಂ. ತಮ್ಮಯ್ಯ (ಕನಕಪುರ).—ಮುಜರಾಯ್‌ಗೆ ಸೇರಿದ ದೇವಸ್ಥಾನದಲ್ಲಿಯೇ ಈ ವರ್ಷ ಕಳ್ಳತನವಾಗಿದೆ, ಅದಕ್ಕೇನು ಹೇಳುತ್ತೀರಿ ?

ಶ್ರೀ ಬಿ. ರಾಚಯ್ಯ.—ಇಷ್ಟು ಹಿಂದೂ ದೇವಸ್ಥಾನಗಳ ವಿಷಯ ಆಯಿತು. ಇನ್ನು ಅಜೀಜ್ ಸೇಠ್‌ವರಿಗೆ ಸೇರಿದ್ದು ಕೆಲವು ಇವೆ.

ಶ್ರೀ ಅಜೀಜ್ ಸೇಟ್ (ನರಸಿಂಹರಾಜ).—ಸೆಕ್ಯೂಲಾರ್ ಸ್ಟೇಟ್‌ನಲ್ಲಿ ಈ ರೀತಿ ಹೇಳಬಹುದೇ ಸ್ವಾಮಿ ?

ಶ್ರೀ ಬಿ. ರಾಚಯ್ಯ.—ಚಾರಿಟಬಲ್ ಇನ್‌ಸ್ಟಿಟ್ಯೂಷನ್ಸ್ ಅಂತ ಬೇರೆ ಕೆಲವು ಇವೆ. ಬೆಂಗಳೂರಿನಲ್ಲಿ ಎಸ್.ಎಲ್.ಎನ್. ಚಾರಿಟೀಸ್ ಇದೆ, ಬಂಡಿ ಶೇಷಮ್ಮ ಚಾರಿಟೀಸ್ ಅಂತ ಇದೆ. ದೇವಸ್ಥಾನಕ್ಕೆ ಸಂಬಂಧಪಟ್ಟ ಆಸ್ತಿ 5—6 ಕೋಟಿ ರೂಪಾಯಿ ಎಲ್ಲೆಲ್ಲೋ ಇದ್ದದ್ದನ್ನು ಈ ವರ್ಷ ಬೆಂಗಳೂರು ಸಿಟಿಯಲ್ಲಿ ಸರ್ವೆ ಮಾಡಿಸಿ ಅದರಿಂದ ಬಂದಂತಹ ದುಡ್ಡನ್ನು ದೇವಸ್ಥಾನದ ಹೆಸರಿನಲ್ಲಿ ಇಟ್ಟು ನಡೆಯಬೇಕಾದ ಕೆಲಸಕಾರ್ಯಗಳು ಸಾರೋದ್ಧಾರವಾಗಿ ನಡೆಯಲಿ ಎಂಬ ತೀರ್ಮಾನಕ್ಕೆ ಬಂದು ಕೆಲಸ ಮಾಡುತ್ತಾ ಇದ್ದೇವೆ. ನಂಜನಗೂಡಿನಲ್ಲೂ ಕೂಡ ಜಮೀನು ದೇವಸ್ಥಾನದ ಹೆಸರಿನಲ್ಲಿ ಇದೆ. ಅದರಿಂದ ಬರತಕ್ಕ ಉತ್ಪನ್ನ ಆ ದೇವಸ್ಥಾನಕ್ಕೆ ವಿನಿಯೋಗವಾಗಬೇಕು. ಈಗ ಈ ದೇವಸ್ಥಾನಗಳ ಆಸ್ತಿಯಿಂದ ಬರತಕ್ಕ ಉತ್ಪನ್ನವನ್ನು ಎಲ್ಲೆಲ್ಲೋ ಯಾರು ಯಾರೋ ತೆಗೆದುಕೊಳ್ಳುತ್ತಾ ಇದ್ದರು.

ಶ್ರೀ ಎಚ್. ಸಿದ್ದವೀರಪ್ಪ (ಹರಿಹರ).—ಈ ದೇವಸ್ಥಾನದ ಜಮೀನಿನ ಮೇಲೆ ತಮ್ಮ ಕಣ್ಣು ಬಿದ್ದಿರುವುದು ಬೇರೆ ಉದ್ದೇಶ. ಎಲ್ಲಾ ಆಯಿತು ದೇವರ ಜಮೀನು ಒಂದೇ ಉಳಿದಿರುವುದು.

ಶ್ರೀ ಬಿ. ರಾಚಯ್ಯ.—ಈ ಧಾರ್ಮಿಕ ಸಂಸ್ಥೆಗಳಿಗೆ ಕೆಲವು ಆಸ್ತಿಗಳು ಇದ್ದು ಕೆಲಸಕಾರ್ಯಗಳು ಸರಿಯಾಗಿ ಆಗದೆ ಸ್ವಲ್ಪಮಟ್ಟಿಗೆ ದುರುಪಯೋಗವಾಗುವುದಕ್ಕೆ ಅವಕಾಶವಾಗಿರುವುದರಿಂದ ಏಕರೂಪದ ವಿಧೇಯಕವನ್ನು ತಂದು..............

ಶ್ರೀ ಎಚ್. ಸಿದ್ದವೀರಪ್ಪ.—ಜೀವಂತ ದೇವರುಗಳೇ ತಿನ್ನುತ್ತಿವೇ ತಮ್ಮ ಉದ್ದೇಶವೇ, ಬೇರೆ ಇದೆ. ಅದು ನಮಗೆ ಗೊತ್ತು.

ಶ್ರೀ ಸೋಲೂರು ಸಿದ್ಧಪ್ಪ (ಕುದೂರು).—ಬರೀ ಪಟ್ಟಣಗಳಲ್ಲಿರತಕ್ಕ ದೇವಸ್ಥಾನಗಳ ಬಗ್ಗೆ ಹೇಳಿದಿರಿ, ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ದೇವಸ್ಥಾನಗಳ ಸ್ಥಿತಿ ಏನಾಗಿದೆ ಅವುಗಳ ಬಗ್ಗೆ ಏನು ಮಾಡಿದ್ದೀರಿ ಎಂಬುದನ್ನು ದಯವಿಟ್ಟು ತಿಳಿಸಿ.

ಶ್ರೀ ಬಿ. ರಾಚಯ್ಯ.—ಈಗ ಕಾಲಾವಕಾಶ ಇಲ್ಲದೇ ಇರುವುದರಿಂದ ಹೆಚ್ಚಿಗೆ ಹೇಳಲಾರೆ, ಅನೇಕ ಕಡೆ ಗ್ರಾಮಾಂತರಗಳಲ್ಲಿ ದೇವಸ್ಥಾನಗಳ ಜೀರ್ಣೋದ್ಧಾರಕ್ಕೆ ಮತ್ತು ಅವುಗಳ ಕೆಲಸಕಾರ್ಯಗಳು ನಡೆಯುವುದಕ್ಕೆ ವರ್ಷಂಪ್ರತಿ 3 ಲಕ್ಷ ರೂಪಾಯಿಗಳ ಹಣವನ್ನು ಹಂಚಿದ್ದೇವೆ. ನಡೆದಿರತಕ್ಕ ಅಭಿವೃದ್ಧಿ ಕೆಲಸಕಾರ್ಯಗಳೆಲ್ಲವನ್ನೂ ಹೇಳುವುದಕ್ಕೆ ಈಗ ಸಾಧ್ಯವಿಲ್ಲ ಕ್ಷಮಿಸಬೇಕು. ಪ್ರತ್ಯೇಕವಾಗಿ ಶ್ರೀಮಾನ್ ಸಿದ್ಧಪ್ಪನವರು ಕೇಳಿದರೆ ಸಮಜಾಯಿಷಿ ಕೊಡುತ್ತೇನೆ.

ರೆವಿನ್ಯೂ ಇಲಾಖೆಯಲ್ಲಿ ಶೇಕದಾರರಿಂದ ಹಿಡಿದು ಕೊನೇ ಮಟ್ಟದವರೆಗೂ ಲಂಚ ತಾಂಡವಾಡುತ್ತಿದೆ ಎಂದು ಹೇಳಿ ಸರ್ವಸಾಮಾನ್ಯವಾಗಿ ಬಂದದ್ದು ಒಂದು ಟೀಕೆ. ಇವತ್ತು ನಾನು ಕಣ್ಣು ಮುಚ್ಚಿಕೊಂಡು ಇಲ್ಲ. ಲಂಚ ಇಲ್ಲ, ಎಲ್ಲರಿಗೂ ಪ್ರಾಮಾಣಿಕರಾಗಿದ್ದಾರೆ ಎಂದು ಒಪ್ಪಿಕೊಳ್ಳುವುದಕ್ಕೆ ನಾನು ತಯಾರಾಗಿಲ್ಲ. ಒಟ್ಟಿನಲ್ಲಿ ಈ ಲಂಚ ಇವತ್ತಿನದಲ್ಲ, ಬಹುಶಃ ಹಿಂದಿನಿಂದಲೂ ನಡೆದುಕೊಂಡು ಬಂದಿದೆ, ಸಿದ್ದವೀರಪ್ಪನವರ ಕಾಲದಲ್ಲೂ ಇತ್ತು.

ಶ್ರೀ ಎಚ್. ಸಿದ್ದವೀರಪ್ಪ.—ನಮ್ಮ ಕಾಲದಲ್ಲಿ ಕುತ್ತಿಗೆ ಕುಯ್ದುಕೊಂಡು ಬಿಡುತ್ತಾ ಇದ್ದೆವು. ಚಾಣಕ್ಯನ ಕಾಲದಲ್ಲೂ ಲಂಚ ಇತ್ತು ಅಂತ ಅಲ್ಲ, ನಿಮ್ಮ ಕಾಲದಲ್ಲಿ ಲಂಚವನ್ನು ದೇವರಂತೆ ಪೂಜೆ ಮಾಡುತ್ತಾ ಇದ್ದೀರಿ, ನಮ್ಮ ಕಾಲದಲ್ಲಿ ಕಾಲಲ್ಲಿ ಒದೆಯುತ್ತಾ ಇದ್ದೆವು.

ಶ್ರೀ ಬಿ. ರಾಚಯ್ಯ.—ಇದು ಬಹಳ ಗಂಭೀರವಾಗಿರತಕ್ಕ ಪ್ರಶ್ನೆ, ಇದನ್ನು ನಾನಾದರೂ ಕೂಡ ಲಘುವಾಗಿ ತೆಗೆದುಕೊಂಡಿಲ್ಲ, ಒಟ್ಟಿನಲ್ಲಿ ಯಾವುದೇ ಕಾಯಿದೆ ಮಾಡಲಿ, ಯಾವುದೇ ಸರ್ಕಾರ ಬರಲಿ ಅದರ ಒಂದು ಲಾಭವನ್ನು ಪಡೆದುಕೊಳ್ಳತಕ್ಕ ಅಧಿಕಾರಿಗಳು ಹಿಂದೆಯೂ ಇದ್ದರು, ಇವತ್ತೂ ಇದ್ದಾರೆ, ಮುಂದೆಯೂ ಇರುತ್ತಾರೆ.

ಶ್ರೀ ಎಚ್. ಸಿದ್ಧವೀರಪ್ಪ.—ಲಂಚ ತಿನ್ನುವವರನ್ನು ಬಿಟ್ಟುಬಿಡಿ. ಪ್ರಾಮಾಣಿಕರಾಗಿರುವವರು 15 ದಿವಸ ಒಂದು ಊರಿನಲ್ಲಿರುವುದಕ್ಕೆ ಸಾಧ್ಯವೆ? ಉದಾಹರಣೆ ಹೇಳುತ್ತೇನೆ ನಮ್ಮ ದಾವಣಗೆರೆಯಲ್ಲಿ ಒಬ್ಬ ಪುಡಾರಿಯನ್ನು ಹಿಡಿದಿದ್ದರಿಂದ ಒಬ್ಬ ಅಧಿಕಾರಿ ಅಲ್ಲಿಗೆ ಬಂದ ಒಂದು ತಿಂಗಳಿನಲ್ಲೇ ಆತನನ್ನು ಬೇರೆ ಕಡೆಗೆ ವರ್ಗ ಮಾಡಿದರು. I want to know what steps you have taken to safeguard officers with integrity and honesty.

Mr. CHAIRMAN.—The point is whether clarifications should be permitted at the end. If the hon'ble Members do not want them at the end, I don't mind. I shall take the sense of the House.

Sri AZEEZ SAIT.—We want clarifications at the end.

Mr. CHAIRMAN.—Then, there should be no interruptions when the Minister is replying.

Sri J. P. SARWESH.—There are many members who did not at all get any chance to participate in the debate; the Chair should allow them to put some questions.

Sri D. M. SIDDAIAH (Biligere) —After the Hon'ble Minister's reply half an hour may be given for clarifications.

ಶ್ರೀ ಬಿ. ರಾಚಯ್ಯ.—ಸ್ವಾಮಿ, ಐದು ಭಾಗಗಳಿಂದ ಇಲ್ಲಿಗೆ ನೌಕರರೂ ಮತ್ತು ಅಧಿಕಾರಿಗಳು ಬಂದಿದ್ದಾರೆ. ಇಲ್ಲಿ ಈ ನೌಕರರಿಗೆ ಸಂಬಂಧಪಟ್ಟ ಸೀನಿಯಾರಿಟಿ ಲಿಸ್ಟ್ ತಯಾರಾಗುವುದರಲ್ಲಿ ಸ್ವಲ್ಪ ನಿಧಾನವಾಯಿತು. ಆ ಅವಧಿಯಲ್ಲಿ ಕೆಲವರು ಮೇಲೆ ಬರತಕ್ಕವರು ಬೇಗ ಪ್ರಮೋಷನ್ ಪಡೆಯತಕ್ಕವರೂ ಕೆಳಗೆ ಬಂದಿದ್ದಾರೆ. ಕೆಳಗಿನವರು ಕೆಲವರು ಮೇಲಕ್ಕೆ ಹೋಗಿದ್ದಾರೆ. ಆ ಕಾರಣದಿಂದ ಕೆಲವರು ಪ್ರಾದೇಶಿಕ ಕಾರಣಗಳ ಮೇಲೂ ಮತ್ತೆ ಕೆಲವರು ಜಾತೀಯ ಕಾರಣದ ಮೇಲೂ ಮೇಲೆ ಹೋಗಿದ್ದಾರೆಂದು ಕೆಲವರಲ್ಲಿ ಜಿಗುಪ್ಸೆ ಉಂಟಾಗಿದೆ. ಆ ಕಾರಣದಿಂದ ಸರ್ಕಾರದ ಮೇಲೆ ಒಂದು ಆಪಾದನೆ ಮಾಡಲು ಅವಕಾಶವುಂಟಾಯಿತು. ಆದರೆ ಕಾಲಕ್ಕೆ ಸರಿಯಾಗಿ ಫಸ್ಟ್ ಡಿವಿಜನ್ ಗುಮಾಸ್ತರ ಸೀನಿಯಾರಿಟಿ ಪಟ್ಟಿ ಸಿರಸ್ತೆದಾರರ ಸೀನಿಯಾರಿಟಿ ಪಟ್ಟಿ ಮತ್ತು ಕೆಲವು ಡೆಪ್ಯುಟಿ ತಾಶೀಲ್ದಾರರ ಸೀನಿಯಾರಿಟಿ ಪಟ್ಟಿಗಳು ತಯಾರಾಗದೆ ಇದ್ದುದರಿಂದ ಕೆಲವರು ಹೈಕೋರ್ಟಿಗೆ ಹೋದರು. ಆದರೆ ಈಗ ಈ ಇಲಾಖೆಯಲ್ಲಿ ಎಲ್ಲರ ಸೀನಿಯಾರಿಟಿ ಪಟ್ಟಿಗಳು ಪೂರ್ಣವಾಗಿವೆ. ಅದು ತಡವಾದ್ದರಿಂದ ಕೆಲವರಿಗೆ ಪ್ರಮೋಷನ್‌ಗಳು ಸಿಕ್ಕುವುದು ತಡವಾಯಿತು. ಅದರಿಂದ ಅವರಲ್ಲಿ ಒಂದು ಅತೃಪ್ತಿ ಮೂಡುವುದಕ್ಕೆ ಕಾರಣವಾಯಿತು. ಈಗ ಅವೆಲ್ಲ ತೀರ್ಮಾನವಾಗಿವೆ. ಮತ್ತು Cadre and Recruitment Rules ರಚನೆ ಮಾಡಲಾಗಿದೆ ಅದರಲ್ಲಿ ಸೇಕಡ ಎಷ್ಟು ನೇರ ನೇಮಕದ ಮೂಲಕ ಬರಬೇಕು ಎಷ್ಟು ಪ್ರಮೋಷನ್ ಮೂಲಕ ಬರಬೇಕು ಎಂಬುದನ್ನೆಲ್ಲಾ ತೀರ್ಮಾನ ಮಾಡಿದ್ದೇವೆ. ಆದರೆ ಈ ನಿಯಮಗಳು ಆಗುವುದು ಸ್ವಲ್ಪ ತಡವಾದ್ದರಿಂದ ಗುಮಾಸ್ತರಾಗುವುದಕ್ಕೂ ಕೂಡ ಅರವಲ್ಲದ ಕೆಲವು ಜನರು ಸಬ್‌ರಿಜಿಸ್ಟ್ರಾರ್ ಆಗಿಯೂ ಮತ್ತೆ ಕೆಲವರು ತಹಸೀಲ್ದಾರರಾಗಿಯೂ ಬಡ್ತಿ ಹೊಂದಿದ್ದಾರೆ. ಆದರೆ ಇನ್ನು ಮುಂದೆ ಅಂಥದಕ್ಕೆ ಖಂಡಿತ ಅವಕಾಶವಿಲ್ಲ. ಆದರೆ ಹಳೇ ನೌಕರರ ಸಂಖ್ಯೆ ಜಾಸ್ತಿಯಾಗಿರುವುದರಿಂದ ಲಂಚದ ಅಪಾದನೆಗಳು ಜಾಸ್ತಿಯಾಗಿ ಕೇಳಿ ಬರುತ್ತಿವೆಂದು ನಾವೀಗ ಸಾಧ್ಯವಾದಮಟ್ಟಿಗೂ ಹೊಸಬರಿಗೆ ಹೆಚ್ಚಿನ ಅವಕಾಶವನ್ನು ಕೊಡಬೇಕೆಂದು ಅನೇಕ ಖಾಲಿ ಸ್ಥಾನಗಳನ್ನು ಭರ್ತಿಮಾಡಲು ಆ ಹುದ್ದೆಗಳನ್ನು ಪಿ. ಎಸ್. ಸಿ. ಗೆ ಅಡ್ವರ್‌ಟೈಸ್ ಮಾಡಲು ಕಳುಹಿಸಿದ್ದೇವೆ. ಆ ಒಂದು ತೀರ್ಮಾನವನ್ನು ಸರ್ಕಾರ ತೆಗೆದುಕೊಂಡಿದೆ. ಈಗ ನೇಮಕವಾಗಿರತಕ್ಕ ಕೆಲವು ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರ್‌ಗೂ ಮತ್ತು ಪ್ರಮೋಷನ್ ಮೂಲಕ ಬಂದ ಅಸಿಸ್ಟೆಂಟ್ ಕಮಿಷನರ್‌ಗೂ ಹೋಲಿಸಿ ನೋಡಿದರೆ ಆ ಹೊಸಬರು ತಮ್ಮ ಒಂದು ಪ್ರಾಮಾಣಿಕತೆಯನ್ನು ಆ ಪ್ರಮೋಷನ್ ಮೂಲಕ ಬಂದವರಿಗಿಂತಲೂ ಚೆನ್ನಾಗಿ ಕಾಪಾಡಿಕೊಂಡು ಬರುತ್ತಿದ್ದಾರೆ. ಆದರೆ ಆ ಹಳಬರಲ್ಲೂ ಕೂಡ ಅಂದರೆ ಆ ಪ್ರಮೋಟಿಸ್‌ಗಳಲ್ಲೂ ಅನೇಕರು ಪ್ರಾಮಾಣಿಕರಾಗಿದ್ದಾರೆ. ಅಂಥವರಿಗೆ ರಕ್ಷಣೆ ಕೊಡಬೇಕಾದ್ದು ಸರ್ಕಾರದವರ ಕರ್ತವ್ಯ. ಆದರೆ ವಿನಾಕಾರಣ ಅಧಿಕಾರಿಗಳಿಗೆ ಪದೇ ಪದೇ ಕಿರುಕುಳ ಕೊಡತಕ್ಕ ಮನೋಭಾವವನ್ನು ನಾನು ಒಪ್ಪುವುದಿಲ್ಲ. ಈಗ ತಾನೆ ಮಾನ್ಯ

ಸಿದ್ದವೀರಪ್ಪನವರೇನು ಒಂದು ವಿಚಾರವನ್ನು ಈ ಸಭೆಯ ಗಮನಕ್ಕೆ ತಂದರೋ ಅವರನ್ನು ಮತ್ತೆ ಅಲ್ಲಿಗೇ ವರ್ಗಮಾಡಿದ್ದೇನೆ. ಆದರೆ ಈ ದಿವಸ ತಾಶೀಲ್ದಾರರ ವರ್ಗಾವರ್ಗಿ ವಿಚಾರ ಇಲ್ಲ ಆಗುವುದಿಲ್ಲ. ಅದನ್ನು ಡಿವಿಜನಲ್ ಕಮೀಷನರ್ ಮಾಡುತ್ತಾರೆ. ಕೆಲವರು ನನಗೆ ಆ ವರ್ಗಾವರ್ಗಿ ವಿಚಾರದಲ್ಲಿ ದೂರುಗಳನ್ನು ತಿಳಿಸಿದ್ದರು. ಸಾಧ್ಯವಾದ ಮಟ್ಟಿಗೂ ಅವುಗಳನ್ನು ನಾನು ಸರಿಪಡಿಸಿದ್ದೇನೆ. ಸ್ವಾಮಿ, ನಾನು ಈ ತಾಶೀಲ್ದಾರರ ವಿಚಾರ ಹೇಳಬೇಕೆಂದರೆ, ಅವರಮೇಲೆ ಒಬ್ಬರಲ್ಲಾ ಒಬ್ಬರು ಅಪಾದನೆಗಳನ್ನು ಮಾಡೇ ಮಾಡಿದ್ದಾರೆ ಅರ್ಜಿಗಳನ್ನು ಹಾಕೇ ಹಾಕಿದ್ದಾರೆ. ಸರಿಯಾಗಿ ಕೆಲಸ ಮಾಡಸಿದ್ದವರನ್ನು ಶಿಕ್ಷೆ ಮಾಡಿದ್ದೇವೆ. ಆದರೆ ಸುಮ್ಮನೆ ಅಪಾದನೆಗಳನ್ನು ಮಾಡಿದರೆ ಅವರನ್ನು ಶಿಕ್ಷೆಗೆ ಗುರಿಪಡಿಸಲು ಸಾಧ್ಯವಿಲ್ಲ. ಅದಕ್ಕೆಲ್ಲಾ ಸಿ. ಸಿ. ಎ. ರೂಲ್ಸ್‌ಗಳಿವೆ. ವಿಚಾರಣೆ ನಡೆದು ಅದರಲ್ಲಿ ತಪಿತಸ್ಥರೆಂದು ಕಂಡುಬಂದವರನ್ನು ಕೈಬಿಟ್ಟಿಲ್ಲ ಶಿಕ್ಷೆ ಮಾಡಿದ್ದೇವೆ. ಆದರೆ ಶ್ರೀ ಶಿದ್ದವೀರಪ್ಪನವರು ಮೂರು ತಿಂಗಳಿಗೇ ವರ್ಗ......

ಶ್ರೀ ಎಚ್. ಸಿದ್ದವೀರಪ್ಪ.—ನಮ್ಮ ಪಕ್ಷದವರ್ಯಾರೂ ವರ್ಗ ಮಾಡಬೇಕೆಂದು ತಮ್ಮಲ್ಲಿಗೆ ಬರುವುದಿಲ್ಲ ತಾವು ನಿಮ್ಮ ಪಕ್ಷದವರ ಮಾತನ್ನು ಕೇಳಿ ವರ್ಗ ಮಾಡುತ್ತಿದ್ದೀರಿ ಅದು ಸರಿಯಲ್ಲ.

ಶ್ರೀ ಬಿ. ರಾಚಯ್ಯ.—ಇನ್ನು ಕೆಲವರು ತಪ್ಪು ಮಾಡಿದ್ದವರಿಗೇನು ಶಿಕ್ಷೆ ಮಾಡಿದ್ದೀರಿ ಎಂದು ಕೇಳಿದ್ದಾರೆ. ಹೆಡ್ ಕ್ವಾರ್ಟರ್ಸಿನಲ್ಲಿದ್ದ ಇಬ್ಬರು ತಾಶೀಲ್ದಾರರು ತಪ್ಪಿಸ್ಥರೆಂದು ಕಂಡುಬಂದುದರಿಂದ ಅವರನ್ನೂ ಮತ್ತು ಹಾಗೇ ತಪ್ಪಿತಸ್ಥರೆಂದು ಕಂಡುಬಂದ ಇಬ್ಬರು ಸಬ್‌ರಿಜಿಸ್ಟ್ರಾರರನ್ನೂ ಸಸ್‌ಪೆಂಡ್‌ಮಾಡಿ ಇಡಲಾಗಿದೆ. ಅವರ ಬಗ್ಗೆ ಫೈನಲ್ ಎನ್‌ಕ್ವೈರಿ ನಡೆಯುತ್ತಿದೆ. ಹಾಗೇ ಇನ್ನೊಬ್ಬ ಹೆಡ್‌ಕ್ವಾರ್ಟರ್ಸ್ ರಿಜಿಸ್ಟ್ರಾರರನ್ನು ಸಸ್ಪೆಂಡ್ ಮಾಡಿಟ್ಟಿದೆ. ಅವರ ಬಗ್ಗೆ ವಿಚಾರಣೆಯನ್ನು ಕೈಗೊಳ್ಳಲು ರೆಕಾರ್ಡ್‌ನ್ನು ವಿಜಿಲೆನ್ಸ್ ಆಫೀಸರ ಕಡೆಗೆ ಕಳುಹಿಸಲಾಗಿದೆ. ಅವರಿಂದ ಇಂಥವರು ಇಂತಿಂಥ ತಪ್ಪನ್ನು ಮಾಡಿದ್ದಾರೆಂದು ವರದಿ ಬಂದಮೇಲೆ ನಾವು ಆ ತಪ್ಪಿತಸ್ಥರ ಬಗ್ಗೆ ಸೂಕ್ತ ಕಾರ್ಯಕ್ರಮವನ್ನು ಕೈಗೊಳ್ಳದಿದ್ದ ಮೇಲೆ ನಾವು ಇಲ್ಲಿ ಕುಳಿತುಕೊಳ್ಳುವುದಕ್ಕೆ ಖಂಡಿತಾ ಯೋಗ್ಯರಲ್ಲ ಎಂದು............

ಶ್ರೀ ಎಚ್. ಸಿದ್ದವೀರಪ್ಪ.—ನಿರಪರಾಧಿಗಳನ್ನು ಶಿಕ್ಷೆಮಾಡಿ, ಅಪರಾಧಿಗಳನ್ನು ಕೈಬಿಡಿ ಎಂದು ಹೇಳುವುದಕ್ಕೆ ನಾವು ಅಷ್ಟೇನೂ ದಡ್ಡರಲ್ಲ.

ಶ್ರೀ ಬಿ. ರಾಚಯ್ಯ.—ತಾವು ದಯವಿಟ್ಟು ನನ್ನನ್ನು ರೇಗಿಸಿ, ಆ ಹೆಸರುಗಳನ್ನು ಹೇಳಿಸುವುದಕ್ಕೆ ಪ್ರಯತ್ನ ಮಾಡಬೇಡಿ. ಮೊನ್ನೆ ಆ ಬಾಗೇವಾಡಿಯಲ್ಲಿ ಕೆಲಸ ಮಾಡುತ್ತಿದ್ದ ಒಬ್ಬ ಹರಿಜನ ತಾಶೀಲ್ದಾರನು ತಪ್ಪು ಮಾಡಿದ್ದರಿಂದ ಕೆಲವರು ಬಂದು ಅವನನ್ನು ಬಿಟ್ಟುಬಿಡಿ ಎಂದರು. ನಾನು ಅದಕ್ಕೆ ಒಪ್ಪಲಿಲ್ಲ. ಅವನನ್ನು ಶಿಕ್ಷೆಮಾಡದೆ ಬಿಡಲಿಲ್ಲ. ನಾನು ಇಲ್ಲಿಯವರೆಗೂ ನನ್ನ ಇಲಾಖೆಗೆ ಸಂಬಂಧಪಟ್ಟ ಹಾಗೆ ಇಟ್ಟಿದ್ದ ಮನವಿಗಳ ಬಗ್ಗೆ ನಾನು ಮಾನ್ಯ ಸದಸ್ಯರುಗಳು ಎತ್ತಿದ್ದ ಆಕ್ಷೇಪಣೆಗಳಿಗೆಲ್ಲಾ ಸಾಕಷ್ಟು ಉತ್ತರವನ್ನು ಕೊಟ್ಟಿದ್ದೇನೆ. ನಾನು ಬೇರೆ ಇಲಾಖೆಗೆ ಸಂಬಂಧಪಟ್ಟ ವಿಚಾರ ಹೇಳಲು ಸಾಧ್ಯವಿಲ್ಲ. ಇಬ್ಬರು ಜಿಲ್ಲಾಧಿಕಾರಿಗಳ ಬಗ್ಗೆ ತನಿಖೆ ನಡೆದು ಅವರನ್ನು ತಪ್ಪಿತಸ್ಥರೆಂದು ತೀರ್ಮಾನ ಮಾಡಲಾಗಿದೆ. ನಾನು ಅವರ ಹೆಸರುಗಳನ್ನು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಅವರು ಹೆಚ್ಚು ಸರ್ವೀಸನ್ನು ಮಾಡಿದ್ದವರಾದ್ದರಿಂದ ಅವರನ್ನು ಕಂಪಲ್ಸರಿಯಾಗಿ ರಿಟೈರ್ ಮಾಡಬೇಕೆಂದು ಅದಕ್ಕೆ ಸರ್ವ ಪ್ರಯತ್ನಗಳನ್ನೂ ಮಾಡುತ್ತಿದ್ದೇವೆ. ಇನ್ನು ಸರ್ಕಾರದವರು ಎಲ್ಲೆಲ್ಲಿ ಅದಕ್ಷತೆಯಿಂದ ಕೆಲಸ ಮಾಡುತ್ತಿದ್ದಾರೆಂಬ ಬಗ್ಗೆ ಒಂದು ರಿವ್ಯೂ ಮಾಡುತ್ತಿದ್ದೇನೆ. ಆದರೆ ಜಾತೀಯತೆ ಇಲ್ಲಿ ತಾಂಡವಾಡುತ್ತಿದೆ ಎಂಬುದನ್ನು ನಾನು ಒಪ್ಪುವುದಿಲ್ಲ. ಈ ಪ್ರಜಾಸತ್ತೆ ಇರುವ ಕಡೆ ಅದನ್ನು ನೂರಕ್ಕೆ ನೂರು ಭಾಗ ನಿಲ್ಲಿಸಿ ಕೆಲಸ ಮಾಡುವುದಕ್ಕಾಗುವುದಿಲ್ಲ. ಆದರೆ ಎಷ್ಟು ಉಗ್ರವಾಗಿ ಶಿಕ್ಷೆ ಮಾಡಬೇಕೋ ಅಷ್ಟು ಉಗ್ರವಾಗಿ ಶಿಕ್ಷೆ ಮಾಡದಿದ್ದರೂ ಶಿಕ್ಷೆಯನ್ನು ಮಾಡೇ ಮಾಡುತ್ತೇವೆ. ಇನ್ನು ಶ್ರೀ ಬದರಿನಾರಾಯಣ್ ಅವರು ಸಣ್ಣಪುಟ್ಟ ನೌಕರರ ಬಗ್ಗೆ ಒಂದು ಇನ್‌ಸೆಂಟೀವ್ ಕೊಡತಕ್ಕ ಬಗ್ಗೆ ಏನು ಕಾರ್ಯಕ್ರಮ ಕೈಗೊಂಡಿದ್ದೀರಿ ಎಂದು ಕೇಳಿದ್ದಾರೆ. ಅನೇಕ ಆಫೀಸುಗಳಲ್ಲಿ ತಾಲ್ಲೂಕ್ ಆಫೀಸ್, ಜಿಲ್ಲಾಧಿಕಾರಿಗಳ ಆಫೀಸ್ ಮತ್ತು ಡಿವಿಜನಲ್ ಕಮೀಷನರ ಆಫೀಸ್ ಇಲ್ಲೆಲ್ಲಾ ಕೆಲವು ಕಡೆ ನೌಕರರ ಸಂಖ್ಯೆ ಹೆಚ್ಚಾಗಿದೆ ; ಇನ್ನು ಕೆಲವು ಕಡೆ ನೌಕರರ ಸಂಖ್ಯೆ ಬಹಳ ಕಡಿಮೆ ಇದ್ದು ಅಲ್ಲಿ ವರ್ಕ್ ಲೋಡ್ ಜಾಸ್ತಿಯಾಗಿದೆ. ಅದನ್ನೆಲ್ಲಾ ಸರಿತೂಗಿಸಲು ಪ್ರಯತ್ನ ನಡೆಸುತ್ತಿದ್ದೇನೆ. ಕೆಲಸವನ್ನು ಸಾಕಷ್ಟು ಕೊಟ್ಟು ಅವರಿಗೆ ಸಾಕಷ್ಟು ಸಂಬಳವನ್ನೂ ಕೊಡಬೇಕೆಂದು ಅವರು ಹೇಳಿದ್ದನ್ನು ನಾನು ಒಪ್ಪುತ್ತೇನೆ. ಅವರ ಸಲಹೆ ಬಹಳ ಚೆನ್ನಾಗಿದೆ. ಅದನ್ನು ನಾನು ಅನುಮೋದಿಸುತ್ತೇನೆ. ಎಲ್ಲೆಲ್ಲಿ ಅದಕ್ಷ ನೌಕರರಿದ್ದಾರೆಂಬುದನ್ನು ರಿವ್ಯೂ ಮಾಡಿ ಅವರ ಬಗ್ಗೆ ಸೂಕ್ತ ಕಾರ್ಯಕ್ರಮವನ್ನು ಕೈಗೊಂಡರೆ ಮುಂದೆ ದಕ್ಷತೆ

(ಶ್ರೀ ಬಿ. ರಾಚಯ್ಯ)

ಹೆಚ್ಚುವುದಕ್ಕೆ ಒಂದು ಅವಕಾಶವಾಗುತ್ತದೆ. ಆದರೆ ನಾನು ಹೇಳುತ್ತಿರುವುದು, ದೇಶದಲ್ಲಿ ಲಂಚ ಇಲ್ಲವೇ ಇಲ್ಲ, ಎಲ್ಲಾ ಸುಂದರವಾಗಿದೆ ಎಂದು ನಾನು ಹೇಳುವುದಿಲ್ಲ. ಇದನ್ನು ಸಂಪೂರ್ಣವಾಗಿ ಹೋಗಲಾಡಿಸುವುದಕ್ಕೆ ಅವಕಾಶವಿಲ್ಲದಿದ್ದರೂ ಇದನ್ನು ಸಾಧ್ಯವಾದಷ್ಟೂ ತಡೆಗಟ್ಟತಕ್ಕ ಕಾರ್ಯದಲ್ಲಿ ನಿಮ್ಮೆಲ್ಲರ ಸಹಕಾರ ಸರ್ಕಾರಕ್ಕೆ ಅತ್ಯವಶ್ಯಕ. ಆದರೆ ಶಿಕ್ಷೆಮಾಡಿ ದೇಶದಲ್ಲಿ ಪೂರ್ಣವಾಗಿ ಲಂಚವನ್ನು ತಡೆಗಟ್ಟುತ್ತೇವೆಂದರೆ ಅದು ಸಾಧ್ಯವಿಲ್ಲ. ಇದು ನೌಕರರ ಹೃದಯದಲ್ಲಿ ಮೂಡಿ ಬರಬೇಕು. ಅವರು ನಿಷ್ಠಾವಂತರಾಗಿ ಕೆಲಸ ಮಾಡಬೇಕೆಂಬ ಮನಸ್ಸು ಅವರಿಗೆ ಬರಬೇಕು. ಇದಕ್ಕೆ ನಮ್ಮ ನಿಮ್ಮ ಎಲ್ಲರ ಸಹಕಾರ ಬೇಕು.

ಇನ್ನು ಅರಣ್ಯ ಇಲಾಖೆಗೆ ಸಂಬಂಧಪಟ್ಟ ಹಾಗೆ ಹೆಚ್ಚು ಟೀಕೆಗಳು ಬರಲಿಲ್ಲ. ಚಿಕ್ಕಬಳ್ಳಾಪುರ ತಾಲ್ಲೂಕಿನಲ್ಲಿ ಪಂಚಾಯಿತಿ ಎಲೆಕ್ಷನ್ನಿನಲ್ಲಿ ರೆವಿನ್ಯೂ ಇನ್‌ಸ್ಪೆಕ್ಟರ್ಸ್ ಲಂಚವನ್ನು ಬಹಳವಾಗಿ ತೆಗೆದುಕೊಂಡು ಅನ್ಯಾಯಮಾಡಿದ್ದಾರೆ, ಅದಕ್ಕೆ ಮಂತ್ರಿಗಳು ರಕ್ಷಣೆ ಕೊಟ್ಟಿದ್ದಾರೆನ್ನುವ ರೀತಿಯಲ್ಲಿ ನಮ್ಮ ಪಕ್ಷದ ಸದಸ್ಯರಾದ ಮಾನ್ಯ ಶ್ರೀ ಪುಟ್ಟಸ್ವಾಮಿಯವರು ಶ್ರೀಮಾನ್ ಗಂಗಾಧರ್ ಅವರು ಹೇಳಿದ ಮಾತನ್ನು ಪುಷ್ಟೀಕರಿಸಿದರು. ಕಾಯಿದೆಯ ಪ್ರಕಾರ ಈ ಪಂಚಾಯಿತಿ ಎಲೆಕ್ಷನ್ ರೆವಿನ್ಯೂ ಮಂತ್ರಿಗಳಿಗೆ ಸಂಬಂಧಪಡುವುದಿಲ್ಲ. ರೆವಿನ್ಯೂ ಅಧಿಕಾರಿಗಳು, ಡಿವಿಜನಲ್ ಕಮೀಷನರ್, ಡೆಪ್ಯುಟಿ ಕಮಿಷನರ್ ಚುನಾವಣೆಗೆ ಬೇಕಾದ ಅನುಕೂಲಗಳನ್ನು ಕಲ್ಪಿಸಿಕೊಟ್ಟದ್ದು. ಅದರ ಬಗ್ಗೆ ಏನಾದರೂ ತಕರಾರು ಆಗಿದ್ದರೂ ಅವರಿಗೆ ಮತ್ತು ಆ ಚುನಾವಣೆಗೆ ಸಂಬಂಧಪಟ್ಟದ್ದು. ಅದರಲ್ಲಿ ನನಗೆ ಯಾರೂ ಇಂತಹ ರೆವಿನ್ಯೂ ಇನ್‌ಸ್ಪೆಕ್ಟರೇ ಅನ್ಯಾಯಮಾಡಿದ್ದಾರೆಂದು ತಿಳಿಸಲಿಲ್ಲ. ಚುನಾವಣೆ ನಡೆದಂಥ ಕಾಲದಲ್ಲಿ ರಿಟರ್ನಿಂಗ್ ಆಫೀಸರ್ ಅವರು ಆಗಿದ್ದರೆ ಅವರನ್ನು ವರ್ಗಮಾಡುವುದಕ್ಕೆ ಬರುವುದಿಲ್ಲ. ಅದಾದಮೇಲೆ ಈ ವಿಷಯ ನನ್ನ ಗಮನಕ್ಕೆ ಬಂದು ವೈಯಕ್ತಿಕವಾಗಿ ನನ್ನ ಮನಸ್ಸು ನೋಯಿತು. ನನ್ನ ಊರಿನಲ್ಲಿಯೇ ಪಂಚಾಯಿತಿ ಚುನಾವಣೆ ನಡೆಯಿತು. ಅದು ನಾನು ಹುಟ್ಟಿದ ಊರು. ಸುಮಾರು 26 ಕ್ಷೇತ್ರಗಳಲ್ಲಿ ಪಂಚಾಯಿತಿಯ ಚುನಾವಣೆ ನಡೆಯುವಾಗ ನಾನು ಅದರ ಬಗ್ಗೆ ಒಂದಿಷ್ಟೂ ಕೂಡ ಆಸಕ್ತಿಯನ್ನು ವಹಿಸಲಿಲ್ಲ ವೈಯಕ್ತಿಕವಾಗಿ ನನ್ನ ಮೇಲೆ ಬಂದಂಥ ಆರೋಪಣೆಯಿಂದ ನನ್ನ ಮನಸ್ಸು ಬಹಳ ನೊಂದಿದೆ. ಆದ್ದರಿಂದ ಅದಕ್ಕೆ ನಾನು ಜವಾಬ್ದಾರನಲ್ಲ. ಇನ್ನು ಮುಂದೆ ಇಂತಹ ಆಕ್ಷೇಪಣೆಗಳನ್ನು ಮಾಡಬೇಡಿ ಎಂಬುದಾಗಿ ನಾನು ತಮ್ಮಲ್ಲಿ ವಿನಂತಿಮಾಡಿಕೊಳ್ಳುತ್ತೇನೆ.

3-00 P.M.

ಶ್ರೀ ಎಚ್. ಸಿದ್ದವೀರಪ್ಪ.—ಭಗವತಿ ಅರಣ್ಯ ಪ್ರದೇಶದ ಬಗ್ಗೆ ಏನು ಮಾಡಿದ್ದೀರಿ ? ನಾನು ಆ ವಿಷಯ ಮಾತನಾಡಲಿಲ್ಲ. ಟೈಂ ಇಲ್ಲವೆಂದು ಅದನ್ನು ಹೇಳಲಿಲ್ಲ. ಹಿಂದೆ ವಾಗ್ದಾನ ಮಾಡಿದ್ದಿರಿ. ನನ್ನನ್ನು ಜೊತೆಯಲ್ಲಿ ಕರೆದುಕೊಂಡು ಹೋಗುತ್ತೇನೆ ಎಂಬುದಾಗಿ ಹೇಳಿ ನೀವು ಇದುವರೆಗೂ ಕರೆದುಕೊಂಡು ಹೋಗಲಿಲ್ಲ.

ಶ್ರೀ ಬಿ. ರಾಚಯ್ಯ.—ರೆವಿನ್ಯೂಗೆ ಸಂಬಂಧಪಟ್ಟಹಾಗೆ ಒಂದು ಖೋತಾ ನಿರ್ಣಯವನ್ನು ಕಳುಹಿಸಿದ್ದಾರೆ. ಮೂರು ವರ್ಷಗಳಿಂದಲೂ ಜಿಲ್ಲಾಧಿಕಾರಿಗಳು ಮೊಳಕಾಲ್ಮೂರು ತಹಸೀಲ್ದಾರರ ಮೇಲೆ ದೂರು ಕೊಟ್ಟರೂ ಇನ್ನೂ ವಿಚಾರಿಸಲಿಲ್ಲವೆಂದು ಹೇಳಿದೆ. ವಿಚಾರಣೆ ಮಾಡುವುದಕ್ಕೆ ಬೇರೆ ಕಾರಣದಿಂದ ಅವರು ರಿವರ್ಟ್ ಆಗಿದ್ದಾರೆ. ಜಿಲ್ಲಾಧಿಕಾರಿಗಳ ವರ್ಗಾವರ್ಗಿ ಈಗ ಬರುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು ಅದನ್ನು ವಿಚಾರಮಾಡುತ್ತಾರೆ.

ಇನ್ನು ಅರಣ್ಯ ಇಲಾಖೆಗೆ ಸಂಬಂಧಪಟ್ಟಹಾಗೆ ಮೈಸೂರು ಸಂಸ್ಥಾನದಲ್ಲಿ ಅಫಾರೆಸ್ಟೇಷನ್ ಕೆಲಸ ಬಹಳ ಚೆನ್ನಾಗಿ ನಡೆಯುತ್ತಿದೆಯೆಂಬುದು ಮಾನ್ಯ ಹಣಕಾಸಿನ ಸಚಿವರು ಕೊಟ್ಟಿರತಕ್ಕ ಪಟ್ಟಿಯಲ್ಲಿದೆ. ಅದನ್ನು ಪುನಃ ನಾನು ಹೇಳುವುದಿಲ್ಲ. ಅರಣ್ಯವನ್ನು ಕಾಪಾಡಿಕೊಳ್ಳುವುದಕ್ಕೆ ಮತ್ತು ಅರಣ್ಯವನ್ನು ಎಲ್ಲಾ ಕಡೆಗಳಲ್ಲಿಯೂ ಬೆಳೆಸುವುದಕ್ಕೆ ಹೆಚ್ಚು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂಬುದಾಗಿ ಸೂಚನೆ ಕೊಟ್ಟಿದ್ದಾರೆ. ಅದಕ್ಕೋಸ್ಕರವೇ 17 ಸ್ಕ್ವಾಡುಗಳನ್ನು ಹಾಕಿದ್ದೇವೆ. ಅವರಿಂದ ಅನೇಕ ಕಾರ್ಯಗಳು ಹೆಚ್ಚಿಗೆ ನಡೆದಿವೆ. ಆದರೆ ಅವರ ಕೆಲಸಕಾರ್ಯಗಳನ್ನು ಅಳತೆಮಾಡಬಾರದು. ಒಂದು ಲಕ್ಷ ಚಿಲ್ಲರೆ ರೂಪಾಯಿಗಳಷ್ಟು ಬೆಲೆ ಬಾಳತಕ್ಕ ಮರಮುಟ್ಟುಗಳನ್ನು ಅವರು ಹಿಡಿದಿದ್ದಾರೆ. ಕಳ್ಳಸಾಗಾಣಿಕೆ ಜಾಸ್ತಿ ನಡೆಯುತ್ತಿರುವುದನ್ನು ತಪ್ಪಿಸುತ್ತಿದ್ದಾರೆ. ಕಳ್ಳ ಸಾಗಾಣಿಕೆಯಿಂದ ಅನೇಕ ದವಸಧಾನ್ಯಗಳು ಹೋಗುತ್ತಿವೆ. ಅದನ್ನೂ ಕೂಡ ಹಿಡಿಯುತ್ತಿದ್ದಾರೆ. ಅರಣ್ಯದಲ್ಲಿ ಇಷ್ಟೊಂದು ಬೆಲೆಬಾಳತಕ್ಕ ಮರಗಳು ಇರುವಾಗ ಅಗರಬತ್ತಿ ತಯಾರುಮಾಡತಕ್ಕ ಗುಡಿ

ಗಾರರು, ಇಲ್ಲಿಸಿಟ್ ಡಿಸ್ಟಿಲರಿ ಇಟ್ಟುಕೊಂಡಿರುವವರು ಮದ್ರಾಸಿನಲ್ಲಿ ಹೆಚ್ಚುಮಾಡಿದ್ದರಲ್ಲಿ ಸ್ವಲ್ಪ ಇಟ್ಟುಕೊಂಡು ನಮ್ಮ ಕಡೆ ಸಾಗಿಸುತ್ತಿದ್ದಾರೆ. ಅರಣ್ಯದ ಕಡೆಯಿಂದ ಉತ್ಪತ್ತಿಯಾಗುವ ಗಂಧದ ಮರಗಳನ್ನು ನಮ್ಮ ಸ್ಯಾಂಡಲ್ ಆಯಿಲ್ ಫ್ಯಾಕ್ಟರಿಗೆ ಕೊಡುತ್ತಿರುವುದರಿಂದ ಅಲ್ಲಿ ಕಳ್ಳ ಸಾಗಾಣಿಕೆ ಕಡಿಮೆಯಾಗುತ್ತಿದೆ. ಇದರಿಂದ ಇಲಸಿಟ್ ಡಿಸ್ಟಿಲರ್ಸ್ ಅವರ ಕಾರ್ಯಾಚರಣೆ ಸಹ ಕಡಿಮೆಯಾಗುತ್ತಿದೆ, ನಮ್ಮ ಕಾರ್ಖಾನೆಗೆ ಕೊಟ್ಟಮೇಲೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಎಣ್ಣೆ ಕಡಿಮೆ ಬೆಲೆಗೆ ಹೋಗುತ್ತದೆ. ಅದರಿಂದಾಗಿ ಅವರಿಗೆ ಕಡಿಮೆ ಉತ್ಪತ್ತಿ ಬಂದು ಅಗರಬತ್ತಿಯವರಿಗೆ ಕೆಲವು ರಿಯಾಯಿತಿಗಳನ್ನು ಕೊಟ್ಟಿದ್ದಾರೆ. ಗುಡಿಗಾರರಿಗೂ ಕೊಟ್ಟಿದ್ದಾರೆ. ಸಾಫ್ಟ್ ವುಡ್ ಮತ್ತು ಅನೇಕ ಪ್ಲೈವುಡ್ ಇಂಡಸ್ಟ್ರೀಸ್, ಮ್ಯಾಚ್ ಇಂಡಸ್ಟ್ರೀಸ್, ಮತ್ತು ಅದರ ಪ್ಯಾಕಿಂಗ್ ಕೇಸುಗಳನ್ನು ಮಾಡುವುದು–ಇವೆಲ್ಲವನ್ನೂ ಕಡಿಮೆ ದರದಲ್ಲಿ ಕೊಟ್ಟಿದ್ದಾರೆಂಬುದಾಗಿ ತಿಳಿಸಿ ಮಾನ್ಯ ಶ್ರೀ ಶಾಸ್ತ್ರಿಗಳವರು ಒಂದು ಖೋತಾ ನಿರ್ಣಯವನ್ನು ಕಳುಹಿಸಿದ್ದಾರೆ. ಎಲ್ಲಾ ಪ್ರಾಂತಗಳಲ್ಲಿಯೂ ಏನೇನು ಸಾಫ್ಟ್ ವುಡ್ ಕೊಟ್ಟಿದ್ದಾರೋ ಅದಕ್ಕಿಂತಲೂ ದರ ಇಲ್ಲಿ ಹೆಚ್ಚಾಗಿದೆ. ನನ್ನಲ್ಲಿ ಒಂದು ಕಂಪಾರೆಟಿವ್ ಸ್ಟೇಟ್ ಮೆಂಟ್ ಇದೆ. ಎಲ್ಲಾ ಫ್ಯಾಕ್ಟರಿಗಳಿಗೂ ಕೂಡ ಹೋದವರ್ಷ ದರ ಏನಿತ್ತು ಅದಕ್ಕಿಂತ ಅರ್ಧದಷ್ಟು ಈಗ ತೆಗೆದುಕೊಂಡಿದ್ದಾರೆ. ನಮ್ಮ ರಾ-ಮೆಟೀರಿಯಲ್ಸ್ ಬೆಲೆ ಜಾಸ್ತಿ. ಆದ್ದರಿಂದ ಅವರು ಉತ್ಪನ್ನ ಮಾಡತಕ್ಕ ದಾಸ್ತಾನು ಸಾಕಷ್ಟು ರೀತಿಯಲ್ಲಿ ಮಾರಾಟಮಾಡದೇ ಇರುವುದರಿಂದ ದರಗಳು ಕಡಿಮೆಯಾಗಿದೆಯೆಂದು ಊಹಿಸಬಹುದು. ಮತ್ತೆ ಸ್ಯಾಂಡಲ್‌ವುಡ್ ಆಯಿಲ್ ಫ್ಯಾಕ್ಟರಿಯಿಂದ ಪ್ರತಿವರ್ಷವೂ ಅವನ್ನು ಕೊಡುತ್ತಿದ್ದೇವೆ. ಅಲ್ಲಿ ಒಣಗಿಹೋಗಿರತಕ್ಕ ಗಂಧದ ಮರಗಳನ್ನು ಹಾಗೂ ಅವರ ಮುದ್ರೆಯಾಗಿರತಕ್ಕ ಗಂಧದ ಮರಗಳನ್ನು ತೆಗೆಯಬೇಕೆಂದು ಹೇಳಿದೆ. ಅಲ್ಲದೆ ಕದ್ದುಕೊಂಡು ಹೋಗುವ ಅದರಲ್ಲಿಯೂ ಬಾರ್ಡರ್ ನಲ್ಲಿರತಕ್ಕ ಎಲ್ಲಾ ಗಂಧದ ಮರಗಳನ್ನು ಸರ್ವೆಮಾಡಿಸಿ ಅವುಗಳನ್ನು ಇವತ್ತು ತೆಗೆಸುತ್ತಿದ್ದೇವೆ. ಅದರ ಜೊತೆಗೆ ಮೈಸೂರು ಸಂಸ್ಥಾನದಲ್ಲಿ ಗಂಧದ ಮರಗಳನ್ನು ಬೆಳೆಸತಕ್ಕ ರೈತರಿಗೆ ಸುಮಾರು ಸೇಕಡ 50ರಷ್ಟು ರಾಯಲ್ಟಿ ಕೊಡಬೇಕೆಂದು ರೂಲ್ಸ್‌ನಲ್ಲಿ ಅಳವಡಿಸಿದ್ದೇವೆ. ಅವರು ತಮ್ಮ ಗಂಧದ ಮರಗಳನ್ನು ಬೆಳೆಸಿ ಪೋಷಿಸಿಕೊಂಡು ಅವುಗಳ ರಕ್ಷಣೆ ಬಗ್ಗೆ ಹೆಚ್ಚು ಆಸಕ್ತಿ ವಹಿಸಬೇಕು. ಇದರಿಂದ ಗಂಧದ ಮರಗಳ ಕಳ್ಳಸಾಗಾಣಿಕೆಯೂ ಕಡಿಮೆಯಾಗುತ್ತದೆಂದು ನಾನು ಭಾವಿಸಿದ್ದೇನೆ.

ಇನ್ನು ಸಾಗರ ಸಬ್ ಡಿವಿಜನ್ನಿನಲ್ಲಿ ಹೆಚ್ಚಿನ ರೀತಿಯಲ್ಲಿ ಕಳ್ಳತನಗಳು ಆಗುತ್ತಿವೆ. ಕಳ್ಳ ಸಾಗಾಣಿಕೆಗಳು ಹೆಚ್ಚಾಗಿ ಅನೇಕ ಬೆಲೆಯಾಗತಕ್ಕ ಪದಾರ್ಥಗಳು ಲಾರಿಗಳಲ್ಲಿ ಹೋಗುತ್ತಿದ್ದರೂ ಸರ್ಕಾರದವರು ಸುಮ್ಮನೆ ಇದ್ದಾರೆಂದು ಹೇಳಿದ್ದಾರೆ. ಅದು ಸರಿಯಲ್ಲ. ನಮ್ಮ ಸ್ಕ್ವಾಡ್‌ನವರು ಇದ್ದಾರೆ. ಪೋಲೀಸಿನವರ ಚೆಕ್‌ಪೋಸ್ಟ್ಸ್ ಇರುತ್ತವೆ. ಅವರೆಲ್ಲರೂ ಅವನ್ನು ಹಿಡಿಯುತ್ತಿದ್ದಾರೆ. ಈ ವಿಚಾರದ ಬಗ್ಗೆ ಪತ್ರಿಕೆಗಳಲ್ಲಿ ಎಷ್ಟೋ ವರದಿಯಾಗಿರುತ್ತವೆ. ಆದರೂ ಕಳ್ಳತನಗಳು ಜಾಸ್ತಿ ನಡೆಯುತ್ತಲೇ ಇವೆಯೆಂದು ಅನೇಕರಿಗೆ ಭಾಸವಾಗುತ್ತಿದೆ. ಹಿಂದೆ ಕಳ್ಳತನಗಳು ಆಗಿದ್ದರೂ ಹೆಚ್ಚು ಅವನ್ನು ಹಿಡಿಯುವುದಕ್ಕೆ ವ್ಯವಸ್ಥೆ ಇರಲಿಲ್ಲ. ಆಗ ಸಣ್ಣಪುಟ್ಟ ಅಧಿಕಾರಿಗಳೂ ಕೂಡ ಅವರೊಡನೆ ಸೇರುತ್ತಿದ್ದರು. ಈ ವರ್ಷದಿಂದ ಚೆಕ್‌ಪೋಸ್ಟ್‌ಗಳನ್ನು ಹೆಚ್ಚುಮಾಡಿದ್ದೇವೆ. ಅಲ್ಲಿ ಕೆಲಸಮಾಡುವವರಿಗೆ ಒಂದು ರೀತಿಯಲ್ಲಿ ಹೆಚ್ಚು ಹಣವನ್ನು ಅಲೋಯನ್ಸ್ ರೂಪದಲ್ಲಿ ಕೊಡುವಹಾಗೆ ಮಾಡಲಾಗಿದೆ. ಆ ಒಂದು ಕೆಲಸವನ್ನು ಚೆನ್ನಾಗಿ ನಡೆಸುತ್ತಿದ್ದೇವೆ. ಒಟ್ಟಿನಲ್ಲಿ ಅರಣ್ಯ ಸಂಪತ್ತು ಹೆಚ್ಚು ಹಾಳಾಗದೇ ಇರುವ ರೀತಿಯಲ್ಲಿ ಹಾಗೂ ದುರ್ವಿನಿಯೋಗವಾಗದೇ ಇರುವ ರೀತಿಯಲ್ಲಿ ಏನೇನು ಕ್ರಮಗಳನ್ನು ತೆಗೆದುಕೊಳ್ಳಬೇಕೋ ಅವನ್ನು ಮಾಡುತ್ತಿದ್ದೇವೆ. ಮಲೆ ನಾಡಿನಲ್ಲಿ ಹೆಚ್ಚು ಭೂಮಿಯನ್ನು ಸಾಗುವಳಿಗೆ ಕೊಡುತ್ತಿದ್ದೇವೆ. ಆದರೆ ಮಳೆಯ ಅಭಾವ ಹೆಚ್ಚಾಗುತ್ತಾ ಇದೆ. ಆದರೂ ಅಲ್ಲಿರತಕ್ಕ ಭೂಮಿಯಲ್ಲಿ ಹೆಚ್ಚು ಬೆಳೆ ಬೆಳೆಯುವ ಒಂದು ಹವ್ಯಾಸವನ್ನು ಸರ್ಕಾರದವರು ಮಾಡುತ್ತಿದ್ದಾರೆ. ದಟ್ಟವಾದ ಕಾಡುಗಳಲ್ಲಿ ಯೂಕಲಿಪ್ಟಸ್ ಪ್ಲಾಂಟೇಷನ್ನು ಮತ್ತು ಇತರ ಗಿಡಗಳೂ ಸಹ ಬೆಳೆಯುವ ರೀತಿಯಲ್ಲಿ ವ್ಯವಸ್ಥೆಮಾಡುತ್ತಿದ್ದೇವೆ. ಯೂಕಲಿಪ್ಟಸ್ ಪ್ಲಾಂಟೇಷನ್ನುಗಳನ್ನು ಪ್ರತಿವರ್ಷವೂ ಗ್ರೀನ್ ಏರಿಯಾಗಳಲ್ಲಿ ಬೆಳೆಸಿರಿ ಎಂಬುದಾಗಿ ಮಾನ್ಯ ಶ್ರೀ ಜಾಲಿಶೆಟ್ಟಿಯವರು ಮತ್ತು ಶ್ರೀ ಬದರೀನಾರಾಯಣ್ ಅವರು ತಿಳಿಸಿದ್ದಾರೆ. ಮಲೆನಾಡಿನ ಭಾಗದಲ್ಲಿ ದಟ್ಟವಾದ ಕಾಡುಗಳಲ್ಲಿ ಈಗಿನ ವರ್ಕಿಂಗ್ ಪ್ಲಾನ್ ಪ್ರಕಾರ ಏನೇನು ಅಭಿವೃದ್ಧಿ ಮಾಡಬೇಕೋ ಅಷ್ಟನ್ನು ಮಾಡುತ್ತೇವೆ. ಆದರೆ ಕೆಲವು ಪ್ರದೇಶಗಳನ್ನು ಮಾತ್ರ ಬಿಟ್ಟು ಇನ್ನುಳಿದ ಮೈದಾನ ಭಾಗಗಳಲ್ಲಿ ಒಳ್ಳೊಳ್ಳೆಯ ಪ್ಲಾಂಟೇಷನ್ನುಗಳನ್ನು ಬೆಳೆಸುವುದಕ್ಕೆ ಈ ವರ್ಷದಿಂದಲೇ ಪ್ರಯತ್ನ ಮಾಡುತ್ತಿದ್ದೇವೆ. ಬೆಳಗಾಂ ಮತ್ತು ಬಿಜಾಪುರಗಳಲ್ಲಿ ಮೊದಲು ಸ್ವಲ್ಪ ಭಾಗವನ್ನು ಅರಣ್ಯ ಶಾಖೆಗೆ ಅಫಾರೆಸ್ಟೇಷನ್ನಿಗೋಸ್ಕರ ಕೊಟ್ಟು ಮತ್ತೆ ಮಂಡ್ಯ, ತುಮಕೂರು, ಚಿತ್ರದುರ್ಗದಲ್ಲಿ ಕೆಲವು ಜಮೀನುಗಳನ್ನು ಕೊಡಲಾಗುತ್ತದೆ. ಅಲ್ಲಿ ಸೇಕಡ 2ರಷ್ಟು ಭೂಮಿಯನ್ನು ಕಡಿಮೆಮಾಡುತ್ತೇವೆ. ಅರಣ್ಯ ಶಾಖೆಗೆ ಕೊಡಬೇಕಾಗುತ್ತದೆ. ಸೇಕಡ 33ರಷ್ಟು ನ್ಯಾಷನಲ್ ಅವರೇಜ್ ಇದ್ದರೆ ನಮ್ಮ ಸಂಸ್ಥಾನದಲ್ಲಿ ಅರಣ್ಯ ಪ್ರದೇಶ ಸುಮಾರು ಸೇಕಡ 27ರಷ್ಟು ಇದೆ. ಇದನ್ನು

(ಶ್ರೀ ಬಿ. ರಾಚಯ್ಯ

ಇನ್ನೂ ಹೆಚ್ಚಿಸಬೇಕೆಂದು ಪ್ರಯತ್ನಮಾಡಿ ಸುಮಾರು 5 ಲಕ್ಷ ಎಕರೆಗಳಷ್ಟು ಅರಣ್ಯವನ್ನು ರೆವಿನ್ಯೂ ಇಲಾಖೆಯಿಂದ ಸೇರಿಸಿಕೊಂಡರೆ ಕೇವಲ ಸೇಕಡ 2ರಷ್ಟು ಜಾಸ್ತಿಯಾಗುತ್ತದೆಯೇ ವಿನಹ, ದಟ್ಟವಾದ ಕಾಡುಗಳನ್ನು ಹೆಚ್ಚಿಗೆ ಸಾಗುವಳಿಗೆ ಕೊಡುವುದರಿಂದ, ಮಳೆಯು ಅಭಾವ ಆಗುತ್ತದೆ, ಕೆರೆಕಟ್ಟೆಗಳಲ್ಲಿ ಹೂಳು ತುಂಬುತ್ತದೆ. ಕೇವಲ ಸೇಕಡ 80ರಷ್ಟು ಹೆಚ್ಚಿಗೆ ಇರುವ ಉತ್ತರ ಕನ್ನಡ ಜಿಲ್ಲೆ ಬಿಟ್ಟು ಅರಣ್ಯ ಭೂಮಿಯನ್ನು ಧಾರಾಳವಾಗಿ ಸಾಗುವಳಿಗೆ ಕೊಡುವುದು ಅಷ್ಟೊಂದು ಸೂಕ್ತವಲ್ಲವೆಂದು ನನ್ನ ಭಾವನೆ.

ಈ ದೃಷ್ಟಿಯಿಂದ ಮಾನ್ಯ ಸದಸ್ಯರು ಏನು ಸಲಹೆಗಳನ್ನು ಕೊಟ್ಟಿದ್ದಾರೆಯೋ ಅವುಗಳನ್ನು ಗಮನದಲ್ಲಿಟ್ಟುಕೊಂಡಿದ್ದೇನೆ. ಹೆಚ್ಚು ಅರಣ್ಯವನ್ನು ಬೆಳೆಸಬೇಕು. ಇರತಕ್ಕಂಥ ಅರಣ್ಯವನ್ನು ರಕ್ಷಿಸಬೇಕು ಎನ್ನತಕ್ಕ ವಿಚಾರ ಏನಿದೆ ಇದರಲ್ಲಿ ನಾವು ಸಾಕಷ್ಟು ಹೆಚ್ಚಿನ ಪ್ರಯತ್ನ ಮಾಡುತ್ತಿದ್ದೇವೆ. ಧಾರವಾಡ ಜಿಲ್ಲೆಯಲ್ಲಿ ಸುಮಾರು 50 ಲಕ್ಷ ರೂಪಾಯಿಗಳ ಬೆಲೆ ಬಾಳತಕ್ಕ ಮರಮುಟ್ಟುಗಳನ್ನು ಬಹಿರಂಗವಾಗಿ ಕೊಂಡುಕೊಳ್ಳುತ್ತಿದ್ದಾರೆ ಎಂದು ಶ್ರೀ ಬೊಮ್ಮಾಯಿ ಅವರು ಹೇಳಿದರು. ಇದುವರೆಗೆ ಬೆಳಗಾಮ್, ಬಿಜಾಪುರ, ಸೌತ್ ಕೆನರಾ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಸುಮಾರು 76 ಸಾವಿರ ರೂಪಾಯಿಗಳ ಬೆಲೆಬಾಳತಕ್ಕ ಮರಮುಟ್ಟುಗಳನ್ನು ಜನಗಳಿಗೆ ಹಂಚಿದ್ದೇವೆ. ಇಡೀ ಮೈಸೂರು ಸಂಸ್ಥಾನಕ್ಕೆ ಸಂಬಂಧಪಟ್ಟಹಾಗೆ ಒಂಭತ್ತು ಲಕ್ಷ ರೂಪಾಯಿಗಳ ಬೆಲೆ ಬಾಳತಕ್ಕ ಮರಮುಟ್ಟುಗಳನ್ನು ನಾವು ಹಂಚಿರುವುದರಿಂದ ತಾವುಗಳೇ ಊಹೆ ಮಾಡಬಹುದು. 50 ಲಕ್ಷ ರೂಪಾಯಿಗಳ ಬೆಲೆ ಬಾಳತಕ್ಕ ಮರಮುಟ್ಟುಗಳನ್ನು ಕೊಟ್ಟಿಲ್ಲ ಎಂಬುದನ್ನು. ಹರಿಜನರಿಗೆ ಬೇರೆ ಬೇರೆ ಭಾಗಗಳಲ್ಲಿ ಮಾಫಿ ಲೈಸೆನ್ಸ್ ಕೊಟ್ಟು ಮರಗಳನ್ನು ತೆಗೆದುಕೊಂಡು ಹೋಗುವುದಕ್ಕೆ ಅವಕಾಶವಿತ್ತು. ಈಗ ಅದನ್ನು ತೆಗೆದುಹಾಕಿ ಹರಿಜನರು ಮನೆಕಟ್ಟಿಕೊಳ್ಳುವುದಕ್ಕೆ ಮರಮುಟ್ಟುಗಳನ್ನು ಕೊಡುವ ಸಂಬಂಧವಲ್ಲಿ ಒಂದು ಕಾಯಿದೆಯನ್ನು ಮಾಡಿದ್ದೇವೆ. ಈಗ ಹರಿಜನರು ಮನೆಕಟ್ಟಿಕೊಳ್ಳತಕ್ಕವರು ಪಂಚಾಯಿತಿ ಅಧ್ಯಕ್ಷರು ಮತ್ತು ಆಯಾ ತಾಲ್ಲೂಕಿನ ಬಿ. ಡಿ. ಓ. ಅವರಿಂದ ಒಂದು ಸರ್ಟಿಫಿಕೇಟ್ ಮಾಡಿಸಿದರೆ, ಮತ್ತು ಆ ಸೈಟಿನಲ್ಲಿ ಮನೆಕಟ್ಟುವುದಕ್ಕೆ ಲೈಸೆನ್ಸ್ ಕೊಟ್ಟಿದ್ದರೆ ಅಂಥವರಿಗೆ ಮರಗಳನ್ನು ಕೊಡಬಹುದೆಂದು ಡಿ. ಎಫ್. ಓ. ಅವರಿಗೆ ಅಧಿಕಾರವನ್ನು ಕೊಡಲಾಗಿದೆ. ಅವರು ಒಂದು ಪಟ್ಟಿಯನ್ನು ತಯಾರು ಮಾಡಿಕೊಂಡು ಪ್ರಯಾರಿಟಿ ಪ್ರಕಾರ ಹರಿಜನರಿಗೆ ಮನೆಕಟ್ಟಿಕೊಳ್ಳುವುದಕ್ಕೆ ಮರಗಳನ್ನು ಕೊಡುತ್ತಿದ್ದಾರೆ. ಹಿಂದೆ ಹರಿಜನರಿಗೆ ಮನೆ ಕಟ್ಟಿಕೊಳ್ಳುವುದಕ್ಕೆ ಹೆಂಚುಗಳನ್ನು ಸರ್ಕಾರದವರು ಒದಗಿಸುತ್ತಿದ್ದರು. ಹೆಂಚುಗಳು ದುರುಪಯೋಗವಾಗುತ್ತವೆ ಎನ್ನುವ ತಕರಾರು ಬಂದದ್ದರಿಂದ ಆ ಯೋಜನೆಯನ್ನು ತೆಗೆದುಹಾಕಿದರು. ಈಗ ಹರಿಜನರಿಗೆ ಸಾಲ ಕೊಟ್ಟರೆ, ಅದೂ ದುರುಪಯೋಗವಾಗುತ್ತದೆ ಎಂದು ಹೇಳುವುದಾದರೆ ಅವರಿಗೆ ಸಾಲವನ್ನು ಕೊಡುವುದು ಬೇಡವೇ? ನಾಲ್ಕು ಜಿಲ್ಲೆಗಳಲ್ಲಿ 76 ಸಾವಿರ ರೂಪಾಯಿಗಳ ಮರಗಳ ಮಾರಾಟವಾಗಿರುವುದನ್ನು 50 ಲಕ್ಷ ರೂಪಾಯಿಗಳ ಮರಗಳ ಮಾರಾಟವಾಗಿದೆ ಎಂದು ಮಾನ್ಯ ಸದಸ್ಯರು ಹೇಳಿದರು. ಅವರು ಎಷ್ಟರಮಟ್ಟಿಗೆ ಭೂತ ಕನ್ನಡಿಯನ್ನಿಟ್ಟು ನೋಡಿದ್ದಾರೆಯೋ ನನಗಂತೂ ಗೊತ್ತಿಲ್ಲ. ನಾನು ಇಷ್ಟು ಮಾತ್ರ ತಮ್ಮ ಗಮನಕ್ಕೆ ತರುತ್ತೇನೆ. ಹರಿಜನರಿಗೆ ಸರ್ಕಾರದವರು ಕೊಟ್ಟಿರತಕ್ಕಂಥ ಸೌಲಭ್ಯಗಳನ್ನು ದುರುಪಯೋಗ ಮಾಡಿದಂಥ ಸಂದರ್ಭಗಳನ್ನು ನನ್ನ ಗಮನಕ್ಕೆ ತಂದಾಗ ಅದನ್ನು ಎನ್‌ಕ್ವೈರಿಮಾಡಿ ಇಬ್ಬರನ್ನು ಹಿಡಿಸಿದ್ದೇನೆ. ಕೆ. ಆರ್. ನಗರ, ಬೆಂಗಳೂರು ಜಿಲ್ಲೆ ಕೋಲಾರ ಜಿಲ್ಲೆ ಮತ್ತು ಚಿಕ್ಕ ಮಗಳೂರು ಈ ಪ್ರದೇಶಗಳಲ್ಲಿ ಅರಣ್ಯ ಇಲಾಖೆಯ ಅಧಿಕಾರಿಗಳು ಹರಿಜನರಿಗೆ ಮರಗಳನ್ನು ಕೊಟ್ಟಮೇಲೆ ಅವರು ಅದನ್ನು ಉಪಯೋಗ ಮಾಡಿದ್ದಾರೆಯೋ ಅಥವಾ ಇಲ್ಲವೋ ಎಂಬುದನ್ನು ನಮ್ಮ ಇಲಾಖೆಯ ಸ್ಕ್ವಾಡ್‌ನವರು ಸಾಧ್ಯವಾದಷ್ಟು ಪರೀಕ್ಷೆ ಮಾಡುತ್ತಿದ್ದಾರೆ. ಅಂಥಾ ದುರುಪಯೋಗವಾಗಿರುವುದು ಕಂಡುಬಂದಿಲ್ಲ. ಮರಗಳನ್ನು ಕೊಡುವುದು ಒಂದು ಮಾತ್ರವಲ್ಲ, ಬಾವಿಗಳಿಗೆಂದು ಸಾಲ ತೆಗೆದುಕೊಂಡು ಭಾವಿಯನ್ನು ತೆಗೆಯದೇ ಇರುವುದು, ಕೈಗಾರಿಕೆಯನ್ನು ಸ್ಥಾಪನೆ ಮಾಡುತ್ತೇವೆಂದು ಸರ್ಕಾರದಿಂದ ಸಾಲವನ್ನು ತೆಗೆದುಕೊಂಡು ಕೈಗಾರಿಕೆಯನ್ನು ಸ್ಥಾಪನೆ ಮಾಡದೇಇರುವುದು, ಈ ರೀತಿಯಾಗಿ ಸರ್ಕಾರದಿಂದ ಸಾಲ ತೆಗೆದುಕೊಂಡದ್ದು ದುರುಪಯೋಗವಾಗಿದೆ ಎಂದು ಸರ್ಕಾರದವರು ಕೊಡತಕ್ಕಂಥ ಒಂದು ಸೌಲಭ್ಯವನ್ನು ನಿಲ್ಲಿಸತಕಂಥಾದ್ದು ಸರಿಯಲ್ಲ. ಯಾರಾದರೂ ತಪ್ಪು ಮಾಡಿದ್ದರೆ ಅವರಿಗೆ ಶಿಕ್ಷೆಯನ್ನು ವಿಧಿಸಿ ಎಂದು ತಾವು ಹೇಳಿ, ಅದರಂತೆ ತಪ್ಪಿತಸ್ಥರ ಮೇಲೆ ಏನು ಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ತಾವು ತೆಗೆದುಕೊಳ್ಳುತ್ತೇವೆ ಎಂದು ನಾನು ಇಷ್ಟುಮಾತ್ರ ಹೇಳುತ್ತೇನೆ.

ಇನ್ನು ನನಗೆ ಸಂಬಂಧಪಟ್ಟ ಎರಡು ಇಲಾಖೆಗಳ ವಿಷಯದಲ್ಲೂ ಮಾನ್ಯ ಸದಸ್ಯರನೇಕರು ಕೆಲವಾರು ಉಪಯುಕ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಎಲ್ಲವನ್ನೂ ಕೂಡ ಗಮನವಿಟು

ಕೇಳಿ ಬರೆದುಕೊಂಡು ನೋಟ್ಸ್ ಇಟ್ಟುಕೊಂಡಿದ್ದೇನೆ. ಮಾನ್ಯ ಸದಸ್ಯರು ಹೇಳಿದಂಥಾ ಎಲ್ಲಾ ವಿಚಾರಗಳಿಗೂ ನಾನು ಉತ್ತರವನ್ನು ಕೊಡುವುದಕ್ಕೆ ಸಾಧ್ಯವಾಗಲಿಲ್ಲ. ಮಾನ್ಯ ಸದಸ್ಯರು ಕೊಟ್ಟಿರತಕ್ಕ ಉಪಯುಕ್ತವಾದ ಸಲಹೆಗಳಲ್ಲಿ ಯಾವು ಯಾವುದನ್ನು ಕಾರ್ಯಗತ ಮಾಡುವುದಕ್ಕೆ ಸಾಧ್ಯವಿದೆ ಅವುಗಳನ್ನು ಮಾಡುವುದಕ್ಕೆ ನಾನು ಸರ್ವಪ್ರಯತ್ನ ಮಾಡುತ್ತೇನೆ ನನ್ನ ಎರಡು ಬೇಡಿಕೆಗಳ ವಿಷಯದಲ್ಲಿ ಸಮಜಾಯಿಷಿ ಕೊಡುವುದಕ್ಕೆ ತಾವುಗಳೆಲ್ಲರೂ ಶಾಂತತೆಯಿಂದ ಕೇಳಿದ್ದೀರಿ. ಅದಕ್ಕಾಗಿ ತಮಗೆಲ್ಲರಿಗೂ ನನ್ನ ವಂದನೆಗಳನ್ನ ಅಪಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

Mr. CHAIRMAN.—Now that the Chair has promised to give some time for clarifications, I do not mind giving half-an-hour. It is already 3-15; clarifications can be sought upto 3-45 P.M. Clarification does not mean making any statement or speeches. The Hon'ble Minister has given his reply. If the Hon'ble Members have got any doubt, it is open to them to get their doubts cleared. I will permit only half an-hour. My request is that the clarifications or doubts should be very short and it should not be in the form of speech.

Sri H. SIDDAVEERAPPA.—I have got only two points to get clarifications. One is, last time the Hon'ble Minister promised that he would conduct an enquiry about the one incident I mentioned about Bhagvati Project where when a contractor was about to lose heavy amounts, he set fire deliberately to the forest and caused heavy damage. I want to know what action you have taken on that? The other clarification is that in regard to the Bhadra Project you know, the development work has been delayed, because we are not able to get the Revenue Record copies. The Agricultural Refinance Corporation wants to invest about 2½ crores of rupees for development of that project. They want only revenue records. It is only due to the lapses on your part, that the money which could have been otherwise got and utilised, we have not been able to utilise it. Please let me know what you have to say about this.

ಶ್ರೀ ಬಿ. ರಾಚಯ್ಯ.—ಕಳೆದ ಶಾಸನ ಸಭೆಯಲ್ಲಿ ನಾನು ಒಂದು ಆಶ್ವಾಸನೆಯನ್ನು ಕೊಟ್ಟಿದ್ದ. ಅದರ ಪ್ರಕಾರ ಶ್ರೀ ನಾಗರಾಜ್ ಡಿಸ್ಟ್ರಿಕ್ಟ್ ಜಡ್ಜ್ ಎನ್ನುವವರನ್ನು ಭಗವತಿ ಫಾರೆಸ್ಟಿನ ಫೈರ್ ಆಕ್ಸಿಡೆಂಟಿನ ಎನ್‌ಕ್ವೈರಿ ಮಾಡುವುದಕ್ಕೆ ಸರ್ಕಾರದವರು ನೇಮಿಸಿದ್ದಾರೆ. ಆ ಕೆಲಸ ನಡೆಯುತ್ತಿದೆ. ಎರಡನೆಯದಾಗಿ ಅದರ ಜೊತೆಗೆ ನಾನು ಕಳಸದಮೇಲೆ ಹೋಗಿ ಶೃಂಗೇರಿಯವರೆಗೂ ಬೆಟ್ಟ ಗುಡ್ಡ ಹತ್ತಿ ಇಳಿದು ಫಾರೆಸ್ಟನ್ನು ನಾನು ನೋಡಿಕೊಂಡು ಬಂದಿದ್ದೇನೆ.

ಇನ್ನು ಎರಡನೆಯ ಪ್ರಶ್ನೆ ಬೀದರ್ ಜಿಲ್ಲೆಯಲ್ಲಿ ಆರ್. ಆರ್. ರಿಕಾರ್ಡ್ಸ್ ಅಪ್‌ಟುಡೇಟ್ ಮಾಡುವುದಕ್ಕೆ ಆಗಿಲ್ಲ. ಅದನ್ನು ಎಷ್ಟು ತೀವ್ರತೆಯಿಂದ ಮಾಡಬೇಕೋ ಅಷ್ಟು ತೀವ್ರತೆಯಿಂದ ಮಾಡಲು ಅದಕ್ಕಾಗಿ ಒಂದು ಸ್ಪೆಷಲ್ ಪಾರ್ಟಿಯನ್ನು ಹಾಕಿದೆ. ಅಗ್ರಿಕಲ್‌ಚರಲ್ ಆಫೀಸರುಗಳನ್ನು ನೇಮಕ ಮಾಡಿ ಅಲ್ಲಲ್ಲೇ ಈ ಯೋಜನೆಗಳನ್ನು ತೆಗೆದುಕೊಳ್ಳಬೇಕೆಂದು ಗೊತ್ತು ಮಾಡಿದ್ದೇವೆ. ಅಂಥಾ ಕಡೆ ಆರ್. ಆರ್. ರೇಕಾರ್ಡ್ಸ್ ಅನ್ನು ಎಷ್ಟು ಬೇಗ ಅಪ್‌ಟುಡೇಟ್ ಮಾಡುವುದಕ್ಕೆ ಸಾಧ್ಯವಿದೆಯೋ ಅಷ್ಟು ಬೇಗ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎಸ್. ಎಸ್. ಶೆಟ್ಟರ್ (ಹುಬ್ಬಳ್ಳಿ).—ಪಟೇಲರು ಮತ್ತು ಶ್ಯಾನುಭೋಗರ ಸೇವಾ ಅವಧಿ 1965ನೇ ಇಸವಿಗೆ ಸಮಾಪ್ತಿ ಆಯಿತು. ಆರೀತಿ ಸಮಾಪ್ತಿ ಆದದ್ದನ್ನು ಯಾವ ರೀತಿ ಮುಂದುವರಿಸಿದ್ದೀರಿ ಎಂಬುದಕ್ಕೆ ಒಂದು ಕ್ಲಾರಿಫಿಕೇಷನ್. ಎರಡನೆಯದಾಗಿ ಕೋ-ಆಪರೇಟೀವ್ ಫಾರ್ಮಿಂಗ್ ಸೊಸೈಟಿಗಳಿಗೆ ಲ್ಯಾಂಡ್ ರೆವಿನ್ಯೂ ರಿಯಾಯಿತಿ ಕೊಡಬೇಕೆಂದು ವಿನಂತಿಸಿಕೊಂಡಿದ್ದೆವು. ಇದರ ಬಗ್ಗೆ ತಮ್ಮ ಹೇಳಿಕೆ ಏನಿದೆ?

ಶ್ರೀ ಬಿ. ರಾಚಯ್ಯ.—ಇದರಲ್ಲಿ ಮೊದಲನೆಯದಾಗಿ ಪಟೇಲರು ಮತ್ತು ಶ್ಯಾನುಭೋಗರ ಅಧಿಕಾರಾವಧಿಯನ್ನು 1968ನೇ ಇಸವಿ ಮಾರ್ಚಿ ತಿಂಗಳವರೆಗೆ ವಿಸ್ತಾರಮಾಡಿದೆ. ಅದು ಇನ್ನೂ ಸ್ವಲ್ಪ ಮುಂದುವರಿಯಬೇಕಾಗುತ್ತದೆ. ಇದಕ್ಕಾಗಿ ಕೆಲವು ಹಳ್ಳಿಗಳ ಸರ್ಕಲ್‌ಗಳನ್ನು ನಿರ್ಮಿಸಿ ಕೊಳ್ಳಬೇಕಾಗಿದೆ. ಮತ್ತು ಪೋಲೀಸ್ ಪಟೇಲ್ ಮತ್ತು ರೆವಿನ್ಯೂ ಪಟೇಲ್ ಎಂಬ ಇಬ್ಬರ ಬದಲು ಒಬ್ಬರನ್ನೇ ನೇಮಿಸಬೇಕೆಂದಿದ್ದೇವೆ. ಅದಕ್ಕಾಗಿ ಈ ಕೆಲಸ ಸ್ವಲ್ಪ ನಿಧಾನವಾಗಿದೆ.

ಎರಡನೆಯದಾಗಿ ಕೊ-ಆಪರೇಟಿವ್ ಸೊಸೈಟಿ ಮಾಡಿಕೊಂಡಿರುವವರು ಅಂದರೆ, ಜಮೀನು ಇಲ್ಲದವರು ಹೊಸದಾಗಿ ಜಮೀನು ತೆಗೆದುಕೊಂಡು ಫಾರ್ಮಿಂಗ್ ಸೊಸೈಟಿ ಮಾಡಿಕೊಂಡಿರುವವರಿಗೆ ಮೊದಲನೆಯ ವರ್ಷ ಮತ್ತು ಎರಡನೆಯ ವರ್ಷ ಎಷ್ಟು ರಿಯಾಯಿತಿ ಕೊಡಬೇಕೋ ಅಷ್ಟನ್ನು ಕೊಡಬೇಕಾಗುತ್ತದೆ. ಅದರೆ ಈಗ ಇರತಕ್ಕಂಥ ಜಮೀನುದಾರರು ಒಟ್ಟಿಗೆ ಸೇರಿಸಿ ಫ್ಯಾಮಿಲಿ ಸೀಲಿಂಗ್ ಲ್ಯಾಂಡ್ ರಿಫಾರಮ್ಸ್‌ನಲ್ಲಿರುವುದನ್ನು ತಪ್ಪಿಸಿಕೊಳ್ಳುವುದಕ್ಕಾಗಿ ಮಾಡಿಕೊಂಡಿರುವ ಸೊಸೈಟಿಗಳು 'ಏನಿವೆ' ಅವಕ್ಕೆ ರಿಯಾಯಿತಿ ಕೊಡುವುದು ನ್ಯಾಯವಲ್ಲ.

ಶ್ರೀ ಜಿ. ದುಗ್ಗಪ್ಪ (ಭರ್ಮಸಾಗರ).—ಸ್ವಾಮಿ, ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕಿನಲ್ಲಿ ಗಾಯಿತ್ರಿ ಜಲಾಶಯದ ಕೆಳಗೆ ನೀರಾವರಿಯಾಗತಕ್ಕಂಥ ನೂರಾರು ಎಕರೆ ಜಮೀನು ಇದ್ದು, ಆ ಬಗ್ಗೆ ಸರ್ಕಾರದವರು 6 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಪೋಡಿ ಕೆಲಸ ಮಾಡಿಸಿದ್ದರೂ ಸಹ ಇದುವರೆಗೆ ಆ ಭಾಗದ ಒಂದು ಎಕರೆ ಜಮೀನನ್ನು ವಿಲೇವಾರಿ ಮಾಡಿಲ್ಲದಿರುವುದಕ್ಕೆ ಕಾರಣವೇನು ?

ಎರಡನೆಯದಾಗಿ ಚಿತ್ರದುರ್ಗ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಯವರು ಇಲ್ಲ, ಹೆಸರಿಗೆ ಒಬ್ಬ ಆಫೀಸರ್ ಇರಬಹುದು, ಆದರೆ ಈ ಆಫೀಸರ್ ಜಿಲ್ಲಾಧಿಕಾರಿಯಾಗಿ ಕೆಲಸ ನಿರ್ವಹಿಸುವುದಕ್ಕೆ ನಾಲಾಯಕ್ ಎಂಬುದು ಮಂತ್ರಿಯವರಿಗೂ ಗೊತ್ತಿರಬಹುದು. ಮಂತ್ರಿಗಳು ಹೇಳುವುದನ್ನು ಕೇಳುವುದಕ್ಕೆ ಈ ಆಫೀಸರ್ ಇರಬಹುದು, ಆದರೆ ಮಂತ್ರಿಗಳ ಸಂಬಂಧೀಕರು ಹೇಳುವುದನ್ನು ಹೇಳುವುದಕ್ಕೆ ಈ ಆಫೀಸರ್ ಇಲ್ಲ, ಈ ಬಗ್ಗೆ ಮಂತ್ರಿಗಳು ವಿಚಾರ ಮಾಡಬೇಕು.

ಇನ್ನು ಮೂರನೆಯದಾಗಿ—you know in Jagalur Taluk, enquiry is going on against the Tahasildar. No justice can be done to the enquiry if you do not keep that officer under suspension because there are many grave allegations against that officer. May I know whether the Government would take action immediately and enquire into these three points ?

ಶ್ರೀ ಬಿ. ರಾಚಯ್ಯ.—ಎಲ್ಲಾ ನಿಮಗೆ ಗೊತ್ತಿದೆಯೆಂದು ಮಾನ್ಯ ಸದಸ್ಯರು, ಹೇಳುತ್ತಾರೆ, ಅದು ಸರಿಯಲ್ಲ, ನಾನೇನು ಸರ್ವಜ್ಞ ಅಲ್ಲ. ಈ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ 3 ವರ್ಷಗಳಿಂದ ಆರೋಗ್ಯ ಸರಿಯಾಗಿಲ್ಲ. ಆದಷ್ಟು ಜಾಗ್ರತೆ ಈ ಆಫೀಸರಿಗೆ ಸ್ಪೇಷನರಿ ವರ್ಕ್ ಕೊಡಬೇಕೆಂದು ತಿಳಿಸಿದ್ದೇನೆ. ಇನ್ನು ಜಗಳೂರಿನ ತಹಶೀಲ್‌ದಾರರ ವಿಷಯ ನನಗೆ ಗೊತ್ತಿಲ್ಲ. ಅದನ್ನು ವಿಚಾರಿಸುತ್ತೇನೆ. ಆ ತಹಶೀಲ್‌ದಾರರ ಬಗ್ಗೆ ಆರೋಪಣೆಗಳಿದ್ದರೆ ಸ್ಪಷ್ಟವಾಗಿ ತಪ್ಪು ಮಾಡಿದ್ದರೆ ಖಂಡಿತ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ.—ಮಂತ್ರಿಗಳು ತಪ್ಪು ಮಾಡಿದವರ ಬಗ್ಗೆ ಕ್ರಮ ತೆಗೆದುಕೊಳ್ಳಲೇ ಬೇಕು.

ಶ್ರೀ ಬಿ. ರಾಚಯ್ಯ.—ಚಿತ್ರದುರ್ಗ, ಬತ್ತಲಗೆರೆ ಮುಂತಾದ ಕಡೆಗಳಲ್ಲಿ ಕೆಲಸ ನಿರ್ವಹಣೆ ಮಾಡುವುದೇ ಬಹಳ ಕಷ್ಟವಾಗಿದೆ. ಇನ್ನು ಗಾಯಿತ್ರಿ ಜಲಾಶಯದ ಕೆಳಗಿರುವ ಭೂಮಿಯ ಬಗ್ಗೆ ದರಖಾಸ್ತು ರೂಲ್ಸ್ ಇನ್ನೂ ತೀರ್ಮಾನವಾಗಿಲ್ಲ. ಅದು ತೀರ್ಮಾನವಾಗದೆ ಜಮೀನು ಹಂಚುವುದಕ್ಕಾಗುವುದಿಲ್ಲ. ಈ ಬಗ್ಗೆ ರೂಲ್ಸ್ ಪೂರ್ಣವಾಗಿ ರಚನೆ ಮಾಡುವ ಬಗ್ಗೆ ಸ್ವಲ್ಪ ತಡವಾಗಿದೆ, ಅದು ಆದಕೂಡಲೇ ಜಮೀನು ಹಂಚುವ ಕೆಲಸವನ್ನು ಅಧಿಕಾರಿಗಳಿಗೆ ಕೊಡಲಾಗುತ್ತದೆ.

Sri J. P. SARVESH.—In Gulburga Division, one or two Tahasildars are degraded due to defective seniority list. They have gone to High Court and they have given stay orders. What are the reasons for prolonged delay in carrying out the orders of the High Court ?

ಶ್ರೀ ಬಿ. ರಾಚಯ್ಯ.—ಹೈಕೋರ್ಟಿನ ಒಂದು ನಿದೇಶನದ ಪ್ರಕಾರ ಸೀನಿಯಾರಿಟಿ ತಯಾರು ಮಾಡಿದ್ದೇವೆ. 1963ನೆ ಇಸವಿಯಲ್ಲಿ ಸರ್ಕಾರದವರು ತಯಾರು ಮಾಡಿದ ಸೀನಿಯಾರಿಟಿ ಪಟ್ಟಿ ಸರಿಯಾಗಿಲ್ಲವೆಂದು ಹೈಕೋರ್ಟಿನವರು ಸ್ಟೇ ಆರ್ಡರ್ ಕೊಟ್ಟಿದ್ದರು. ಮುಂದೆ ಹೈಕೋರ್ಟಿನವರ ನಿರ್ದೇಶನದಂತೆ, ಅಂದರೆ ಇಂಥಿಂಥ ಆಧಾರ ತೆಗೆದುಕೊಂಡು ಸೀನಿಯಾರಿಟಿ ನಿಗದಿ ಮಾಡ ಬೇಕೆಂದು ಹೇಳಿದ್ದರ ಪ್ರಕಾರ ಮಾಡಿದ್ದೇವೆ. ಈ ರೀತಿ ತಯಾರು ಮಾಡಿದಮೇಲೂ ಕೆಲವರು ಸ್ಟೇ ಆರ್ಡರ್ ತಂದಿದ್ದಾರೆ. ತಾವು ಕೊಟ್ಟ ಆದೇಶದ ಪ್ರಕಾರವೇ ಸೀನಿಯಾರಿಟಿ ಪಟ್ಟಿ ತಯಾರು ಮಾಡಿರುವುದರಿಂದ ಮತ್ತೆ ಸ್ಟೇ ಆರ್ಡರ್ ಕೊಟ್ಟಿರುವುದು ಸರಿಯಲ್ಲವೆಂದು ಹೈಕೋರ್ಟಿನವರನ್ನು ನಾವು ಪ್ರಾರ್ಥಿಸಿಕೊಂಡಿದ್ದೇವೆ. ಮತ್ತು ಕೆಲಸ ನಡೆಯುವುದಕ್ಕೆ ತೊಂದರೆಯಾಗುತ್ತದೆಂದು ಹೇಳಿದ್ದೇವೆ. Pending finalisation of seniority list and subject to the decision of the High Court on the main writ, ಪೋಸ್ಟಿಂಗ್ ಮಾಡುವುದಕ್ಕೆ ಅವಕಾಶ ಕೊಡಬೇಕೆಂದು ಹೇಳಿದ್ದೇವೆ. ಅವರಿಂದ ಉತ್ತರ ಬಂದಮೇಲೆ ಇದನ್ನು ಮಾಡುತ್ತೇವೆ.

ಶ್ರೀ ಸದಾಶಿವಪ್ಪ ಪಾಟೀಲ್ (ದೇವದುರ್ಗ).—ನಮ್ಮ ರಾಯಚೂರು ಜಿಲ್ಲೆಯಲ್ಲಿ ಎಲ್ಲಾ ಕಡೆಗಳಲ್ಲೂ ಖಾರೆಫ್ ಬೆಳೆ ಹೋಗಿರುವುದರಿಂದ ಪರಿಹಾರ ಕಾಮಗಾರಿಗಳನ್ನು ಕೈಕೊಳ್ಳಬೇಕೆಂದು ಸರ್ಕಾರದವರು ಆಜ್ಞೆ ಮಾಡಿದ್ದಾರೆ. ದೇವದುರ್ಗ ತಾಲ್ಲೂಕಿನಲ್ಲಿ ಖಾರಿಫ್ ಬೆಳೆ ಹೋಗಿರುವುದ ರಿಂದ, ಈ ಭಾಗದಲ್ಲಿ ಪರಿಹಾರ ಕಾಮಗಾರಿ ಕೆಲಸವನ್ನು ತೆಗೆದುಕೊಳ್ಳದೆ, ಜಿಲ್ಲಾಧಿಕಾರಿಗಳು ರಾಬಿ ಬೆಳೆ ಬೆಳೆಯತಕ್ಕಂಥ ಪ್ರದೇಶಗಳಲ್ಲಿ ಪರಿಹಾರ ಕಾಮಗಾರಿ ಅಲಸವನ್ನು ತೆಗೆದುಕೊಳ್ಳು ವುದಕ್ಕೆ ಪ್ರಾರಂಭ ಮಾಡಿದ್ದಾರೆ. ಅಂದರೆ ವಿರೋಧಪಕ್ಷದ ಸದಸ್ಯರು ಆರಿಸಿ ಬಂದಿರುವ ಕಡೆಗಳಲ್ಲಿ ಪರಿಹಾರ ಕಾಮಗಾರಿಗಳನ್ನು ಕೈಕೊಳ್ಳದೆ ಎದುರು ಪಕ್ಷದ ಸದಸ್ಯರುಗಳ ಭಾಗದಲ್ಲಿ ತೆಗೆದು ಕೊಳ್ಳುತ್ತಿದ್ದಾರೆ. ಮತ್ತು ಈ ತಿಂಗಳ 31ರೊಳಗೆ ಮಂಜೂರಾಗಿರುವ ಹಣವನ್ನು ಖರ್ಚು ಮಾಡದಿದ್ದರೆ ಲ್ಯಾಪ್ಸ್ ಆಗುವುದರಿಂದ ಎಲ್ಲಾ ಕೆಲಸಗಳನ್ನೂ ಈ ತಿಂಗಳೊಳಗೆ ಮಾಡಿಸಬೇಕೆಂದು ಸರ್ಕಾರದವರು ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶ ನೀಡಿದ್ದಾರೆ. ಈ ಬಗ್ಗೆ ಮಾನ್ಯ ಮಂತ್ರಿ ಗಳು ತಿಳಿಸಬೇಕು.

ಶ್ರೀ ಬಿ. ರಾಚಯ್ಯ.—ಮೊದಲು ಕ್ಷಾಮ ಪರಿಹಾರ ಕಾಮಗಾರಿಗಳನ್ನು ತೆಗೆದುಕೊಳ್ಳುವ ಅಧಿಕಾರವನ್ನು ವಿಭಾಗಾಧಿಕಾರಿಗಳಿಗೆ ವಹಿಸಲಾಗಿತ್ತು. ಅದರಿಂದ ಕೆಲಸ ನಿಧಾನವಾಗುತ್ತ ದೆಂದು ತಿಳಿದು, ವಿಭಾಗಾಧಿಕಾರಿಗಳಿಂದ ಜಿಲ್ಲಾವಾರು ರಿಪೋರ್ಟ್ ತರಿಸಿಕೊಂಡು, ಯಾವ ಯಾವ ತಾಲ್ಲೂಕ್‌ನಲ್ಲಿ ಎಷ್ಟು ಕೆಲಸ ತೆಗೆದುಕೊಳ್ಳಬೇಕಾಗಿತ್ತೋ ಅದಕ್ಕಿಂತ ಹೆಚ್ಚು ಕೆಲಸ ತೆಗೆದು ಕೊಳ್ಳಲು ಅನುಕೂಲವಾಗುವಂತೆ ಹೆಚ್ಚು ಹಣವನ್ನು ಒದಗಿಸಿದ್ದೇವೆ. ಈ ರೀತಿ ಹಣ ಒದಗಿಸು ವಾಗ ಪಕ್ಷದವರು ಮತ್ತು ವಿರೋಧಪಕ್ಷದವರು ಎನ್ನುವ ತಾರತಮ್ಯವನ್ನು ಮಾಡುತ್ತಿಲ್ಲವೆಂದು ಹೇಳುತ್ತಿದ್ದೇನೆ. ನಿನ್ನೆ ದಿವಸ ಕೂಡ ಒಬ್ಬ ಮಾನ್ಯ ಸದಸ್ಯರು ಮಂತ್ರಿಗಳ ಕ್ಷೇತ್ರದಲ್ಲಿ ಹೆಚ್ಚು ಕೆಲಸ ಗಳನ್ನು ಮಾಡಿಸುತ್ತಿದ್ದಾರೆಂದು ಹೇಳಿದರು. ಆದರೆ ಅದು ತಪ್ಪಾಗುತ್ತದೆ. ಬಡತನ ಮತ್ತು ಕ್ಷಾಮ ಎಂಬುದು ಮಂತ್ರಿಗಳ ಕ್ಷೇತ್ರದಲ್ಲಿಯೇ ಬರುವುದಿಲ್ಲ, ಎಲ್ಲಾ ಕಡೆಗಳಲ್ಲಿಯೂ ಬರುತ್ತದೆ.

ಶ್ರೀ ಸದಾಶಿವಪ್ಪ ಪಾಟೀಲ್.—ಇನ್ನು 15 ದಿನಗಳಲ್ಲಿ ಸರ್ಕಾರದವರು ಮಂಜೂರು ಮಾಡಿರುವ ಹಣವನ್ನು ಯಾವ ರೀತಿ ಖರ್ಚು ಮಾಡುವುದಕ್ಕೆ ಸಾಧ್ಯವಾಗುತ್ತದೆ?

ಶ್ರೀ ಬಿ. ರಾಚಯ್ಯ.—ಮಾರ್ಚಿ ತಿಂಗಳ 31ನೇ ತಾರೀಖಿನೊಳಗೆ ಹಣವನ್ನು ಖರ್ಚು ಮಾಡ ಬೇಕೆಂದು ಹೇಳಿದ್ದೇವೆ. ಅನೇಕ ಜಿಲ್ಲಾಧಿಕಾರಿಗಳು ಇಂತಹ ಕೆಲಸಗಳನ್ನು ಮಾಡಿಸುವ ವಿಚಾರ ದಲ್ಲಿ ಮಾನ್ಯ ಸದಸ್ಯರಾದ ಮುನಿಯಪ್ಪನವರು ಹೇಳಿದಂತೆ ಇನ್ನೂ ಅಂತರಿಕ್ಷದಲ್ಲೇ ಇದ್ದಾರೆ. ಅವರಿಗೆ ಬಡವರ ಕಷ್ಟ ಗೊತ್ತಿರುವುದಿಲ್ಲ. ಮಂಜೂರು ಮಾಡಿದ ಹಣವನ್ನು ಈ ತಿಂಗಳ 31ರೊಳಗೆ ಖರ್ಚು ಮಾಡದಿದ್ದರೆ ಸರ್ಕಾರದ ಇನ್‌ಎಫಿಸಿಯೆನ್ಸಿಯನ್ನು ತೋರಿಸಿದಂತಾಗುತ್ತದೆಂದು ತಿಳಿದು ಎಲ್ಲಾ ಹಣವನ್ನು ಖರ್ಚು ಮಾಡಬೇಕೆಂದು ಜಿಲ್ಲಾಧಿಕಾರಿಗಳಿಗೆ ತಿಳಿಸಿದ್ದೇವೆ.

ಶ್ರೀ ಅಜೀಜ್ ಸೇಟ್.—ಸ್ವಾಮಿ, ಮುಜರಾಯಿ ಸಂಸ್ಥೆಗಳು ಇತ್ತೀಚೆಗೆ ಹೀನಸ್ಥಿತಿಗೆ ಬರುತ್ತಿವೆ. ಈ ಸಂಸ್ಥೆಗಳ ಅಧೀನದಲ್ಲಿರತಕ್ಕ ಆಸ್ತಿಯನ್ನು ಒಬ್ಬೊಬ್ಬರೇ ಹಕ್ಕು ಸಾಧನೆ ಮಾಡು ವುದಕ್ಕೆ ಹೊರಟಿದ್ದಾರೆ. ಆದ್ದರಿಂದ ಈ ಸಂಸ್ಥೆಗಳ ಆಸ್ತಿಯೆಲ್ಲಾ ಕೈಬಿಡುವ ಸಂದರ್ಭ ಬಂದಿದೆ. ಮತ್ತು ಈ ಸಂಸ್ಥೆಗಳಿಗೆ ಸೇರಿದಂತ ತರಿ ಜಮೀನು ಮತ್ತು ಖುಷ್ಕಿ ಜಮೀನುಗಳನ್ನು ಕಡಿಮೆ ದರ ದಲ್ಲಿ ಹರಾಜು ಮಾಡುತ್ತಿರುವುದರಿಂದ ಕಳೆದ ಮೂರು ವರ್ಷಗಳಿಂದ ಈ ಸಂಸ್ಥೆಗಳ ಉತ್ಪಾದನೆ ಕಡಿಮೆಯಾಗುತ್ತಿದೆ. ಆದ್ದರಿಂದ ಸರ್ಕಾರದವರು ಈ ಸಂಸ್ಥೆಗಳಿಗೆ ಸಂಬಂಧಪಟ್ಟಂತೆ ಇರುವ ಕಾಗದಪತ್ರಗಳನ್ನೆಲ್ಲಾ ಪರಿಶೀಲನೆ ಮಾಡಿ, ಆ ಬಗ್ಗೆ ಏನಾದರೂ ಲೋಪದೋಷಗಳಿದ್ದರೆ ಸರಿಪಡಿ

(ಶ್ರೀ ಅಜೀಜ್ ಸೇಟ್)

ಸಲು ಕ್ರಮ ತೆಗೆದುಕೊಳ್ಳುವುದಕ್ಕೆ ಏರ್ಪಾಟು ಮಾಡುತ್ತೀರಾ? ಜೊತೆಗೆ ಇದನ್ನು ಸುಪರ್‌ಸೀಡ್ ಮಾಡಬೇಕೆಂದು 25 ಎಂ.ಎಲ್.ಎ.ಗಳು ಒಂದು ಮೆಮೊರಾಂಡಂ ಕೂಡ ಕಳಿಸಿದ್ದಾರೆ. ಅದಕ್ಕೆ ಅಡ್ಮಿನಿಸ್ಟ್ರೇಟರ್ ನೇಮಕ ಮಾಡುವುದಕ್ಕೆ ಏನಾದರೂ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ? ಇದರಲ್ಲಿ ಯಾವ ಎಂ.ಎಲ್.ಎ. ಕೂಡ ಇಲ್ಲ. ಆದ್ದರಿಂದ ಇದರಲ್ಲಿ ಯಾವ ರೀತಿ ಆಲೋಚನೆ ಮಾಡುತ್ತೀರಿ? ಉತ್ತರದಲ್ಲಿ ಹೇಳಿಲ್ಲ, ಅದನ್ನು ದಯವಿಟ್ಟು ಹೇಳಬೇಕು.

ಶ್ರೀ ಬಿ. ರಾಚಯ್ಯ.—ಈ ವಾಕ್‌ಫ್ ಬೋರ್ಡು ಈಗತಾನೇ ಹೊಸದಾಗಿ ರಚನೆಯಾಗಿದೆ. ಬಹುಶಃ ಒಂದು ವರ್ಷವಾಗಿರಬಹುದು. ಈ ವಾಕ್‌ಫ್ ಬೋರ್ಡು ರಚನೆಯು ಕಾಯಿದೆ ಹೊಸದು. ಈಗತಾನೆ ಛೇರ್‌ಮನ್, ಸದಸ್ಯರನ್ನೆಲ್ಲಾ ಮಾಡಿದ್ದಾರೆ. ಇವರು ಕೊಟ್ಟಿರತಕ್ಕಂಥ ಆಕ್ಷೇಪಣೆ ಏನಿದೆ, ಅವುಗಳನ್ನು ವಿಚಾರಿಸುತ್ತೇನೆ. ಹಣಕಾಸಿನ ಉಪಸಚಿವರು ಇದರ ಮೇಲ್ವಿಚಾರಣೆಯಲ್ಲಿದ್ದಾರೆ. ಅವರು ಇದರ ವಿಷಯವನ್ನು ಸ್ವಲ್ಪ ತಿಳಿದುಕೊಂಡಿದ್ದಾರೆ. ಅವರ ಸಹಾಯವಾಗಬೇಕೆಂದು, ವಾಕ್‌ಫ್ ಫೈಲುಗಳು ಅವರ ಮುಖಾಂತರ ಬರುತ್ತವೆ. ತಾವು ಏನು ಆರೋಪಣೆಗಳನ್ನು ಕೊಟ್ಟಿದ್ದೀರಿ, ಅವುಗಳನ್ನು ನಾನು ವಿಚಾರಣೆ ಮಾಡಿ ನಂತರ ತಮಗೆ ತಿಳಿಸುತ್ತೇನೆ.

3-30 P.M.

ಶ್ರೀಮತಿ ನಾಗರತ್ನಮ್ಮ ಹಿರೇಮಠ (ಗಾಂಧಿನಗರ).—ಇಂದು ಬೆಂಗಳೂರಿನಲ್ಲಿ ಸೌದೆಗೆ ಒಂದು ಟನ್ನಿಗೆ 100 ರೂಪಾಯಿಯವರೆಗೆ ಹೋಗಿದೆ. ಇಲ್ಲಿಂದ ಬೇರೆ ಕಡೆಗೆ, ಮದ್ರಾಸಿಗೆ ಲಾರಿ ಗಟ್ಟಲೆ ಸರ್ವೆಸೌದೆ ಹೋಗುತ್ತಿದೆ. ಇದಕ್ಕೆ ಲೈಸೆನ್ಸ್ ಕೂಡ ಇದೆಯೆಂದು ತಿಳಿಯುತ್ತೇನೆ. 10—15 ಸಾವಿರ ರೂಪಾಯಿ ಮೇಲೆ ಅಡ್ವಾನ್ಸ್ ಕೊಟ್ಟು ಇವುಗಳನ್ನು ಸಾಗಿಸುತ್ತಿದ್ದಾರೆ ಎಂದು ಕೆಲವರು ನನಗೆ ಕಾಗದ ಕೂಡ ಬರೆದಿದ್ದಾರೆ. ಇದು ಏಕೆ ಹೀಗೆ? ಮೈಸೂರಿನಲ್ಲಿ ಯಾರೂ ಸೌದೆ ಉಪಯೋಗಿಸುವುದಿಲ್ಲವೆ? ಇದರಿಂದ ಅರಣ್ಯದಲ್ಲಿ ಮರಗಳು ಕಡಿಮೆಯಾಗುವುದರಿಂದ ಇದನ್ನು ತಡೆಯುವುದಕ್ಕಾಗುವುದಿಲ್ಲವೆ? ಇದು ನಿಜವೇ ಸುಳ್ಳೆ ಎಂದು ಹೇಳಬೇಕು.

ಶ್ರೀ ಬಿ. ರಾಚಯ್ಯ.—ಸರ್ವೆ ಮರಗಳನ್ನು ಅರಣ್ಯ ಇಲಾಖೆಯಲ್ಲಿ ಬೆಳೆಸುವುದಿಲ್ಲ. ಇದನ್ನು ಖಾಸಗಿಯವರು ಬೆಳೆಸುತ್ತಿದ್ದಾರೆ. ಅದರ ಸಾಗಾಣಿಕೆ ವಿಚಾರದಲ್ಲಿ ಒಂದು ನಿಯಮ ಇಟ್ಟುಕೊಂಡಿದ್ದೇವೆ. ಮಾನ್ಯ ನಂಜಪ್ಪನವರು ಒಂದು ಚೆಕ್‌ಪೋಸ್ಟ್ ಇಟ್ಟುಕೊಳ್ಳಬೇಕು ಎಂದು ಸೂಚನೆ ಮಾಡಿದ್ದಾರೆ. ಆದ್ದರಿಂದ ಜಂಗಲ್ ಸೌದೆಗಳನ್ನು ಮಾರಾಟ ಮಾಡುವುದಕ್ಕೆ ಮಾರ್ಕೆಟಿಂಗ್ ಸೊಸೈಟಿಯಾಗಲಿ, ಕಾರ್ಪೊರೇಷನಾಗಲಿ, ಮುಂದೆ ಬಂದರೆ, ಅದನ್ನು ತರಿಸಿ ಮಾರಾಟ ಮಾಡುವುದಕ್ಕೆ ಪ್ರಯತ್ನ ಮಾಡಬಹುದು.

ಶ್ರೀ ಎಂ. ಬಸವರಾಜು (ಕೃಷ್ಣರಾಜನಗರ).—ನಾವು ಡಿಮ್ಯಾಂಡ್ ಮೇಲೆ ಮಾತನಾಡಬೇಕಾದರೆ, ಆಹಾರದ ಸ್ವಯಂಪೂರ್ಣತೆಯನ್ನು ಹೊಂದಬೇಕು ಎಂದು ಹೇಳುತ್ತಿದ್ದೇವೆ. ಈ ಆಹಾರದ ಕೊರತೆ ಏನಿದೆ, ಅದನ್ನು ನಿವಾರಣೆ ಮಾಡಬೇಕೆನ್ನುತ್ತೇವೆ. ಆದರೆ ಈ ಅಗ್ರಿಕಲ್ಚರಲ್ ಲೇಬರರ್ಸ್‌ಗೆ ಸಾಕಷ್ಟು ಸಂರಕ್ಷಣೆ ಕೊಡುತ್ತಾ ಇಲ್ಲ. ಆದಕಾರಣ ಈ ವಿಚಾರದಲ್ಲಿ ಏನಾದರೂ ಅನುಕೂಲಗಳನ್ನು ಮಾನ್ಯ ರೆವಿನ್ಯೂ ಮಂತ್ರಿಗಳು ಮಾಡುವುದಕ್ಕಾಗುತ್ತದೆಯೇ?

ಶ್ರೀ ಬಿ ರಾಚಯ್ಯ.—ಇದು ಬಹಳ ಪ್ರಾಮುಖ್ಯವಾಗಿರತಕ್ಕದ್ದು; ಮತ್ತು ಅಪ್ಯಾಯಮಾನವಾದುದು. ಅಗ್ರಿಕಲ್ಚರಲ್ ಲೇಬರರ್ಸ್‌ಗೆ ಮಿನಿಮಂ ವೇಜಸ್ ಕೊಡಬೇಕಾದುದು, ರಕ್ಷಣೆ ಕೊಡಬೇಕಾದುದು ಈ ವಿಚಾರ ನನ್ನ ಸ್ನೇಹಿತರಾಗಿರತಕ್ಕಂತಹ ಶ್ರೀ ದೇವರಾಜ್ ಅರಸ್‌ರಿಗೆ ಸಂಬಂಧಪಟ್ಟದ್ದು. ಅವರಲ್ಲಿ ಈ ವಿಚಾರ ಪ್ರಸ್ತಾಪ ಮಾಡಬೇಕಾಗುತ್ತದೆ. ನೇರವಾಗಿ ನಾನು ರೆವಿನ್ಯೂ ಮಂತ್ರಿಯಾಗಿ ಉತ್ತರ ಕೊಡುವುದಕ್ಕಾಗುವುದಿಲ್ಲ.

ಶ್ರೀ ಕೆ. ಎಚ್. ಪಾಟೀಲ್ (ಗದಗ).—ಮಾನ್ಯ ಮಂತ್ರಿಯವರು ಮಾತನಾಡುತ್ತಾ ಗ್ರಾಮಾಂತರಗಳ ದೇವಾಲಯಗಳ ಬಗ್ಗೆ ಮತ್ತು ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುವ ತಮ್ಮ ಧೋರಣೆಯನ್ನು ಹೇಳಿದರು. ನಾನಾದರೂ ಒಂದು ವಿಷಯ ಕೇಳುತ್ತೇನೆ. ಗದಗ್ ಹುಲುಕೋಟಿ ಗ್ರಾಮದೊಳಗೆ, ಪೂಜಾರಿಯು ಅನಧಿಕೃತವಾಗಿ ಅಲ್ಲಿರತಕ್ಕ ಮಣ್ಣು, ಗೋಡೆ, ಸಾಮಾನುಗಳನ್ನು ಕಳವು ಮಾಡಿದ್ದಾನೆ. ಇದನ್ನು ಒಂದು ವರ್ಷದಿಂದ ಹೇಳಿದರೂ ಸಹ ಯಾವ ಕಾರ್ಯಕ್ರಮವನ್ನೂ ತೆಗೆದುಕೊಳ್ಳದೆ ಬರೇ ನಮ್ಮ ಪತ್ರ ತಲಪಿದ ಬಗ್ಗೆ ಉತ್ತರ ಕೊಡುತ್ತಾರಷ್ಟೆ. ಅಸಿಸ್ಟೆಂಟ್ ಚಾರಿಟಿ ಕಮಿಷನರ್ ಇರತಕ್ಕಂಥವರ ಮೇಲೆ ಎಷ್ಟು ಆರೋಪಣೆಗಳು ಇದ್ದರೂ ಮಂತ್ರಿ

ಗಳ ಗಮನಕ್ಕೆ ಬಂದಿಲ್ಲ. ಹೆಚ್ಚು ಹೇಳಿದರೆ, ವಿರೋಧಪಕ್ಷದವರು ಹಸ್ತಕ್ಷೇಪ ಮಾಡುತ್ತಾರೆಂದು ಹೇಳುತ್ತಾರೆ. ಇದಕ್ಕೆ ಮಂತ್ರಿಗಳು ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆ, ಏನು ಯೋಜನೆಯನ್ನು ಹಾಕಿಕೊಂಡಿದ್ದಾರೆ? ಮದ್ರಾಸಿನಲ್ಲಿ ಸೇಲ್ಸ್ ಟ್ಯಾಕ್ಸ್ ಹೆಚ್ಚು ಮಾಡಿದ್ದಾರೆಂದೂ ಲ್ಯಾಂಡ್ ರೆವಿನ್ಯೂ ಕಡಿಮೆ ಇದೆ ಎಂದೂ ಹೇಳಿದ್ದಾರೆ. ಈ ರಾಜ್ಯದೊಳಗೆ 11 ಕೋಟಿ ಈ ಸೇಂದಿ ಕಾನೂನು ಸಡಿಲಿಕೆಯಿಂದ ಬರುವುದರಿಂದ, ಈ ಲ್ಯಾಂಡ್ ರೆವಿನ್ಯೂ ತೆಗೆಯಲಿಕ್ಕೆ ಇರುವಂತಹ ಕಷ್ಟವೇನು?

ಶ್ರೀ ಬಿ. ರಾಚಯ್ಯ.—ಮೊದಲನೆಯದಾಗಿ ಆ ಒಂದು ದೇವಸ್ಥಾನದ ವಿಚಾರದಲ್ಲಿ ಒಂದು ಕಾಗದವನ್ನು ಕೊಟ್ಟಿದ್ದಾರೆ. ಅದಕ್ಕೆ ನಿಮ್ಮ ಕಾಗದ ತಲುಪಿತು ವಿಚಾರಣೆಯಾಗುತ್ತದೆ ಎಂದು ಹೇಳಿದ್ದೇವೆ. ವಿಚಾರಣೆ ಮಾಡಿ ಎಂದು ಅಸಿಸ್ಟೆಂಟ್ ಕಮಿಷನರಿಗೆ ಬರೆದಿದ್ದೇವೆ. ಅಲ್ಲಿಂದ ರಿಪೋರ್ಟ್ ಬರಲಿಲ್ಲ. ಇಂಥದು ನೇರವಾಗಿ ರಿಪೋರ್ಟ್ ಬರದೆ ಹೇಳುವುದಕ್ಕಾಗುವುದಿಲ್ಲ. ಎರಡನೆಯದು ಈ ಪಾನನಿರೋಧ ಸಡಿಲಿಕೆ ವಿಚಾರ. ಇದರಿಂದ 11 ಕೋಟಿ ಬರುತ್ತದೆ, ಲ್ಯಾಂಡ್ ರೆವಿನ್ಯೂ ಬಿಟ್ಟುಬಿಡಿ ಎಂದು ಹೇಳುತ್ತಾರೆ. ಇವತ್ತು ಜನರಿಗೆ ಅರ್ಜಿಗೆ ಎರಡು ರೂಪಾಯಿ ಕೊಡಲಿಕ್ಕಾಗುತ್ತದೆ, ಆದರೆ ಈ ಟ್ಯಾಕ್ಸನ್ನು ಕೊಡಲಿಲ್ಲವಾದರೆ, ಗ್ರಾಮಾಂತರ ಪ್ರದೇಶಗಳು ಹೇಗೆ ಅಭಿವೃದ್ಧಿಯಾಗಬೇಕು?

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್ (ಸಿರ್ಸಿ).—ಸ್ವಾಮೀ, ಮಾನ್ಯ ಸಚಿವರು ಬಹಳ ಚೆನ್ನಾಗಿ ಕನ್ನಡದಲ್ಲಿ ಉತ್ತರ ಕೊಟ್ಟರು. ನಾನು ಏನು ಕಟ್‌ಮೋಷನ್‌ಗಳನ್ನು ಇಲ್ಲಿ ಕೊಟ್ಟಿದ್ದೆ ಅವುಗಳಲ್ಲಿ ಒಂದಕ್ಕೂ ಕೂಡ ಉತ್ತರ ಕೊಡಲಿಲ್ಲ ದರಖಾಸ್ತು ಗ್ರ್ಯಾಂಟು ರೂಲ್ಸು ಪ್ರಕಾರ ನಿಮ್ಮ ಪಂಗಡದವರಾದ ಷೆಡ್ಯೂಲ್ಡು ಕ್ಯಾಸ್ಟು ಮತ್ತು ಷೆಡ್ಯೂಲ್ಡು ಟ್ರೈಬ್ಸ್‌ಗಳ ಪಂಗಡದವರಿಗಾಗಿ ಸೇಕಡ 50 ಭಾಗದಷ್ಟು ಮೀಸಲಾಗಿರುವಂತೆ ದರಖಾಸ್ತು ರೂಲ್ಸುಗಳನ್ನು ಬದಲಾವಣೆ ಮಾಡುತ್ತಾರೆಯೇ ಇಲ್ಲವೇ ಎನ್ನುವುದರ ಬಗ್ಗೆ ಇಲ್ಲಿ ಯಾವ ಉತ್ತರವನ್ನೂ ಕೊಟ್ಟಿಲ್ಲ.

ಎರಡನೆಯದ, ಜಮೀನುಗಳನ್ನು ಕೊಡುವಾಗ ವಿದ್ಯಾ ಸಂಸ್ಥೆಗಳಿಗೆ ಹಾಗೂ ಮಠಗಳಿಗೆ ಎಂದು ಕೊಡುತ್ತಿರುವುದರಿಂದ ನಿಮ್ಮ ವರ್ಗದವರಿಗೆ ಜಮೀನುಗಳು ಸಿಕ್ಕದಂತಾಗುತ್ತದೆ. ಮೂರನೆ ಯೋಜನೆಯಲ್ಲಿ 15 ಲಕ್ಷ ರೂಪಾಯಿಗಳನ್ನು ಲಿಬರಲೈಸ್ಡ್ ಸ್ಕೀಂನಂತೆ ಮಾಡಿ ಹಿಂದುಳಿದ ವರ್ಗದವರಿಗೆ ಅನುಕೂಲ ಮಾಡಬೇಕು ಎಂದಿತ್ತು. ಇದನ್ನೂ ಮಾಡುತ್ತಿಲ್ಲ.

ಚೇರ್ಮನ್ ಅವರು.—ಮಾನ್ಯ ಸದಸ್ಯರು ತೀವ್ರವಾಗಿ ಮುಗಿಸಬೇಕು.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ರಾಯಚೂರು ಜಿಲ್ಲೆಯಲ್ಲಿ ಸುಮಾರು 3000 ಎಕರೆಗಳಷ್ಟು ಭೂಮಿಯನ್ನು ಒಬ್ಬರಿಗೇ ಕೊಡಲು ಕಾರಣವೇನು?

ಶ್ರೀ ಬಿ. ರಾಚಯ್ಯ.—ಮಾನ್ಯ ಸದಸ್ಯರು ಬಹಳ ದೀರ್ಘವಾಗಿ ಭಾಷಣ ಮಾಡಬಲ್ಲರು ಮತ್ತು ಪ್ರತಿನಿತ್ಯವೂ ಪೆಂಡಿಂಗು ಕೇಸುಗಳು ಯಾವ ಯಾವುವು ಇವೆ ಅದನ್ನು ಆಯಾ ಆಫೀಸುಗಳಿಗೆ ಹಾಗೂ ಸರಕಾರಕ್ಕೆ ಪತ್ರಗಳನ್ನೂ ಬರೆಯುತ್ತಲೇ ಇರುತ್ತಾರೆ. ಇದಕ್ಕಾಗಿ ಬಹಳ ಸಂತೋಷವಾಗುತ್ತದೆ. ಮಾನ್ಯ ಶಾಸನಸಭಾ ಸದಸ್ಯರು ದರಖಾಸ್ತಿನಲ್ಲಿ ಭೂಮಿ ಪಡೆಯಬೇಕಾಗಿದ್ದರೆ ದರಖಾಸ್ತು ನಿಯಮಗಳ ಪ್ರಕಾರ ಆಯಾ ತಾಲ್ಲೂಕು ಆಫೀಸಿಗೆ ಹೋಗಿ ಅಲ್ಲಿರುವ ತಹಶೀಲ್ದಾರರಿಗೆ ಹನ್ನೆರಡಾಣೆ ಸ್ಟಾಂಪು ಹಚ್ಚಿ ಕೊಟ್ಟ ಮೇಲೆ ತಾಲ್ಲೂಕು ಆಫೀಸಿನಲ್ಲಿ ಇದರ ರಿಕಾರ್ಡುಗಳು ಆರಂಭವಾಗಿ ಬರುತ್ತವೆ. ಇದನ್ನು ತಿಳಿಯದೆ ಮಾನ್ಯ ಸದಸ್ಯರು ಇಲ್ಲಿ ಹೇಳುವುದನ್ನು ನೋಡಿ ಬಹಳ ದುಃಖವಾಗುತ್ತದೆ. ಅಲ್ಲದೆ ಅವರು ಅರ್ಜಿಗಳಿಗಾಗಿ ಸ್ಟಾಂಪನ್ನು ಕೊಡುವುದರಲ್ಲಿ ವಿನಾಯಿತಿ ಕೊಡಬೇಕೆಂದು ಹೇಳಿದರು. ಸರಕಾರಕ್ಕೆ ಬರತಕ್ಕ ಅರ್ಜಿಗಳಿಗೆ ಎರಡು ರೂಪಾಯಿಗಳ ಸ್ಟಾಂಪು ಕೊಡಬೇಕೆಂದು ಕಾನೂನು ಇದೆ, ಅದರ ಪ್ರಕಾರ ಕೊಡಬೇಕು. ಆದರೆ ಮಂತ್ರಿಗಳು ಪ್ರವಾಸ ಹೋದಾಗ ಅಲ್ಲಿ ಜನ ಅರ್ಜಿ ಕೊಟ್ಟರೆ ಅದಕ್ಕೆ ಸ್ಟಾಂಪು ಕೊಡುವ ಅವಶ್ಯಕತೆ ಇಲ್ಲ. ಇವೆಲ್ಲಾ ಹಿಂದಿನಿಂದಲೂ ನಡೆದುಕೊಂಡು ಬರುತ್ತಿದೆ. ಇದಕ್ಕೆ ನಿಯಮಗಳನ್ನು ಬದಲಾಯಿಸಿ ಕೊಡಬಹುದು ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ.

ಇನ್ನು ಹರಿಜನರು ಹಾಗೂ ಗಿರಿಜನರಿಗೆ ಸಹಕಾರ ಸಂಘಗಳ ಮೂಲಕ ಎಲ್ಲ ಸೌಕರ್ಯಗಳನ್ನೂ ಮಾಡಿಕೊಡುತ್ತಿದ್ದೇವೆ, ಕೆಲವು ಕಡೆಗಳಲ್ಲಿ ಎನ್‌ಕಂಬ್ರೆನ್ಸ್ ಸರ್ಟಿಫಿಕೇಟು ತಂದು ಕೊಟ್ಟರೆ ಕೂಡಲೇ ಸರಕಾರ ಅದರ ಬಗ್ಗೆ ಸರ್ಟಿಫಿಕೇಟನ್ನು ಕೊಡುತ್ತಾರೆ. ಮಾನ್ಯ ಸದಸ್ಯರು ಏನೇನು ಹೇಳುತ್ತಿದ್ದಾರೋ ಅದಕ್ಕಿಂತ ಹೆಚ್ಚಾಗಿ ಹರಿಜನರ ಹಾಗೂ ಗಿರಿಜನರ ಸೌಕರ್ಯಗಳನ್ನು ಸರಕಾರ ಮಾಡುತ್ತಿದೆ. ಮಾನ್ಯ ಸದಸ್ಯರು ಹೇಳುವುದಕ್ಕಿಂತ ಹೆಚ್ಚಿನ ಸೌಲಭ್ಯಗಳನ್ನು ಇಂದು ಹಿಂದುಳಿದ ವರ್ಗಗಳವರೆಲ್ಲಾ ಪಡೆಯುತ್ತಿದ್ದಾರೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ನಾನು ಸುಮಾರು 150 ಕಟ್ ಮೋಷನ್‌ಗಳನ್ನು ಕಳಿಹಿಸಿದ್ದರೂ ಅವುಗಳ ಬಗ್ಗೆ ಮಾನ್ಯ ಮಂತ್ರಿಗಳು ಸರಿಯಾದ ಉತ್ತರವನ್ನು ಕೊಡಲೇ ಇಲ್ಲ.

ಶ್ರೀ ಬಿ. ರಾಚಯ್ಯ.—ಮಾನ್ಯ ಸದಸ್ಯರು ಹೇಳುವುದನೆಲ್ಲಾ ನಾನು ಗಮನಕ್ಕೆ ತೆಗೆದುಕೊಂಡು ಗುರುತು ಹಾಕಿ ಕೊಂಡಿರುತ್ತೇನೆ. ಇವುಗಳ ಬಗ್ಗೆ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬಹುದೋ ಅವನ್ನೆಲ್ಲಾ ವಿಚಾರ ಮಾಡಿ ನೋಡಬೇಕಾಗುತ್ತದೆ. ಇಲ್ಲಿ ಕಾಲಾವಕಾಶ ಕಡಮೆ ಇದ್ದುದರಿಂದ ಎಲ್ಲ ಅಂಶಗಳಿಗೂ ಇಲ್ಲಿ ಉತ್ತರ ಕೊಡಲಾಗಲಿಲ್ಲ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ರಾಯಚೂರು ಜಿಲ್ಲೆಯಲ್ಲಿ ಮೂರು ಸಾವಿರ ಎಕರೆಯಷ್ಟು ಭೂಮಿಯನ್ನು ಒಬ್ಬರಿಗೇ ಕೊಡಲು ಕಾರಣವೇನು ?

ಶ್ರೀ ಬಿ. ರಾಚಯ್ಯ.—ಇದು ಸರಕಾರದ ಭೂಮಿಯಲ್ಲ. ಇದನ್ನು ಒಂದು ಬ್ಯಾಂಕಿನವರು ಕೊಂಡುಕೊಂಡಿದ್ದಾರೆ. ಇದಕ್ಕೂ ಸರಕಾರಕ್ಕೂ ಸಂಬಂಧವಿಲ್ಲ. ವಿಷಯಗಳನ್ನು ಚೆನ್ನಾಗಿ ತಿಳಿದುಕೊಳ್ಳದೇ ಇಲ್ಲಿ ಮಾತನಾಡುವುದು ಸರಿಯಲ್ಲ. ಇಷ್ಟು ಮಾತ್ರ ಇಲ್ಲಿ ಹೇಳಬಲ್ಲೆ. ಹರಿಜನರ ಹಾಗೂ ಗಿರಿಜನರ ಹಕ್ಕು ಭಾಧ್ಯತೆಗಳನ್ನು ಕಾಪಾಡುವುದಕ್ಕಾಗಿ ಇಲ್ಲಿಗೆ ಬಂದಿರುವ ಸದಸ್ಯರು ಸ್ವಲ್ಪ ವಿಷಯಗಳನ್ನು ತಿಳಿದುಕೊಂಡು ಹೇಳುತ್ತಿಲ್ಲ. ಎಲ್ಲ ವಿಚಾರಗಳನ್ನೂ ತಿಳಿದು ಕೊಂಡ ಮೇಲೆ ಮಾತನಾಡುವುದು ಚೆನ್ನಾಗಿರುತ್ತೆ ಎಂದು ಇಷ್ಟುಮಾತ್ರ ಹೇಳಬಲ್ಲೆ. ಹರಿಜನರಿಗೆ ಹಾಗೂ ಗಿರಿಜನರಿಗೆ ಏನೇನು ಅನುಕೂಲಗಳನ್ನು ಮಾಡಿಕೊಡಬೇಕೋ ಅದರಲ್ಲಿ ಒಂದಕ್ಕೆ ಹತ್ತರಷ್ಟು ಪಟ್ಟು ಹೆಚ್ಚಾಗಿ ಕೊಡುತ್ತೇನೆ. ಅವರೆ ಎಲ್ಲಿಯಾದರೂ ಕೊಟ್ಟಿಲ್ಲ ಎನ್ನುವುದನ್ನು ಮಾನ್ಯ ಸದಸ್ಯರು ಅವರು ಹೇಳುವುದಕ್ಕಿಂತ ಜಾಸ್ತಿ ಕೊಟ್ಟಿದ್ದರೆ ಅದನ್ನು ಈಗಲಾದರೂ ಒಪ್ಪಿಕೊಳ್ಳುತ್ತಾರೆಯೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕುಂದಗೋಳ).—ಹರಿಜನರಿಗಾಗಿ ಕೊಡುವ ಸವಲತ್ತುಗಳೆಲ್ಲಾ ದುರುಪಯೋಗವಾಗಿ ಸುಮಾರು ಐವತ್ತು ಲಕ್ಷದಷ್ಟು ಅವ್ಯವಹಾರಗಳು ಆಗುತ್ತಿವೆ. ನಮ್ಮ ಕಡೆಯಲ್ಲಿ ನಾಲ್ಕು ಕಡೆಗಳಲ್ಲಿ ಸುಮಾರು ಮೂವತ್ತು ಸಾವಿರ ರೂಪಾಯಿಗಳಷ್ಟು ಹಣ ಸುಮಾರು ಐದು ವರ್ಷಗಳಿಂದ ಖೋಟಾ ಕಾಗದ ಪತ್ರಗಳನ್ನು ಮಾಡಿ ದುರುಪಯೋಗ ಪಡಿಸಿಕೊಂಡಿದ್ದಾರೆ. ಹೀಗೆ ಸರಕಾರದ ಹಣ ಲಕ್ಷಾಂತರ ರೂಪಾಯಿಗಳಷ್ಟು ಪೋಲಾಗುತ್ತಿದ್ದರೂ ಸರಕಾರ ತಕ್ಕ ಕಾರ್ಯಕ್ರಮ ಇನ್ನೂ ತೆಗೆದುಕೊಂಡಿಲ್ಲ. ಎಲ್ಲಿ ಇಂತಹ ಅವ್ಯವಹಾರಗಳು ಆಗುತ್ತಿವೆ ಎನ್ನುವುದನ್ನು ನಾನು ಮಂತ್ರಿಗಳಿಗೆ ತೋರಿಸಲು ಸಿದ್ಧನಿದ್ದೇನೆ. ಮಾನ್ಯ ಮಂತ್ರಿಗಳು ನನ್ನೊಡನೆ ಬರಲಿಕ್ಕೆ ತಯಾರಿದ್ದಾರೆಯೇ ಹೇಗೆ?

ಶ್ರೀ ಬಿ. ರಾಚಯ್ಯ.—ಬರಲಿಕ್ಕೂ ತಯಾರಿದ್ದೇನೆ, ಮತ್ತು ಅಲ್ಲೇನಾದರೂ ಅವ್ಯವಹಾರಗಳು ಆಗಿದೆ ಎಂದು ಕಂಡು ಬಂದರೆ ಅಲ್ಲೇ ಎನ್‌ಕ್ವೈರಿ ಮಾಡುವುದಕ್ಕೂ ತಯಾರಾಗಿದ್ದೇನೆ. ಐದು ವರ್ಷಗಳಿಂದ ಕೊಟ್ಟಿಲ್ಲ ಎನ್ನುವುದು ಸರಿಯಲ್ಲ. 1964 ನೇ ಸಾಲಿನಿಂದ ಕೊಟ್ಟಿರುವುದು ಮೂರು ವರ್ಷಗಳಿಂದ ಎಷ್ಟನ್ನು ಕೊಟ್ಟಿದ್ದಾರೆ ಎಂದರೆ, ಮೊದಲನೆಯ ವರ್ಷದಲ್ಲಿ ಒಂಬತ್ತು ಲಕ್ಷ ಕೊಡಲಾಗಿದೆ, ಎರಡನೇ ವರ್ಷ ಎಂಟು ಲಕ್ಷ ಕೊಡಲಾಗಿದೆ, ಇದಕ್ಕೂ ಹಿಂದಿನ ಸಾಲಿನಲ್ಲಿ ಆರು ಲಕ್ಷ ಚಿಲ್ಲರೆ ಕೊಟ್ಟಿರತಕ್ಕದ್ದು. ತಾವು ಹೇಳುವಂತೆ ಅಷ್ಟು ಅವ್ಯವಹಾರಗಳು ಇಲ್ಲ ಎಂದು ಹೇಳುವುದಲ್ಲ. ಇದರಲ್ಲೂ ಸ್ವಲ್ಪ ವ್ಯತ್ಯಾಸವಿದೆ. ಇದರ ಬಗ್ಗೆ ವಿಚಾರಿಸುತ್ತೇನೆ ಎಂದು ಇಷ್ಟು ಮಾತ್ರ ಇಲ್ಲಿ ಹೇಳಬಲ್ಲೆ. ಮತ್ತು ಮಾನ್ಯ ಸದಸ್ಯರು ಹೇಳಿದಂತೆ ಅವರು ಹೇಳಿದ ಜಾಗಗಳಿಗೆ ಹೋಗುವುದಕ್ಕೂ ತಯಾರಾಗಿದ್ದೇನೆ.

ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಮಂತ್ರಿಗಳು ಹಿಂದೆ ಒಂದು ಸಾರಿ ಇಲ್ಲಿ ಹೇಳುತ್ತಾ ಎಲ್ಲ ಗೇಣಿದಾರರ ಹಿತವನ್ನು ಸಂರಕ್ಷಿಸುತ್ತೇವೆ ಎಂದು ಹೇಳಿದಂತೆ ಮಾಡದೆ ಇಂದು ಗೇಣೀದಾರರುಗಳಿಗೆ ಅವರ ಭೂಮಿಯನ್ನುಳಿಸಿಕೊಳ್ಳಲು ಅಡಚಣೆಗಳುಂಟಾಗುತ್ತಿವೆ. ಇದರ ಬಗ್ಗೆ ಸರಕಾರ ಕೂಡಲೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಕಂದಾಯ ಬೇರೆ ಇಲ್ಲಿ ಹೆಚ್ಚಿಸಿದ್ದಾರೆ. ಇದನ್ನೇಕೆ ಮಾಡಿದ್ದಾರೆ ಎಂದು ತಾಲ್ಲೂಕು ಆಫೀಸಿಗೆ ಹೋಗಿ ನೋಡಿದರೆ ಅಲ್ಲಿ ಮಾಹಿತಿಗಳೇ ಸಿಗುವುದಿಲ್ಲ. ಹೀಗಾಗಿ ಜಮೀನಿನ ಪೊಸೆಷನ್ ಸರ್ಟಿಫಿಕೇಟೇ ಸಿಗುವುದು ಕಷ್ಟವಾಗಿದೆ.

ಇನ್ನು ಸಾಗರತಾಲ್ಲೂಕಿನಲ್ಲಿರುವ ಅರಣ್ಯದ ಭಾಗಗಳಿಂದ ಕಳ್ಳನಾಟಾಗಳು ಬೇರೆ ಕಡೆಗೆ ಹೋಗುತ್ತಿವೆ. ಇವೆಲ್ಲಾ ಫಾರೆಸ್ಟ್‌ಗೆ ಸೇರಿದವು ಎಂದು ಅದರ ಮೇಲೆ ಗುರುತೂ ಇವೆ. ಇವೆಲ್ಲಾ ಎಂ. ಆರ್. ಪಿ. ನಾಟಾಗಳು. ಇವನೆಲ್ಲಾ ತನಿಖೆ ಮಾಡಬೇಕೆಂದು ಅರಣ್ಯದ ಅಧಿಕಾರಿಗಳಿಗೆ ಹೇಳಿದರೂ ಅವರು ಗಮನಿಸುತ್ತಿಲ್ಲ. ಲೈಸೆನ್ಸ್ ಇಲ್ಲದೆ ಎಂ. ಆರ್. ಪಿ. ನಾಟಾಗಳು ಹೊರಕೆ

ಹೋಗುತ್ತಿವೆ. ಬೇಕಾದರೆ ಮಂತ್ರಿಗಳಿಗೆ ಇದನ್ನು ಹಿಡಿದು ತೋರಿಸುತ್ತೇನೆ. ಇದರಿಂದ ಸರಕಾರಕ್ಕೆ ಬೇಕಾದಷ್ಟು ನಷ್ಟವಾಗುತ್ತಿದೆ. ಲಾರಿ ಲೋಡು ಕಳ್ಳತನದಿಂದ ಹೋಗುತ್ತದೆ. ಇದನ್ನು ಹಿಡಿಯುವುದಕ್ಕೆ ಸಾಧ್ಯವಿದೆ. ನನ್ನ ಜೊತೆಗೆ ಮಾನ್ಯ ಮಂತ್ರಿಗಳು ಬಂದರೆ ನಾನು ಹಿಡಿದು ಕೊಡುತ್ತೇನೆ. ತಾವು ಬರುವುದಕ್ಕೆ ತಯಾರಿದ್ದೀರಾ ?

ಶ್ರೀ ಬಿ. ರಾಚಯ್ಯ.—ಸರ್ವಾಂತರ್ಯಾಮಿಯಾಗಿದ್ದರೆ ಹೋಗಬಹುದಾಗಿತ್ತು. ಕಳ್ಳತನ ಎಲ್ಲಿ ಆಗುತ್ತದೆ ಎನ್ನುವುದನ್ನು ನಿರ್ದಿಷ್ಟವಾಗಿ ಹೇಳಿದರೆ ಸರಕಾರಿ ಸಿಬ್ಬಂದಿ ಕಳಿಸಿ ಹಿಡಿಯುವುದಕ್ಕೆ ಪ್ರಯತ್ನಮಾಡುತ್ತೇನೆ. ಸಾಗರದಿಂದ ಒಂದು ದೂರು ಬಂದಿತ್ತು, ಅದನ್ನು ಹಿಡಿದು ನಿಲ್ಲಿಸಿದ್ದಾರೆ. ಕಳ್ಳಸಾಗಾಣಿಕೆಯ ಬಗ್ಗೆ ತನಿಕೆ ನಡೆದಿದೆ. ನನಗೆ ಕಾಗದ ಬರೆದು ತಿಳಿಸಲಿ ಅವರ ಹೆಸರು ಹೊರಗೆಡುಹುವಿಲ್ಲ. ಬೇಕಾದರೆ ಫೋನ್ ಮಾಡಿ ತಿಳಿಸ ಬಹುದು.

ಇನ್ನು ದೇವಸ್ಥಾನದ ಜಮೀನು ಉಳುಮೆ ಮಾಡತಕ್ಕಂಥ ಗೇಣಿದಾರರನ್ನು ಹೊರದೂಡ ಕೂಡದು, ಗೇಣಿ ಕೊಡುವುದಕ್ಕೆ ತಯಾರಿದ್ದರೆ ಹೂರದೂಡ ಕೂಡದು ಎಂದು ಹೇಳಿದೆ. ಒಂದು ವೇಳೆ ಗೇಣಿ ಕೊಡದೇ ಇದ್ದರೆ ಆಕ್ಷನ್ ತೆಗೆದುಕೊಳ್ಳ ಬೇಕು ಎಂದು ಮಾಡಿದೆ.

ಶ್ರೀ ಎಂ. ಜಿ. ಬಣಕಾರ (ಬ್ಯಾಡಗಿ).—ಭೂಕಂದಾಯ ವಸೂಲಾತಿಯು ಅಣಿವಾರಿ ಮೇಲೆ ನಿಗದಿ ಮಾಡುತ್ತಾರೆ. ಎಲ್ಲಿ ಬೆಳೆ ಬಂದಿಲ್ಲವೋ ಅಲ್ಲಿ ಕಂದಾಯ ವಸೂಲಿ ಸೂಟಿ ಬಿಡುವುದಕ್ಕೆ ವ್ಯವಸ್ಥೆ ಇದೆ. ಅದರೆ ಹಳ್ಳಿಗಳಲ್ಲಿ ಪಟೇಲ್ ಶ್ಯಾನುಭೋಗರು ಅಣಿವಾರಿ ಮಾಡುತ್ತಾರೆ. ಅವರು ಈ ಕೆಲಸ ಸರಿಯಾಗಿ ಮಾಡುವುದಿಲ್ಲ. ಮೂರು ವರ್ಷ ಕಾಲ ಮಳೆ ಇಲ್ಲದ ಅವಧಿಯಲ್ಲಿ ಭೂ ಕಂದಾಯ ಸಸ್ಪೆನ್‌ಷನ್ ಮಾಡಿದ್ದಾರೆ. ನಾಲ್ಕನೇ ವರ್ಷ ಮಳೆ ಬೆಳೆ ಇಲ್ಲದೇ ಇದ್ದರೂ ಹನ್ನೊಂದು ಆಣಿ ಬೆಳೆ ಬಂದಿದೆ ಎಂದು ಅಣಿವಾರಿ ಮಾಡಿದ್ದಾರೆ. ಆದುದರಿಂದ ಎಲ್ಲಾ ಜಮೀನುಗಳ ಮೇಲೆ ಕಂದಾಯ ಆಕರಣಿ ಮಾಡುವ ಪದ್ಧತಿ ಜಾರಿಗೆ ಬಂದಿದೆ. ಈ ರೀತಿ ಮಾಡುವುದು ಅನ್ಯಾಯವಲ್ಲವೇ ?

ಶ್ರೀ ಬಿ. ರಾಚಯ್ಯ.—ಫಸಲು ಎಷ್ಟು ಬಂದಿದೆ ಎಂದು ಹಹಣಿಯಲ್ಲಿ ಬರೆಯುತ್ತಾರೆ. ಲ್ಯಾಂಡ್ ರೆವಿನ್ಯು ಆಕ್ಟ್‌ನಲ್ಲಿ ಕ್ರಾಪ್ ಕಟಿಂಗ್ ಎಕ್ಸ್‌ಪೆರಿಮೆಂಟ್ ಮಾಡುವುದನ್ನು ಹೇಳಿದೆ. ಕ್ರಾಪ್ ಕಟಿಂಗ್ ಎಕ್ಸ್‌ಪರಿಮೆಂಟ್ ನಿಯಮದ ಪ್ರಕಾರ ಅಧಿಕಾರಿಗಳು ಮಾಡುತ್ತಾರೆ. ಹಿಂದೆ ಏನಾದರೂ ತಪ್ಪು ಆಗಿದ್ದರೆ ಅದನ್ನು ಸರಿಪಡಿಸೋಣ.

ಶ್ರೀ ಕೆ. ಪ್ರಭಾಕರ್ (ವರ್ತೂರು).—ಅನೇಕ ಕಡೆಗಳಲ್ಲಿ ದೇವಸ್ಥಾನದ ಅರ್ಚಕರು ಟೆನಂಟ್ ಆಗಿದ್ದಾರೆ. ಅವರು ದೇವಸ್ಥಾನಕ್ಕೆ ಕೊಡಬೇಕಾದುದನ್ನು ಕೊಡದೇ ಇದ್ದರೆ ಬದಲಾವಣೆ ಮಾಡಬೇಕು ಎಂದು ಇದ್ದಾಗ್ಯೂ ಟೆನೆಂಟ್ಸ್ ಕೈ ಬಿಟ್ಟಿದ್ದಾರೆ. ಈ ರೀತಿ ತೊಂದರೆ ಮಾಡಿರ ತಕ್ಕಂಥಾದ್ದು ಸರಕಾರದ ಗಮನಕ್ಕೆ ಬಂದಿದೆಯೇ ? ಇದಕ್ಕೆ ಏನು ವ್ಯವಸ್ಥೆ ಮಾಡಿದ್ದೀರಿ ?

ಇನ್ನೊಂದು ಪ್ರಶ್ನೆ ಫಾರೆಸ್ಟ್ ಏರಿಯಾದಲ್ಲಿ ಇರುವ ರೆವೆನ್ಯೂ ಪಾಕೆಟ್ಸ್ ಅಗ್ರಿಕಲ್ಚರಲ್ ಕಾಲೋನಿ ಮಾಡುವುದಕ್ಕೆ ಅಮೃತಮಹಾಲ್‌ನ್ನು ಅಗ್ರಿಕಲ್ಚರಲ್ ಕಾಲೋನಿ ಮಾಡುವುದಕ್ಕೆ ಬಿಟ್ಟು ಕೊಡುವುದನ್ನು ಏನು ಮಾಡಿದ್ದೀರಿ ?

ಇನ್ನು 3ನೇ ಪ್ರಶ್ನೆ : ಕರಪ್ಷನ್ ಬಗ್ಗೆ ಅದು ಗಮನಕ್ಕೆ ಬಂದರೆ ಸೂಕ್ತ ಕ್ರಮ ತೆಗೆದು ಕೊಂಡು ಕಠಿಣ ಶಿಕ್ಷೆ ಮಾಡುತ್ತೇವೆಂಬ ಧ್ವನಿಯಲ್ಲಿ ಹೇಳಲಿಲ್ಲ ಅದಕ್ಕೆ ಕಾರಣ ಏನು ?

ಇನ್ನು ನಾಲ್ಕನೆ ಪ್ರಶ್ನೆ : ಹರಿಜನರು ಗಿರಿಜನರು ಮನೆ ಕಟ್ಟುವುದಕ್ಕೆ ಫಾರೆಸ್ಟ್ ಮೆಟೀರಿಯಲ್ ಟಿಂಬರ್ ಕೊಡುವುದರ ಬದಲು ಫಾರೆಸ್ಟ್ ಡಿಪಾರ್ಟ್‌ಮೆಂಟಿನಲ್ಲಿಯೇ ಬಾಗಿಲು ಕಿಟಕಿ ತಯಾರು ಮಾಡಿ ಕೊಡುತ್ತೇವೆ ಎಂದು ಆಶ್ವಾಸನೆ ಇತ್ತು. ಅದು ಕಾರ್ಯರೂಪಕ್ಕೆ ಏತಕ್ಕೆ ಬಂದಿಲ್ಲ ?

ಕೊನೆಯದಾಗಿ ಇನಾಮ್ ಅಬಾಲಿಷನ್ ಆಕ್ಟ್ ಪ್ರಕಾರ ಕಾಂಪೆನ್‌ಶೇಷನ್ ಕೊಡಬೇಕು ಎಂದು ಹಣ ಒದಗಿಸಿದ್ದರೂ ಕೂಡ ಪರಿಹಾರ ಹಣ ಕೊಟ್ಟಿಲ್ಲ. ಅವರ ಜಮೀನೂ ಹೋಯಿತು, ಹಣವೂ ಬರಲಿಲ್ಲ. ಈ ಸ್ಕೀಂ ಯದ್ವಾ ತದ್ವಾ ಇರಲು ಕಾರಣವೇನು ?

ಶ್ರೀ ಬಿ. ರಾಚಯ್ಯ.—ಇನಾಂದಾರರಿಗೆ ಎಷ್ಟು ಕಾಂಪೆನ್‌ಸೇಷನ್ ಕೊಟ್ಟಿದ್ದೇವೆ ಅಂದರೆ 1 ಕೋಟಿ 85 ಲಕ್ಷರೂಪಾಯಿ ಪರಿಹಾರ ಹಣವನ್ನು ಕೊಟ್ಟಿದ್ದೇವೆ. ಇನ್ನೂ 85 ಲಕ್ಷ ರೂಪಾಯಿ ಕೊಡಬೇಕಾಗಿದೆ ಎಂದು ನನ್ನ ಉತ್ತರದಲ್ಲಿ ಹೇಳಿದ್ದೇನೆ. ಇದನ್ನು ಅವರು ತಮ್ಮ ಕನ್ನಡಕ ತಿರುವಿ ಹಾಕಿಕೊಂಡು ನೋಡಿರಬಹುದು.

ಗ್ರಾಮಾಧಿಕಾರಿಗಳಿಗೆ ಪರಿಹಾರ ಹಣ ಕೊಡುವುದಕ್ಕೆ ಅರ್ಜಿ ಹಾಕಿಕೊಳ್ಳಲು ಅವಕಾಶ ಒದಗಿಸಿ ಕೊಟ್ಟಿದ್ದೇವೆ. ಆರು ತಿಂಗಳು ಹೆಚ್ಚು ಅವಧಿ ಕೊಟ್ಟಿದೆ. ಇದನ್ನು ರೆವೆನ್ಯೂ ಅಧಿಕಾರಿ ತಿಳಿಸಿದೆ.

(ಶ್ರೀ ಬಿ. ರಾಚಯ್ಯ)

ಫಾರೆಸ್ಟ್ ಮಾಲು ಟಿಂಬರ್ ರೂಪದಲ್ಲಿ ಕೊಡುವುದಕ್ಕೆ ಬದಲು ಕನ್‌ವರ್ಟ್ ಮಾಡಿ ಯಾಕೆ ಕೊಡಲಿಲ್ಲ ಎಂದು ಕೇಳಿದರು. ಟಿಂಬರ್ ಬೇಡ ಕನ್‌ವರ್ಟ್ ಮಾಡಿ ಕೊಡಿ ಎಂದು ಕೇಳಿದ್ದಾರೆ. ಇದರಿಂದ ಪ್ರಮಾಣ ಕಡಿಮೆಯಾಗುತ್ತದೆ. ನಮ್ಮಲ್ಲಿ ಸಾ ಮಿಲ್ಸ್ ಇವೆ. ಕನ್‌ವರ್ಟ್ ಮಾಡಿ ಕೊಡಲು ತಯಾರಿದ್ದೇವೆ. ಆದರೆ ಜನರು ತೆಗೆದುಕೊಳ್ಳಲು ತಯಾರಿಲ್ಲ.

ದೇವಸ್ಥಾನದ ಜಮೀನು ವಿಚಾರದಲ್ಲಿ ಯಾರು ಅರ್ಚಕರನ್ನು ಬಿಡಿಸಿದ್ದಾರೆ ಎನ್ನುವುದನ್ನು ನಮ್ಮ ಗಮನಕ್ಕೆ ತಂದಿಲ್ಲ. ಒಂದು ವೇಳೆ ಗಮನಕ್ಕೆ ತಂದರೆ ಅವನ್ನು ವಿಚಾರಿಸುತ್ತೇನೆ.

ರೆವೆನ್ಯೂ ಜಮೀನಿನಲ್ಲಿ ಎಲ್ಲಿ ಕಾಲೋನಿ ಮಾಡಬೇಕು ಎನ್ನುವ ಸೂಚನೆ ಇದೆ ಅಲ್ಲಿ ಮಾಡ ತಕ್ಕಂಥ ಕೆಲಸದ ಬಗ್ಗೆ ಗಮನದಲ್ಲಿ ಇಟ್ಟುಕೊಳ್ಳುತ್ತೇವೆ.

ಅಧಿಕಾರಿಗಳು ಇದ್ದಾರೆ, ಕ್ರಮ ತೆಗೆದುಕೊಳ್ಳುತ್ತೇವೆ. ಆದರೆ ಧ್ವನಿ ಕಡಿಮೆಯಾಗಿದೆ ಎಂದು ಹೇಳಿದರು. ಪದಗಳನ್ನು ಗಟ್ಟಿಯಾಗಿ ಮಾತನಾಡುವುದರಿಂದ ಏನು ಪ್ರಯೋಜನ? ಲಂಚ ತೆಗೆದುಕೊಂಡದ್ದು ರುಜುವಾತು ಆದರೆ ತಪ್ಪು ಮಾಡಿದವರು ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಕಾಯದೇ ಪ್ರಕಾರ ಉಗ್ರ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ವಿ. ಎನ್. ಪಾಟೀಲ್ (ಹುಮನಾಬಾದ್).—ನಮ್ಮ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಮೂರು ತರದ ಜಮೀನು ಇದೆ. ಜಾಗೀರ, ಪಾಯಗಾ, ಸರಸಾ, ಖಾಲಸಾ ಈ ಮೂರು ತರದ ಜಾಗೀರ ಭೂಮಿಗಳಿಗೆ 1 ರೂಪಾಯಿ, 3 ರೂಪಾಯಿ, 6 ರೂಪಾಯಿ ಕಂದಾಯ ಇತ್ತು, ಅದನ್ನು ಎರಡರಷ್ಟು ಕಂದಾಯ ಮಾಡಿದ್ದಾರೆ. ಲ್ಯಾಂಡ್ ರೆವೆನ್ಯೂ 12 ರೂಪಾಯಿ ಇದರ ಮೇಲೆ ಮೂರರಷ್ಟು ಸರ್‌ಚಾರ್ಜ ಲೆವಿ ಮಾಡಿದ್ದಾರೆ. ಒಂದು ಸರಿಯಾದ ವ್ಯವಸ್ಥೆ ತರುವುದಕ್ಕೆ ಈ ಭೂಮಿಯ ವಿಚಾರದಲ್ಲಿ ಹೊಸದಾಗಿ ಸರ್ವೇ ಮಾಡಿಸುತ್ತೀರಾ? ರೈತರಿಗೆ ಸೌಲಭ್ಯ ಒದಗಿಸುತ್ತೀರಾ?

ಎರಡನೆಯದು ದೇವಸ್ಥಾನದ ಭೂಮಿಗಳು ಎಂದು ಏನಿವೆ ಅದರಮೇಲೆ ಅವಲಂಬನೆ ಮಾಡಿಕೊಂಡಿರುವವರು ಇದ್ದಾರೆ. ಅಂಥವರನ್ನು ಬಿಡಿಸುವ ವಿಚಾರ ಕೆಲವರು ಮಾಡುತ್ತಿದ್ದಾರೆ. ಅವರಿಗೆ ಸರ್ಕಾರದ ರಕ್ಷಣೆ ಕೊಡುವ ವಿಚಾರ ಮಾಡುತ್ತೀರಾ?

ಶ್ರೀ ಬಿ. ರಾಚಯ್ಯ.—ದೇವಸ್ಥಾನದ ಭೂಮಿಯನ್ನು ಬಿಡಬೇಕಾಗಿಲ್ಲ. ಅದಕ್ಕೆ ಈಗಾಗಲೇ ಸರ್ಕ್ಯುಲರ್‌ಗಳನ್ನು ಕಳಿಸಿದ್ದೇವೆ. ಈ ಅಧಿವೇಶನದಲ್ಲಿ ಏಕರೂಪದ ಮಸೂದೆಯನ್ನು ತರಬೇಕೆಂದಿದ್ದೇನೆ.

ಭೂಕಂದಾಯವನ್ನು ಇಳಿಸುವ ವಿಚಾರ ಹೇಳಿದರು. ಬಹುಶಃ ಅದನ್ನು ಮಾಡುವುದಕ್ಕೆ ಆಗುವುದಿಲ್ಲ. ಜೋನ್ಸ್ ಮಾಡಿ, ರೀಕ್ಲಾಸಿಫಿಕೇಷನ್ ಮಾಡಿ ಕಂದಾಯವನ್ನು ಗೊತ್ತು ಮಾಡಿದ್ದೇವೆ. ನಾನು ಮೊದಲೇ ಹೇಳಿದ ಹಾಗೆ ಲೆಕ್ಕಾಚಾರದಲ್ಲಿ ತಪ್ಪಾಗಿದ್ದರೆ ಅದನ್ನು ಸರಿಪಡಿಸುವುದಕ್ಕೆ ಶಾಸನ ಸಭೆಯ ಮುಂದೆ ಕೆಲವು ತಿದ್ದುಪಡಿಗಳನ್ನು ತರುತ್ತೇನೆ. ಮಾನ್ಯ ಸದಸ್ಯರು ಅದನ್ನು ಒಪ್ಪಿಕೊಂಡರೆ ಆಮೇಲೆ ಎಲ್ಲೆಲ್ಲಿ ಇಂತಹ ಏರುಪೇರುಗಳು ಆಗಿರಬಹುದೋ ಅವುಗಳನ್ನು ಸರಿಪಡಿಸುವುದಕ್ಕೆ ಅವಕಾಶವಾಗುತ್ತದೆ.

4-00 P.M.

ಶ್ರೀ ಎಂ. ಎನ್. ರಾಮಣ್ಣ (ತುರುವೇಕೆರೆ).—ತೋಟಿ ತಳವಾರರುಗಳಿಗೆ ಮತ್ತು ಗ್ರಾಮ ನೌಕರರಿಗೆ ಏನು ಇನಾಂ ಜಮೀನು ಕೊಟ್ಟಿದ್ದೀರಿ ಅದನ್ನು ಅವರಿಗೇ ಕೊಡುವುದಕ್ಕಾಗಿ ಒಂದು ಸ್ಪೆಷಲ್ ಸಬ್ ಡಿವಿಜನ್ ಮಾಡಿ ಅದಷ್ಟು ಜಾಗ್ರತೆ ಆ ಜಮೀನುಗಳನ್ನು ಅವರಿಗೆ ಒದಗಿಸಿ ಕೊಡುತ್ತೀರಾ ಸ್ವಾಮಿ.

ಶ್ರೀ ಬಿ. ರಾಚಯ್ಯ.—ಇರತಕ್ಕವರಿಂದಲೇ ಕೆಲಸ ಮಾಡಿಸುವುದಕ್ಕೆ ಸಾಧ್ಯವಾಗದೆ ಇದ್ದರೆ ಮಾನ್ಯ ಸದಸ್ಯರ ಸಲಹೆಯನ್ನು ಯೋಚನೆ ಮಾಡುತ್ತೇವೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಕೋಲಾರ, ತುಮಕೂರು, ಚಿತ್ರದುರ್ಗ ಜಿಲ್ಲೆಗಳಲ್ಲಿ ಕ್ಷಾಮ ಶಾಶ್ವತವಾಗಿದೆ. ಇದರ ಶಾಶ್ವತ ಪರಿಹಾರಕ್ಕಾಗಿ 40 ಕೋಟಿ ರೂಪಾಯಿ ಯೋಜನೆಯನ್ನು ಮಾನ್ಯ ಎಂ. ವಿ. ಕೃಷ್ಣಪ್ಪನವರು ರೆವಿನ್ಯೂ ಮಂತ್ರಿಗಳಾಗಿದ್ದಾಗ ಮಾಡಿರುವುದಾಗಿ ಹೇಳಿದ್ದರು; ಅದು ಏನಾಯಿತು, ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ?

ಅಗ್ರಿಕಲ್ಚರಲ್ ಇಂಪ್ಲಿಮೆಂಟ್ಸ್, ಮೆಷಿನರಿ ಇವುಗಳನ್ನು ಅಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್‌ನಿಂದ ತೆಗೆದುಕೊಂಡಾಗ ರಿಜಿಸ್ಟ್ರೇಷನ್ ಫೀ ರೈತರು ಕೊಡಬೇಕಾಗಿದೆ. ಅದನ್ನು ಮನ್ನಾ ಮಾಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಹಿಂದಿನ ರೆವೆನ್ಯೂ ಮಂತ್ರಿಗಳು 40 ಕೋಟಿ ರೂಪಾಯಿ ಯೋಜನೆ ಏನಾಗಿದೆ ಎಂದು ಕೇಳಿದರು. ಕೇಂದ್ರ ಸರ್ಕಾರದವರು ಅಧಿಕಾರಿಗಳನ್ನು ಕಳಿಸಿಕೊಟ್ಟು ಇಂಥಿಂಥ ಕಡೆ ಇಂಥಿಂಥ ಯೋಜನೆಗಳನ್ನು ಮಾಡುವುದಕ್ಕೆ ಅವಕಾಶವಿದೆ ಎಂದು ಹೇಳಿದ್ದರಮೇಲೆ ಅವರ ಸಲಹೆ ಪಡೆದು ಎರಡು ಯೋಜನೆಗಳು ಒಂದು 40 ಕೋಟಿ ರೂಪಾಯಿಗೆ ಸಂಬಂಧಪಟ್ಟದು, ಇನ್ನೊಂದು 270 ಕೋಟಿ ರೂಪಾಯಿಗೆ ಸಂಬಂಧಪಟ್ಟದು, ಆಗಿವೆ. ಈ ಎರಡು ಯೋಜನೆಗಳನ್ನೂ ಕೂಡ ಕೇಂದ್ರ ಸರ್ಕಾರದವರು ಒಪ್ಪಿ ಹಣವನ್ನು ಕೊಟ್ಟಿಲ್ಲ. ಆದರೆ ಅವರು ಕೊಟ್ಟಿರತಕ್ಕದ್ದು ಮೈನರ್ ಇರಿಗೇಷನ್ನಿಗೆ ಸ್ವಲ್ಪ ಹಣ ಮತ್ತು ಸಾಯಿಲ್ ಕನ್‌ಸರ್ವೇಷನ್ನಿಗೆ ಸ್ವಲ್ಪ ಹಣ. ಇದರಲ್ಲಿ ಪ್ಲಾನಿಂಗ್ ಕಮಿಷನ್‌ರವರು ಏನು ಸೀಲಿಂಗ್ ಗೊತ್ತು ಮಾಡಿದ್ದಾರೆ ಅಷ್ಟು ಹಣ ಖರ್ಚು ಮಾಡಬೇಕು.

ಬಿಜಾಪುರ ಜಿಲ್ಲೆ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಎರಡು ಪೈಲಟ್ ಪ್ರಾಜೆಕ್ಟ್‌ಗಳನ್ನು ತೆಗೆದು ಕೊಂಡಿದ್ದಾರೆ. ಅದಕ್ಕೆ ಕೆಲವು ಸ್ಟ್ಯಾಂಡರ್ಡ್ಸ್ ಗೊತ್ತುಮಾಡಿದ್ದಾರೆ. ಆ ಸ್ಟಾಂಡರ್ಡ್ ಪ್ರಕಾರ ಯಾವ ಜಿಲ್ಲೆಯಲ್ಲಿ ಪೈಲಟ್ ಪ್ರಾಜೆಕ್ಟ್ ತೆಗೆದುಕೊಳ್ಳಬೇಕೆಂದು ಇಂಡಿಯಾ ಸರಕಾರದ ಅಧಿಕಾರಿಗಳು ಬಂದು ಸೆಲೆಕ್ಟ್ ಮಾಡುತ್ತಾರೆ. ಅದರಲ್ಲಿ ನಮ್ಮ ಕೈವಾಡವೇನೂ ಇಲ್ಲ ಹಳ್ಳಿ ಮೈಸೂರು ಮತ್ತು ಕೋಲಾರ ಜಿಲ್ಲೆಯ ಬಾಗೇಪಲ್ಲಿಯಲ್ಲಿ ಆಗಿಲ್ಲ ಇದಕ್ಕೆ ಏನು ಮಾಡುವುದಕ್ಕೂ ಬರುವುದಿಲ್ಲ. ನಾವು ಕೇಂದ್ರ ಸರ್ಕಾರವನ್ನು ಈ ಬಗ್ಗೆ ಒತ್ತಾಯ ಮಾಡುತ್ತಲೇ ಇದ್ದೇವೆ.

ರಿಜಿಸ್ಟ್ರೇಷನ್ ಫೀ ವಿಷಯ ಕೇಳಿದ್ದಾರೆ. ಕಾನೂನು ಪ್ರಕಾರ ಕೆಲವರಿಗೆ ಇಂಥಿಂಥ ರಿಜಿಸ್ಟ್ರೇಷನ್ ವಿನಾಯಿತಿ ಕೊಡಬೇಕೆಂದು ಇದೆ. ಇನ್ನು ಕೆಲವರಿಗೆ ಕೊಡುವುದಕ್ಕಾಗುವುದಿಲ್ಲ. ಆದುದರಿಂದ ರಿಜಿಸ್ಟ್ರೇಷನ್ ಡಿಪಾರ್ಟ್‌ಮೆಂಟ್ ಇದ್ದುಕೊಂಡು ಪ್ರತಿಯೊಂದಕ್ಕೂ ವಿನಾಯಿತಿ ಕೊಡುತ್ತಾ ಹೋದರೆ ಖರ್ಚು ಜಾಸ್ತಿಯಾಗಿ ಏನು ಉತ್ಪತ್ತಿ ಆ ಇಲಾಖೆಯಲ್ಲಿ ಆಗಿದೆ ಎಂದು ಮಾನ್ಯ ಸದಸ್ಯರೇ ಕೇಳುತ್ತಾರೆ. ಅದಕ್ಕೋಸ್ಕರ ಈಗಿನ ಸಂದರ್ಭದಲ್ಲಿ ಯಾರಿಗೆ ಕೊಡುವುದಕ್ಕೆ ಚೈತನ್ಯ ವಿದೆ ಅವರಿಂದ ವಸೂಲ್ಮಾಡಿ ಕೊಡುವುದಕ್ಕೆ ಆಗದೆ ಇರುವ ಕಡೆ ಕೆಲವು ಸಂದರ್ಭಗಳಲ್ಲಿ ವಿನಾಯಿತಿ ಕೊಡುವುದು ಸೂಕ್ತ ಎಂದು ಭಾವಿಸಿದ್ದೇನೆ.

ಶ್ರೀ ಹಂಜಿ ಶಿವಣ್ಣ (ತರೀಕೆರೆ).—ಅರಣ್ಯ ಸಂಪತ್ತು ಕಳ್ಳತನವಾಗುತ್ತಿರುವುದನ್ನು ನಿಲ್ಲಿಸುವುದಕ್ಕೆ ಸಾಧ್ಯವಿದೆ. ಕೆಲವು ಸ್ಥಳಗಳಲ್ಲಿ ಹಿಡಿಯುತ್ತಿದ್ದಾಗ ಹೆಚ್ಚಾಗಿ ಹೊರಗೆ ಬರುತ್ತಿರಲಿಲ್ಲ. ಇತ್ತೀಚೆಗೆ ಅರಣ್ಯ ಸಂಪತ್ತು ವಿಪರೀತವಾಗಿ ಕಳ್ಳತನವಾಗುವುದಕ್ಕೆ ಕೆಲವು ಅಧಿಕಾರಿಗಳ ನ ಉದಾಸೀನ ಕಾರಣ. ಅರಣ್ಯ ಸಂಪತ್ತು ಕಳ್ಳತನವಾಗುವುದನ್ನು ತಪ್ಪಿಸಲು ಕೆಲವು ಅಧಿಕಾರಿಗಳನ್ನು ನೇಮಕ ಮಾಡಿರುತ್ತೀರಿ. ಕಳ್ಳತನ ನಡೆದಾಗ ಆಯಾ ಭಾಗದಲ್ಲಿರುವ ಅಧಿಕಾರಿಗಳು ಅಲ್ಲೇ ಕಾರ್ಯಕ್ರಮ ತೆಗೆದುಕೊಂಡರೆ ಖಂಡಿತ ಕಳ್ಳತನವಾಗುವುದಿಲ್ಲ. ಇದಕ್ಕೆ ಏನು ಹೇಳುತ್ತೀರಿ ?

ಶ್ರೀ ಬಿ. ರಾಚಯ್ಯ.—ಅಧಿಕಾರಿಗಳೂ ಸ್ವಲ್ಪಮಟ್ಟಿಗೆ ಈ ಕಳ್ಳತನಗಳಿಗೆ ಕಾರಣಕರ್ತರಾಗಿ ದ್ದಾರೆ. ಆದ್ದರಿಂದ ಖಾಸಗಿಯವರು ಲಾಭ ಮಾಡಿಕೊಳ್ಳುವುದಕ್ಕೆ ಅವಕಾಶವಾಗಿದೆ. ದರಖಾಸ್ತು ಜಮೀನು ಪಡೆದವರು ಅದರ ಮೂಲಕ ನಾಟ ಅಕ್ವೈರ್ ಮಾಡಿಕೊಂಡಿದ್ದಾರೆ. ಇಂಥ ಕೆಲಸಗಳನ್ನು ಬರೀ ಕಾಂಗ್ರೆಸ್‌ನವರೇ ಮಾಡಿದ್ದಾರೆಂದು ಹೇಳುವುದಕ್ಕೆ ಆಗುವುದಿಲ್ಲ. ನನ್ನ ಹತ್ತಿರ ಒಂದು ಪಟ್ಟಿ ಇದೆ. ಅದರಲ್ಲಿ ಯಾರು ಯಾರು ಇದ್ದಾರೆ, ಅದರ ಹಿನ್ನೆಲೆ ಏನು ಎಂದು ಕೂಡ ಗೊತ್ತಿದೆ. ಆದ್ದರಿಂದ ಮಾನ್ಯ ಸದಸ್ಯರು ನಮಗೆ ಸ್ವಲ್ಪ ಸಹಾಯ ಮಾಡಿದರೆ ಅರಣ್ಯದಲ್ಲಿ ಆಗುವ ಕಳ್ಳತನವನ್ನು ಕಡಮೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಐ. ಸೋಮಶೇಖರಪ್ಪ (ಹೊಸನಗರ).—ಮೈಸೂರು ರಾಜ್ಯದಲ್ಲಿ ಗಂಧದ ಮರ ಬಹು ಮಟ್ಟಿಗೆ ಕಡಿಮೆಯಾಗುತ್ತಿದೆ. ಇನ್ನು ನಾಲ್ಕೈದು ವರ್ಷದಲ್ಲಿ ಶಿವಮೊಗ್ಗ ಮತ್ತು ಮೈಸೂರು ಗಂಧದ ಕಾರ್ಖಾನೆಗೆ ಗಂಧದ ಮರ ಸಿಕ್ಕದೆ ಅದನ್ನು ಮುಚ್ಚುವ ಸ್ಥಿತಿ ಬರಬಹುದು. ಈ ದೃಷ್ಟಿ ಯಿಂದ ಶ್ರೀಗಂಧದ ಮರಗಳನ್ನು ಹೆಚ್ಚಾಗಿ ಬೆಳೆಸುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆಯೇ? ಮಲೆನಾಡಿನಲ್ಲಿ ಎಂ. ಆರ್. ಪಿ. ದುರುಪಯೋಗವಾಗುತ್ತಿದೆ. ಮಲೆನಾಡು ರೈತರಿಗೆ ಸರ್ಕಾರಿ ಡಿಪೋ ಮೂಲಕ ನಾಟ ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಸರ್ಕಾರಿ ಡಿಪೋನಿಂದ ಮಲೆನಾಡಿನಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ರುವ ರೈತರಿಗೆ ಬೇಕಾದ ನಾಟ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀಗಂಧವನ್ನು ನಾವು ಬೆಳೆಸುತ್ತಿದ್ದೇವೆ. ಮೈದಾನ ಭಾಗಗಳಲ್ಲಿ, ಬೆಂಗಳೂರು, ತುಮಕೂರು, ಮೈಸೂರು ಈ ಜಿಲ್ಲೆಗಳಲ್ಲಿ ಗಂಧಧ ಮರಗಳು ಉತ್ಕೃಷ್ಟವಾಗಿ ಬೆಳೆಯುವುದಕ್ಕೆ ಅವಕಾಶವಿದೆ. ಅಂಥ ಕಡೆ ಟ್ರೆಂಚ್‌ಗಳನ್ನು ಹೊಡೆದು ಗಿಡಗಳನ್ನು ಬೆಳೆಸುತ್ತಿದ್ದೇವೆ. ಇನ್ನು ನೂರು ವರ್ಷದವರೆಗೂ ಈಗಿನ ರೀತಿಯಲ್ಲಿಯೇ ಗಂಧದ ಕೋರಿಗೆ ಒದಗಿಸುವುದಕ್ಕೆ ಗಂಧದಗಿಡಗಳನ್ನು ಬೆಳೆಸುತ್ತಿದ್ದೇವೆ.

ಶ್ರೀ ಎಸ್. ಎಚ್. ಪುಟ್ಟರಂಗನಾಥ (ಬೇಲೂರು).—1961ನೇ ಇಸವಿಯಿಂದ ಪಂಚಾಯಿತಿಗೆ ಕೆಲವು ಜಮೀನುಗಳನ್ನು ಕೊಟ್ಟಿರುವುದರಿಂದ ಬಡವರಿಗೆ ಭೂಮಿ ಸಿಕ್ಕುತ್ತಿಲ್ಲ. ಈ ಬಗ್ಗೆ ತಾವು ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ? ಜಮೀನನ್ನು ಮತ್ತೆ ಸರ್ಕಾರದ ವಶಕ್ಕೆ ತೆಗೆದುಕೊಳ್ಳುವ ಪ್ರಯತ್ನವನ್ನೇನಾದರೂ ಮಾಡುತ್ತೀರಾ?

ಶ್ರೀ ಬಿ. ರಾಚಯ್ಯ.—1961ನೆ ಇಸವಿಯಿಂದ ಪಂಚಾಯಿತಿ ಕಾನೂನು ಪ್ರಕಾರ ಎಲ್ಲೆಲ್ಲಿ ಗೋಮಾಳಗಳು, ತೋಪುಗಳು ಇವೆ ಅವುಗಳು ಸಂಬಂಧಪಟ್ಟ ಗ್ರಾಮ ಪಂಚಾಯಿತಿಗೆ ಸೇರುತ್ತವೆ. 1961ನೆ ಇಸವಿಯಿಂದ ಯಾವ ಯಾವ ಅಧಿಕಾರಗಳನ್ನು ಕಾಯಿದೆಯಲ್ಲಿ ನಿಗದಿ ಮಾಡಿದ್ದಾರೆ ಅದರ ಪ್ರಕಾರ ಭೂಮಿಯನ್ನು ಕೊಡದೆ ಇದ್ದ ಪಕ್ಷದಲ್ಲಿ ಅದನ್ನು ವ್ಯಾಲಿಡೇಟ್ ಮಾಡುವುದಕ್ಕೆ ಒಂದು ಮಸೂದೆಯನ್ನು ತರುತ್ತಿದ್ದೇವೆ. ಪಂಚಾಯಿತಿಗಳ ಅಭಿಪ್ರಾಯವನ್ನು ಕೇಳಿ ಅದರ ಪ್ರಕಾರ ನಾವು ಭೂಮಿಯನ್ನು ಹಂಚಿಕೆ ಮಾಡುವಾಗ ಅನುಸರಿಸಬೇಕಾದ ಕ್ರಮಗಳನ್ನು ತಿಳಿಸಿ ಡಿವಿಜನಲ್ ಕಮಿಷನರಿಗೆ ಸೂಚನೆ ಕೊಟ್ಟಿದ್ದೇವೆ. ಎಲ್ಲೆಲ್ಲಿ ಈ ರೀತಿ ಕಾಯಿದೆ ಅಳಪಡಿಸಿ ಗ್ರ್ಯಾಂಟುಮಾಡಿಲ್ಲ ಅಂಥ ಕಡೆ ಈ ರೀತಿ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ಸರ್ಕ್ಯುಲರ್ ಕೊಟ್ಟಿದ್ದೇವೆ.

ಶ್ರೀ ಎಲ್. ಶ್ರೀಕಂಠಯ್ಯ (ನಂಜನಗೂಡು).—ಪಹಣಿಯಲ್ಲಿ ಸಾಗುವಳಿದಾರನೆಂದು ನಮೂದಾಗಿದ್ದರೂ ಕೋರ್ಟಿನಲ್ಲಿ ಆ ಜಮೀನು ಅತನ ಸ್ವಾಧೀನದಲ್ಲಿದೆಯೆಂದು ತಿಳಿದುಕೊಳ್ಳುವುದಕ್ಕೆ ಲೀಗಲ್ ಸ್ಯಾಂಕ್ಷನ್ ಇಲ್ಲ. ರೆವೆನ್ಯೂ ರಿಕಾರ್ಡು ತೋರಿಸುವುದಕ್ಕೆ ಲೀಗಲ್ಲಾಗಿ ಕಾನೂನು ಮಾಡುತ್ತೀರಾ? 2 ಎಕರೆ ತರಿ, 3 ಎಕರೆ ತರಿ, ಖುಷ್ಕಿ ಇದ್ದರೆ ಪೂರ್ಣವಾಗಿ ವಿನಾಯಿತಿ ಕಂದಾಯದ ಬಗ್ಗೆ ಕೊಡುತ್ತೀರಾ?

ಶ್ರೀ ಬಿ. ರಾಚಯ್ಯ.—ಈಗ ಸದ್ಯಕ್ಕೆ ಹಾಗೆ ವಿನಾಯಿತಿ ಕೊಡುವುದಕ್ಕೆ ಸಾಧ್ಯವಿಲ್ಲ. ರಿಕಾರ್ಡ್ ಅಫ್ ರೈಟ್ಸ್ ಕ್ರಮವಾಗಿ ಬರೆಯದೆ ಸ್ವಲ್ಪ ಲೋಪದೋಷವಿರಬಹುದು. ಅದಕ್ಕೆ ಸ್ಪೆಷಲ್ ಡ್ರೈವ್ ಮಾಡಿದ್ದೇವೆ. ಬಹುಶಃ 6 ತಿಂಗಳಲ್ಲಿ ಮ್ಯುಟೇಷನ್ ಮತ್ತು ರಿಕಾರ್ಡ್ ಅಫ್ ರೈಟ್ಸ್ ಬಾಕಿ ಇರುವುದನ್ನು ಪೂರ್ಣ ಮಾಡಬೇಕೆಂದು ತಿಳಿಸಿದ್ದೇವೆ, ಆಗಬಹುದು.

ಶ್ರೀ ಎಲ್. ಶ್ರೀಕಂಠಯ್ಯ.—ಅದಕ್ಕೆ ಲೀಗಲ್ ಸ್ಯಾಂಕ್ಷನ್ ಏನಿದೆ?

ಶ್ರೀ ಬಿ. ರಾಚಯ್ಯ.—ಅದನ್ನು ಲಾ ಇಲಾಖೆಯವರನ್ನು ಕೇಳಿ ಹೇಳಬೇಕು.

ಶ್ರೀ ಪಿ. ವೆಂಕಟಗಿರಿಯಪ್ಪ (ಕೋಲಾರ).—ರೈತರು ಗೇಣಿ ಅಥವಾ ಹಕ್ಕುಭಾದ್ಯತೆಯನ್ನು ಧೃಢಪಡಿಸಿಕೊಳ್ಳಲು ಪಹಣಿ ಸರಿಯಾಗಿರಬೇಕು. ಈಗ ಪಹಣಿ ಬರೆಯುವವರು ಅನೇಕ ಸಂದರ್ಭಗಳಲ್ಲಿ ಶ್ರೀಮಂತರಿಗೆ ಅನುಕೂಲವಾಗುವಂತೆ ಬರೆಯುತ್ತಾರೆ. ಬೇಕಾದವರಿಗೆ ಅನುಕೂಲಮಾಡಲು ಶ್ಯಾನುಭೋಗರು ಮನೆಯಲ್ಲೇ ಕುಳಿತುಕೊಂಡು ಹೊಡೆದುಹಾಕಿ ಬೇರೆ ಬರೆಯುವುದಕ್ಕೆ ಅವಕಾಶವಿದೆ. ಆದುದರಿಂದ ಅಂತಿಮವಾಗಿ ರೆವೆನ್ಯೂ ಅಧಿಕಾರಿ ಗ್ರಾಮಕ್ಕೆ ಹೋಗಿ ಪಹಣಿ ಬರದಿರುವುದು ಸರಿಯಾಗಿದೆಯೇ, ಇಲ್ಲವೇ ಎಂಬುದನ್ನು ನೋಡಲು ಸಾಧ್ಯವೇ?

ಶ್ರೀ ಬಿ. ರಾಚಯ್ಯ.—ಸಾಧ್ಯವಾಗುತ್ತದೆ, ಹಾಗೆ ಮಾಡಿಸೋಣ.

ಶ್ರೀ ಕೆ. ಸಂಗನಗೌಡ (ಲಿಂಗಸ್ಗೂರು).—ರೈತರು ಟ್ರ್ಯಾಕ್ಟರನ್ನು ಪಡೆಯುವಾಗ 500–600 ರೂಪಾಯಿ ಸ್ಟ್ಯಾಂಪು ಡ್ಯೂಟಿ ಕಟ್ಟಬೇಕಾಗುತ್ತದೆ. ಹೋದ ಸಲ ಈ ಬಗ್ಗೆ ರಿಯಾಯಿತಿಯನ್ನು ಕೊಟ್ಟಿದ್ದಾರೆಂದು ಹೇಳುತ್ತಾರೆ. ಅದನ್ನು ವಿಚಾರಮಾಡುತ್ತೀರಾ?

ಶ್ರೀ ಬಿ. ರಾಚಯ್ಯ.—ಪವರ್ ಟಿಲ್ಲರ್ಸ್, ಟ್ರ್ಯಾಕ್ಟರ್ಸ್ ಮತ್ತು ಬುಲ್‌ಡೋಜರ್ಸ್ ತೆಗೆದುಕೊಳ್ಳುವವರು ಸ್ವಲ್ಪಮಟ್ಟಿಗೆ ಧಡೂತಿಯಾಗಿದ್ದಾರೆ, ಅವರು ಡ್ಯೂಟಿ ಕೊಡಬಲ್ಲರು ಎಂಬ ಭಾವನೆ ಇರುವುದರಿಂದ ವಿನಾಯಿತಿ ಕೊಡುವುದಕ್ಕಾಗಿಲ್ಲ.

ಶ್ರೀ ಎಂ. ವೈ. ಘೋರ್ಪಡೆ (ಸಂಡೂರು).—ಅರಣ್ಯ ಪ್ರದೇಶದ ವಿಸ್ತೀರ್ಣ ಮತ್ತು ಪ್ರಮಾಣದ ಬಗ್ಗೆ ಮಾನ್ಯ ಮಂತ್ರಿಗಳು ತಮ್ಮ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಆದರೆ ಎಷ್ಟೋ ಕಡೆ 5–10 ವರ್ಷಗಳಿಂದ ರೈತರು ಸಾಗು ಮಾಡುತ್ತಿರುವ ಕೆಲವು ಭೂಮಿಯನ್ನು ಸರಿಯಾಗಿ

ಪರಿಶೀಲನೆ ಮಾಡದೆ, ಸೂಚನೆ ಕೊಡದೆ ಅರಣ್ಯ ಪ್ರದೇಶಕ್ಕೆ ಸೇರಿಸುತ್ತಿದ್ದಾರೆ ಇದು ಗಮನಕ್ಕೆ ಬಂದಿದೆಯೇ ? ಬಂದಿದ್ದರೆ ಅಂಥಾದ್ದನ್ನು ನಿಲ್ಲಿಸಲು ಸರಕಾರದ ಪತಿಯಿಂದ ಮಂತ್ರಿಗಳು ಭರವಸೆ ಕೊಡುವರೇ ?

ಶ್ರೀ ಬಿ. ರಾಚಯ್ಯ.—ಈಗ ಫಾರೆಸ್ಟ್ ಸೆಟ್ಲ್‌ಮೆಂಟ್ ಆಫೀಸರನ್ನು ನೇಮಕಮಾಡಿದೆ. ಅವರು ಇದನ್ನೆಲ್ಲಾ ಪರಿಶೀಲಿಸಿ ಸಾಗುವಳಿ ಮಾಡುತ್ತಿರುವರೆ ಸಾಗುವಳಿ ಚೀಟಿ ಕೊಡಲಾಗಿದೆಯೋ ಎಂದು ನೋಡಿ ಡೀನೋಟಿಫೈ ಮಾಡುತ್ತಿದ್ದಾರೆ, ದಕ್ಷಿಣ ಕನ್ನಡ ಮುಂತಾದ ಕಡೆ ಈ ಕೆಲಸ ಮಾಡುತ್ತಿದ್ದಾರೆ, ಅವರು ಇದನ್ನೆಲ್ಲಾ ನೋಡಿಕೊಳ್ಳುತ್ತಾರೆ.

ಶ್ರೀ ಎಸ್. ವಿ. ಅಗ್ನಿಹೋತ್ರಿ (ಧಾರವಾಡ).—ಡಿವಿಜನಲ್ ಕಮಿಷನರುಗಳ ಹುದ್ದೆಗಳನ್ನು ರದ್ದುಮಾಡುವ ವಿಚಾರ ಮತ್ತು ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಫೋಟೋ ಕಾಪಿಗಳನ್ನು ಕೊಡುವ ವಿಚಾರ ತಿಳಿಸುತ್ತೀರಾ ?

ಶ್ರೀ ಬಿ. ರಾಚಯ್ಯ.—ಡಿವಿಜನಲ್ ಕಮಿಷನರ ಹುದ್ದೆಯನ್ನು ರದ್ದುಮಾಡಬೇಕೆಂದು ಶಾಸನ ಸಭೆಯಲ್ಲಿ ಅನೇಕ ಸಲ ಪ್ರಸ್ತಾಪ ಮಾಡಿದ್ದಾರೆ. ಆದರೆ ಈ ಹುದ್ದೆಗಳನ್ನು ಕಾಯಿದೆ ಪ್ರಕಾರ ಕೆಲವರು ಅಧಿಕಾರಿಗಳಿಗೆ ಕೊಡಲಾಗಿದೆ. ಮೊದಲು ದೇಶದಲ್ಲಿ ಒಬ್ಬ ರವೆನ್ಯೂ ಕಮಿಷನರಿದ್ದರು. ಈಗ ಮೈಸೂರು ದೇಶ, 5 ಭಾಗಗಳನ್ನೊಳಗೊಂಡಿರುವುದರಿಂದ 4 ಮಂದಿ ಡಿವಿಜನ್ ಕಮಿಷನರುಗಳಿದ್ದಾರೆ, ಸೀನಿಯರ್ ಆಫೀಸರುಗಳನ್ನು ಆ ಹುದ್ದೆಗೆ ಹಾಕಿದ್ದೇವೆ. ಮದ್ರಾಸಿನಲ್ಲಿ ರೆವೆನ್ಯೂ ಬೋರ್ಡ್ ಎಂದು ಸರಕಾರದ ಮಟ್ಟದಲ್ಲ ಒಂದು ಪ್ಯಾರಲಲ್ ಸೆಕ್ರೆಟೇರಿಯೆಟ್ ಇದೆ. ಆಂಧ್ರದಲ್ಲಿ ನಮ್ಮಲ್ಲಿರುವಂತೆಯೇ ಡಿವಿಜನಲ್ ಕಮಿಷನರ ಹುದ್ದೆ ಇದೆ. ಕಮಿಷನರ ಆಫೀಸಿನ ಖರ್ಚು ಹೆಚ್ಚು, ಇದನ್ನು ರದ್ದುಮಾಡುವುದರಿಂದ ಉಳಿತಾಯವೆಷ್ಟು, ಈ ಕೆಲಸವನ್ನು ಡಿವಿಜನಲ್ ಕಮಿಷನರ ಹುದ್ದೆ ರದ್ದುಮಾಡಿದರೆ ಯಾರಿಗೆ ವಹಿಸಬೇಕು ಎಂಬ ವಿಷಯವನ್ನು ಪೇ ಕಮಿಷನ್‌ಗೆ ರೆಫರ್ ಮಾಡಿದ್ದೇವೆ. ರದ್ದುಮಾಡುವುದು ಅಥವಾ ಬಿಡುವ ವಿಚಾರ ಸರಕಾರದ ತೀವ್ರ ಗಮನದಲ್ಲಿದೆ. ಅಸಿಸ್ಟೆಂಟ್ ಕಮೀಷನರ ಹುದ್ದೆ ರದ್ದುಮಾಡುವುದಿಲ್ಲ, ಅದು ಹಾಗೆಯೇ ಉಳಿಯಬೇಕಾಗಿದೆ. ಸಬ್ ರಿಜಿಸ್ಟ್ರಾರ್ಸ್ ಆಫೀಸಿನಲ್ಲಿ ಕಾಪಿ ಕೊಡುವುದು ನಿಧಾನವಾಗುತ್ತಿದೆ, ಕೆಲವುವೇಳೆ 2 ವರ್ಷವಾಗುತ್ತದೆ ಎಂದು ಹೇಳಿದ್ದಾರೆ. ಅಷ್ಟು ನಿಧಾನವಾಗಲಾರದು, 10—15 ದಿವಸಗಳಾಗಬಹುದು. ಮದ್ರಾಸಿನಲ್ಲಿ ರಿಜಿಸ್ಟರಾದ ಡಾಕ್ಯುಮೆಂಟಿನ ಜೊತೆಯಲ್ಲಿ ಒಂದು ಕಾಪಿ ಕೊಟ್ಟರೆ ರಿಜಿಸ್ಟರು ಮಾಡುವಾಗ ಕಾಪಿ ಇಟ್ಟುಕೊಂಡು ಪತ್ರದ ಮೇಲೆ ಸ್ಟ್ಯಾಂಪ್ ಹಾಕುವ ಪದ್ಧತಿ ಇದೆ. ಅದೇ ರೀತಿ ಮಾಡಿದರೆ ಸುಲಭವಾಗಬಹುದು, ಬಹಳ ಕಡೆಗಳಲ್ಲಿ ಹಾಗೆ ಮಾಡಲಾಗುತ್ತಿದೆ ಎಂದು ಹೇಳುತ್ತಾರೆ. ಫೋಟೋ ಕಾಪಿ ರಿಜಿಸ್ಟರು ಮಾಡಿದಾಗ ಕೊಡಬೇಕೆಂದು ಹೇಳಿದ್ದಾರೆ. ಆದರೆ ಅದಕ್ಕೆ ಸಂಬಂಧಪಟ್ಟ ಯೂನಿಟ್ ಇಂಡಿಯಾದಲ್ಲಿ ಎಲ್ಲೂ ಸಿಕ್ಕುತ್ತಿಲ್ಲ. ಆದುದರಿಂದ ಕಾಪೀ ಕೊಡುವದಕ್ಕೆ, ಎಷ್ಟು ಬೇಗ ಪತ್ರ ವಾಪಸ್ಸು ಕೊಡುವುದಕ್ಕೆ ಸಾಧ್ಯವೋ ಅಷ್ಟು ಬೇಗ ಕೊಡುವುದಕ್ಕೆ ಏರ್ಪಾಡು ಮಾಡುತ್ತೇವೆ.

ಶ್ರೀ ಎ. ಆರ್. ಬದರೀನಾರಾಯಣ್ (ಶಿವಮೊಗ್ಗ).—ಮಳೆ ಬರುವುದು ಕಡಮೆಯಾಗಿರುವುದರಿಂದ ಅರಣ್ಯದ ರಕ್ಷಣೆಗೆ ಹೆಚ್ಚು ಸಿಬ್ಬಂದಿಯನ್ನು ಮತ್ತು ಮೊಬೈಲ್ ಸ್ಕ್ವಾಡನ್ನು ಹಾಕುತ್ತೀರಾ? ಹಾಗೆ ಮಾಡಿ ಸ್ಮಗ್ಲಿಂಗ್ ನಿಲ್ಲಿಸುವುದಕ್ಕೆ ಮತ್ತು ಅರಣ್ಯ ಪ್ರದೇಶ ರಕ್ಷಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಬಿ. ರಾಚಯ್ಯ.—ಅವಶ್ಯಕವಿರುವ ಕಡೆ ಮಾಡುತ್ತೇವೆ.

ಶ್ರೀ ಆರ್. ಮುನಿಸ್ವಾಮಯ್ಯ (ಆನೇಕಲ್).—ಇನಾಂ ಅಬಾಲಿಷನ್ ಆಕ್ಟು ಜಾರಿಗೆ ಬರುವುದಕ್ಕೆ ಮುಂಚೆ ಮತ್ತು ಬಂದಮೇಲೆ ಅನೇಕರು ಇನಾಂ ಭೂಮಿಯನ್ನು ಮಾರಿದ್ದಾರೆ, ಕೊಂಡಿದ್ದಾರೆ. ಸರ್ವೀಸ್ ಇನಾಂ ಭೂಮಿಯನ್ನು ಮಾರಿರುವುದು ನ್ಯಾಯಬದ್ಧವಲ್ಲ. ಅದಕ್ಕೇನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಬಿ. ರಾಚಯ್ಯ.—ಸರಕಾರದ ಗಮನಕ್ಕೆ ಅದು ಬಂದಿರುವ ಕಡೆ ವಾಪಸ್ಸು ತೆಗೆದುಕೊಳ್ಳುವುದಕ್ಕೆ ಪ್ರಯತ್ನಮಾಡಿದ್ದೇವೆ.

SRI M. RAMAPPA (Hosadurga).—Has it come to the notice of the Government that the Muzrai Department are increasing the rent unilaterally without making application for fixation of fair rent. Is it not opposed to the provisions of the Land Reforms Act ?

ಶ್ರೀ ಬಿ. ರಾಚಯ್ಯ.—ಮುಜರಾಯಿ ಇಲಾಖೆಯಲ್ಲಿ ಅಧಿಕಾರಿಗಳು ಇನ್‌ಡಿಸ್ಕ್ರಿಮಿನೇಟಾಗಿ ರೆಂಟನ್ನು ಹೆಚ್ಚು ಮಾಡುತ್ತಿದ್ದಾರೆಂದು ಹೇಳಿದರು. ಲ್ಯಾಂಡ್ ರೆವೆನ್ಯೂ ಆಕ್ಟಿನ ಸೆಕ್ಷನ್ 8ರ ಪ್ರಕಾರ ಮಾಡಬೇಕೇ ಹೊರತು ಅದಕ್ಕಿಂತ ಹೆಚ್ಚು ಮಾಡುವುದು ಸರಿಯಲ್ಲ ಮತ್ತು ಮಾಡುತ್ತಲೂ ಇಲ್ಲ.

Sri D. M. SIDDAIAH.—Sir, I move for closure.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ (ಚಿಕ್ಕಮಗಳೂರು).—ಮಲೆನಾಡಿನಲ್ಲಿ ದಟ್ಟವಾದ ಕಾಡಿನಲ್ಲಿರುವ ಬೆಲೆ ಬಾಳುವ ಮರಗಳನ್ನೆಲ್ಲಾ ವುಡ್ ಇಂಡಸ್ಟ್ರೀಸ್ ಅಂತ ಹೆಸರು ಹೇಳಿಕೊಂಡು ದೊಡ್ಡ ದೊಡ್ಡ ಕೈಗಾರಿಕೋದ್ಯಮಿಗಳಿಗೆ ಬಹಳ ಕಡಿಮೆ ಬೆಲೆಯಲ್ಲಿ ಕೊಟ್ಟು ನಾಶ ಮಾಡುತ್ತಾ ಇದ್ದೀರಿ. ಒಂದು ಕಡೆ ಸರ್ಕಾರದವರಿಗೆ ನಷ್ಟವಾಗುತ್ತಾ ಇದೆ, ಇನ್ನೊಂದು ಕಡೆ ದೊಡ್ಡ ಕೈಗಾರಿಕೋದ್ಯಮಗಳಿಗೆ ಯಾವ ರೀತಿ ಉತ್ತೇಜನ ಕೊಡುತ್ತಾ ಇದ್ದೀರಿ ಅದೇ ರೀತಿ ಸಣ್ಣ ಪುಟ್ಟ ಕೈಗಾರಿಕೋದ್ಯಮಿಗಳಿಗೆ ಬೆಂಬಲ ಕೊಡುತ್ತಿಲ್ಲ. ಇದರಿಂದ ಇಡೀ ಜಿಲ್ಲೆಯಲ್ಲಿರತಕ್ಕ ಮರ ಎಲ್ಲ ಹೋಗಿ ಸರ್ಕಾರಕ್ಕೆ ಬರತಕ್ಕ ಕೋಟ್ಯಾಂತರ ರೂಪಾಯಿ ನಷ್ಟವಾಗುತ್ತಿಲ್ಲವೆ? ಅದಕ್ಕೆ ಯಾರು ಜವಾಬ್ದಾರರು ಅಂತ ಉತ್ತರ ಕೊಡಬೇಕು. ಜೊತೆಗೆ ಮಳೆಯೂ ಕೂಡ ಮಲೆನಾಡಿನಲ್ಲಿ ಬರುತ್ತಾ ಇಲ್ಲ 3 ಇಂಚು ಕಡಮೆಯಾಗಿದೆ.

ಶ್ರೀ ಬಿ. ರಾಚಯ್ಯ.—ದೊಡ್ಡ ದೊಡ್ಡ ಫಾರೆಸ್ಟ್ ಬೇಸ್ಡ್ ಇಂಡಸ್ಟ್ರೀಸ್ ಏನಿವೆ ಅದರ ಜೊತೆಗೆ ಸಣ್ಣಪುಟ್ಟ ಇಂಡಸ್ಟ್ರೀಸ್‌ಗಳವರಿಗೂ ಕೂಡ ರಾ ಮೆಟೀರಿಯಲ್ಸ್ ಕೊಡಬೇಕಾದರೆ ಆಕ್ಷನ್ ಸೇಲ್ಸ್‌ನ 5 ವರ್ಷದ ಆವರೇಜ್ ತೆಗೆದುಕೊಂಡು ಮಾಡುತ್ತೇವೆ, ಅದರಲ್ಲಿ ಸ್ವಲ್ಪಮಟ್ಟಿನ ರಿಯಾಯಿತಿಯನ್ನು ಕೊಡುತ್ತಾ ಇದ್ದೇವೆ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಕೊಡುತ್ತಾ ಇಲ್ಲ.

ಶ್ರೀ ಬಿ. ರಾಚಯ್ಯ.—ಅಧ್ಯಕ್ಷರು ಅಪ್ಪಣೆ ಕೊಟ್ಟರೆ ಎಷ್ಟು ಕೈಗಾರಿಕೆಗಳವರಿಗೆ ಕೊಟ್ಟಿದ್ದೇವೆ, ಯಾವ ಯಾವ ದರದಲ್ಲಿ ಕೊಡುತ್ತಾ ಇದ್ದೇವೆ ಎಂಬುದನ್ನೆಲ್ಲಾ ಓದುತ್ತೇನೆ. ದರಖಾಸ್ತಿನಲ್ಲಿ ತೆಗೆದುಕೊಂಡ ಜಮೀನಿನಲ್ಲಿರುವ ಮರಗಳನ್ನು ಮಾರಾಟ ಮಾಡಿರುವುದರಿಂದ ಗಿಡಗಳು ಹಾಳಾಗುತ್ತಾ ಇವೆಯೇ ಹೊರತು ಬೇರೆ ರೀತಿಯಿಂದ ಅಲ್ಲ. ವರ್ಕಿಂಗ್ ಪ್ಲಾನ್ ಎಂದು ಇದೆ, ಅದರ ಪ್ರಕಾರ ಗಿಡಗಳನ್ನು ಹಾಕಲೇ ಬೇಕು ಮತ್ತು felling of trees ಆಗಲೇ ಬೇಕು. ಇದು ಹಿಂದಿನಿಂದಲೂ ನಡೆದುಕೊಂಡು ಬರುತ್ತಾ ಇದೆ. ಸಾಫ್ಟ್‌ವುಡ್ ಹರಾಜಾಗದೇ ಇಟ್ಟರೆ ಒಣಗಿ ಹೋಗುತ್ತದೆ. ಈ ರೀತಿ ಏಕೆ ನಷ್ಟ ಮಾಡಿದಿರಿ ಎಂದು ಅನ್ನುತ್ತೀರಿ. ಒಟ್ಟಿನಲ್ಲಿ ಹೇಳುವುದಾದರೆ ಇತರ ಪ್ರಾಂತ್ಯಗಳಲ್ಲಿ ಎಷ್ಟು ಸಾಫ್ಟ್‌ವುಡ್ ಕೊಟ್ಟಿದ್ದಾರೆ ಅದಕ್ಕಿಂತ ಜಾಸ್ತಿ ಬೆಲೆ ಇದ್ದರೆ ಸರ್ಕಾರ ಲಾಭ ಮಾಡಿದ್ದಾರೆ ಎಂದು ಬೆನ್ನು ತಟ್ಟಿ, ಕಡಿಮೆ ಇದ್ದರೆ ಆಕ್ಷೇಪಣೆ ಹೊತ್ತುಕೊಳ್ಳುವುದಕ್ಕೆ ತಯಾರಾಗಿದ್ದೇನೆ.

Sri J. P. SARWESH.—Sir, I have not participated in the budget or in the Governor's Address or on this Demand and therefore I may be given a chance to put a question.

Mr. CHAIRMAN.—It is not fair; the member will please resume his seat. I shall now put the Demand to the House. The question is:

> "That the respective sums not exceeding the amounts stated in Demands Nos. 2, 7, 8, 33, 38, 42 and 51 including the sums already voted on account be granted to the Government to defray the charges which will come in course of payment during the financial year ending 31st day of March, 1969."

The motion was adopted.

As directed by the Chair the motion for demands fo. grants adopted by the House are reproduced below.

DEMAND No. 2—LAND REVENUE.

9. Land Revenue.

"That a sum not exceeding Rs. 2,77,59,000 including the sums already voted on account be granted to the Government to defray the charges which will come in course of payment during the financial year for the period ending 31st day of March 1969, in respect of 'Land Revenue'."

DEMAND No. 7.—STAMPS.

14. Stamps.

"That a sum not exceeding Rs. 15,01,000 including the sums already voted on account be granted to the Government to defray the charges which will come in course of payment during the financial year for the period ending 31st day of March 1969, in respect of 'Stamps'."

DEMAND No. 8.—REGISTRATION.

15. Registration Fees.

"That a sum not exceeding Rs. 25,33,000 including the sums already voted on account be granted to the Government to defray the charges which will come in course of payment during the financial year for the period ending 31st day of March 1969, in respect of 'Registration Fees'."

DEMAND No. 33.—FAMINE

64. Famine Relief.

" That a sum not exceeding Rs. 43,71,000 including the sums already voted on account be granted to the Government to defray the charges which will come in course of payment during the financial year for the period ending 31st day of March 1969, in respect of "Famine Relief'."

DEMAND No. 38.—FOREST.

70. Forest.

"That a sum of not exceeding Rs. 6,69,30,000 including the sums already voted on account be granted to the Government to defray the charges which will come in course of payment during the financial year for the period ending 30th day of March 1969, in respect of 'Forest'."

DEMAND No. 42—COMPENSATION TO ZAMINDARS.

92. Payment of Compensation to Landholders, etc., on the Abolition of Zamindari System.

"That a sum not exceeding Rs. 30,36,000 including the sums already voted on account be granted to the Government to defray the charges which will come in course of payment during the financial year for the period ending 31st day of March 1969, in respect of payment of Compensation to Landholders, etc., on the Abolition of 'Zamindari System'."

DEMAND No. 51—CAPITAL OUTLAY ON FORESTS.

119. Capital Outlay on Forests.

"That a sum not exceeding Rs. 9,50,000 including the sums already voted on account be granted to the Government to defray the charges which will come in course of payment during the financial year for the period ending 31st day of March 1969, in respect of 'Capital Outlay on Forests'."

DEMAND No 18.—MEDICAL AND PUBLIC HEALTH,

29 Medical and 30 Public Health.

Sri K. PUTTASWAMY (Minister for Health and housing).—Sir, on the recommendation of the Governor, I beg to move:

"That respective sums not exceeding Rs. 12,28,76,000 including the sums already voted on account be granted to the Government to defray the charges which will come in course of payment during the financial year for the period ending 31 st day of March, 1969 in respect of Medical and Public Health".

Mr. CHAIRMAN.—Motion moved:

"That respective sums not exceeding Rs. 12,28,76,000 including the sums already voted on account be granted to the Government to defray the charges which will come in course of payment during the financial year for the period ending 31st day of March, 1969 in recepect or Medical ara Public Health".

I call upon Sri Puttadasa to speak. Before he begins I want to make a request to the Hon. Members and the Whips of the parties. As per the convention, the party Whips give the names indicating the time against each name. My request to the Hon'Members and Whips is that the Hon Members must finish within the time alloted to them. Let them not embarrass the Chair. It is the duty of the Whip to see that

the time allocated is adhered to by the members participating in the debate. The Hon. Member Sri Puttadasa will now commence his speech. He will finish within 30 minutes.

Sri J. P. SARWESH.—Then, 30 minutes should be given to all members.

Mr. CHAIRMAN.—If the Whip is not able to persuade the Members of his party, then the chair is at a loss to know what to do. I shall, however, do one thing. When there are two minutes for the expiry of the time of a member, I shall give a small ring and when those two minutes are over, I shall give a louder ring and the Hon. Member should resume his seat. The Hon. Memer Sri Puttadasa will now begin his speech.

† ಶ್ರೀ ಎಚ್. ಪುಟ್ಟದಾಸ (ಶಾತನೂರು).—ಮಾನ್ಯ ಸಭಾಧ್ಯಕ್ಷರೇ, ಸರ್ಕಾರದವರು ಪೂರ್ಣ ಎಚ್ಚರ ವಹಿಸದೆ ಹೇಗೆ ಎಲ್ಲರ ಟೀಕೆಗಳಿಗೂ ಒಳಗಾಗಿದ್ದಾರೋ ಹಾಗೆಯೇ ಜನತೆಯ ಸಹಾನುಭೂತಿಯನ್ನೂ ನಂಬಿಕೆಯನ್ನೂ ಕಳೆದುಕೊಂಡಿದ್ದಾರೆ. ಈ ದಿವಸ ಜನಾರೋಗ್ಯ ಇಲಾಖೆಗೆ ಸಂಬಂಧಪಟ್ಟ ಹಾಗೆ ಮಂತ್ರಿಗಳು ಈ ಸಭೆಯ ಮುಂದೆ ಮಂಡಿಸಿರತಕ್ಕ ಬೇಡಿಕೆಗಳನ್ನು ನಾನು ವಿರೋಧಿಸುತ್ತಾ ಕೆಲವು ಮಾತುಗಳನ್ನು ಹೇಳಬೇಕೆಂದಿದ್ದೇನೆ. ಈ ಬೇಡಿಕೆಗಳನ್ನು ವಿರೋಧಿಸುವುದಕ್ಕೆ ಮುನ್ನ ಈ ಸಭೆಗೆ ನಾನೊಂದು ಮನವಿಯನ್ನು ಮಾಡಿಕೊಳ್ಳಬೇಕಾಗಿದೆ. ಆರೋಗ್ಯ ಇಲಾಖೆಯ ಬಗ್ಗೆ ಮಾತನಾಡತಕ್ಕ ಕಾಲದಲ್ಲೇ ನನಗೆ ಸ್ವಲ್ಪ ಅನಾರೋಗ್ಯವುಂಟಾಗಿದೆ ಅದು ಕೇವಲ ನೆಗಡಿ ಮತ್ತು ಕೆಮ್ಮು. ನಮ್ಮ ಶಾಸಕರ ಭವನದಲ್ಲಿರುವ ಆಸ್ಪತ್ರೆಯಲ್ಲಿರತಕ್ಕ ಡಾಕ್ಟರು ನಮಗೆ ಕೇವಲ ಬೇಕಾದರು ಮತ್ತು ಒಳ್ಳೆಯವರು. ಆದರೆ ಆಸ್ಪತ್ರೆಯಲ್ಲಿ ಈ ಕಾಯಿಲೆಗೆ ಬೇಕಾದ ಬೆಂಡಿಸಲ್ಫಾ ಎಂಬ ಔಷಧಿ ಇಲ್ಲ. ಆದುದರಿಂದ ನನಗೆ ಈಗ ಕೆಮ್ಮು ಜಾಸ್ತಿಯಾಗಿದೆ. ನಾನು ಮಾತನಾಡುವಾಗ ಮಧ್ಯೆ ಏನಾದರೂ ಕೆಮ್ಮುವುದಕ್ಕೆ ನಾನು ಪ್ರಾರಂಭಮಾಡಿದರೆ ತಾವು ನನ್ನನ್ನು ಕ್ಷಮಿಸಬೇಕೆಂದು ಕೇಳಿಕೊಳ್ಳುತ್ತೇನೆ. ನಾನು ಈ ಬೇಡಿಕೆಗಳನ್ನು ಕೇವಲ ವಿರೋಧಿಸಬೇಕು ಅನ್ನುವ ದೃಷ್ಟಿಯಿಂದಲಾಗಲೀ ಅಥವಾ ಒಂದು ಪ್ರಚಾರಕ್ಕಾಗಲೀ ನಾನು ಇದನ್ನು ವಿರೋಧಿಸುತ್ತಿಲ್ಲ. ಈ ವೈದ್ಯ ಇಲಾಖೆಯಲ್ಲಿ ನನಗೆ ಕಂಡು ಬಂದ ಕೆಲವು ನ್ಯೂನತೆಗಳೇನಿವೆ ಅವುಗಳನ್ನೆಲ್ಲಾ ಈಗ ಹೇಳುವುದಕ್ಕೆ ಸಾಧ್ಯವಾಗದಿದ್ದರೂ ಆ ಪೈಕಿ ಕೆಲವನ್ನಾದರೂ ಇಲ್ಲಿ ತಿಳಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

4. 30 P. M.

ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಜನರ ಆರೋಗ್ಯ ಸೌಲಭ್ಯಗಳನ್ನು ನಾವು ವಿಸ್ತರಿಸುತ್ತಾ ಬಂದಿದ್ದೇವೆಂದು ಹೇಳಿಕೊಳ್ಳುತ್ತಿದ್ದೇವೆ. ನಮ್ಮ ಆಯಸ್ಸು ಒಂದು ನೂರು ವರ್ಷಗಳಿರಬೇಕೆಂದು ನಾವು ಹೇಳುತ್ತಲೇ ಬಂದಿದ್ದೇವೆ. ಈ ದಿಶೆಯಲ್ಲಿ ನಾವು ಮುಟ್ಟಿರತಕ್ಕ ಗುರಿಯೇನು–ಮುಟ್ಟಲಾಗದಿರುವ ಗುರಿಯೇನು ಎಂಬುದನ್ನು ಗಮನಿಸಿದರೆ ಈ ದಿವಸ ಜನರ ಸರಾಸರಿ ಆಯಸ್ಸು 50 ರಿಂದ 60 ವರ್ಷಗಳಿರಬಹುದು ಎಂದು ಹೇಳಬಹುದು. ಅಂದರೆ ನಾವಿನ್ನೂ ಶತಾಯುಗಳಾಗಲಿಲ್ಲ. 60ಕ್ಕೆ ಮೇಲ್ಪಟ್ಟು ಬಾಳಬೇಕಾದರೆ ಆರಾಮ ಮತ್ತು ಆಹಾರಗಳ ಸೌಲಭ್ಯ ಇದ್ದರೆ ನಾವಿನ್ನೂ ಹೆಚ್ಚು ಕಾಲ ಬದುಕಬಹುದು. ಅದಕ್ಕೆ ಅವಕಾಶವಿದೆ ಎಂದು ಕೆಲವರು ಹೇಳುತ್ತಾರೆ. ಅಂದರೆ ಅದು ನಮ್ಮ Standard of living ಮೇಲೆ ಹೋಗುತ್ತದೆ. ಮೊನ್ನೆ ನಮ್ಮ ಮುಖ್ಯ ಮಂತ್ರಿಗಳು ಇದೇ ಸಭೆಯಲ್ಲಿ ಮಾತನಾಡುತ್ತಾ ದೇಶಾಭಿವೃದ್ಧಿಯ ವಿಷಯವನ್ನು ಕುರಿತು ಅವರು ಭಾಷಣ ಮಾಡುತ್ತಿದ್ದಾಗ ಇತ್ತೀಚೆಗೆ ನಮ್ಮ ಜನರ ಆಯುಸ್ಸು ಹೆಚ್ಚಿದೆ, ಅವರು ಚೆನ್ನಾಗಿ ತಿನ್ನುತಿದ್ದಾರೆ, ಅವರಿಗೆ ಆಹಾರ ಚೆನ್ನಾಗಿ ಸಿಕ್ಕುತ್ತಿದೆ ಎಂಬುದಾಗಿ ಹೇಳಿದ್ದಾರೆ. ಆದರೆ ಒಬ್ಬ ಮನುಷ್ಯನಿಗೆ ತನ್ನ ಆರೋಗ್ಯ ಸ್ಥಿತಿಯನ್ನು ಚೆನ್ನಾಗಿ ಕಾಪಾಡಿಕೊಂಡು ಬರಬೇಕಾದರೆ ಸಾಮಾನ್ಯವಾಗಿ ಸರಾಸರಿ ಒಬ್ಬ ಗಂಡಸಿಗೆ 2600 ಕ್ಯಾಲರಿ ಆಹಾರ ಬೇಕು. ಒಬ್ಬ ಹೆಂಗಸಿಗೆ 2100 ಕ್ಯಾಲರಿ ಆಹಾರ ಬೇಕು. ಒಬ್ಬ ಗರ್ಭಿಣಿ ಹೆಂಗಸಿಗೆ 2400 ಕ್ಯಾಲರಿ ಆಹಾರ ಬೇಕು, ಒಬ್ಬ ಬಾಣಂತಿಗೆ 3000 ಕ್ಯಾಲರಿ ಆಹಾರ ಬೇಕು ಆದರೆ ನಮಗೆ ಈ ದಿವಸ ದೊರೆಯುತ್ತಿರುವ ಆಹಾರವೆಷ್ಟು ಅನ್ನುವುದು ಹಾಗಿರಲಿ, ಪ್ರತಿಯೊಬ್ಬ ಮನುಷ್ಯನಿಗೂ ಒಂದು ದಿನಕ್ಕೆ ಬೇಕಾಗುವ ಆಹಾರದ ಪ್ರಮಾಣವೇನು ಎಂದರೆ —ಅಕ್ಕಿ 8 ಔನ್ಸ್ ಆಟಾ 6 ಔನ್ಸ್ ಬೇಳೆ 4 ಔನ್ಸ್, ಎಣ್ಣೆ ಅಥವಾ ತುಪ್ಪ 3 ಔನ್ಸ್ ಮೀನು 4 ಔನ್ ತರಕಾರಿ ಮತ್ತು ಹಣ್ಣುಗಳು 6 ಔನ್ಸ್ ಮತ್ತು ಹಾಲು ಮತ್ತು ಮೊಸರು 12 ಔನ್ಸ್ ಬೇಕೆಂದು

(ಶ್ರೀ ಎಚ್. ಪುಟ್ಟದಾಸ)

ನಿರ್ಧಾರ ಮಾಡಿದ್ದಾರೆ. ಹೀಗೆ ಆಹಾರ ಬೇಕು ಅನ್ನುವಾಗ ಆ ಸಾಮಾನ್ಯ ಮನುಷ್ಯನ ಮಾತು ಹಾಗಿರಲಿ, ಈ ಶಾಸಕರಲ್ಲಿ ಎಷ್ಟು ಜನರು ಈ ಲೆಕ್ಕದ ಪ್ರಕಾರ ಆಹಾರವನ್ನು ತೆಗೆದುಕೊಳ್ಳುತ್ತಿದ್ದಾರೆ. ಆದುದರಿಂದ ನಮ್ಮ ಜನಸಾಮಾನ್ಯರ ಆಹಾರದ ಮಟ್ಟ ಏನು ಎಂಬುದನ್ನು ತಾವೇ ಊಹಿಸಬೇಕು.

ಮೊನ್ನೆ ತಾನೆ ಜಬ್ಬಲ್‌ಪುರದಲ್ಲಿ ಒಂದು ವೈದ್ಯ ಸಮ್ಮೇಳನ ನಡೆಯಿತು. ಆ ಸಮ್ಮೇಳನದಲ್ಲಿ ಕೆಲವು ಪ್ರಾಮುಖ್ಯವಾದ ವಿಷಯಗಳು ಹೊರಬಿದ್ದವೆ. ಅವುಗಳೇನು ಎಂದರೆ, ನಮ್ಮ ಆಸ್ಪತ್ರೆಗಳಿಗೆ ಬರತಕ್ಕ ರೋಗಿಗಳಲ್ಲಿ ನೂರಕ್ಕೆ 72 ರಿಂದ 76ರವರೆಗೆ ಅನೀಮಿಕ್ ರೋಗಿಗಳಾಗಿರುತ್ತಾರೆಂದೂ ಆ ರೋಗಕ್ಕೆ ಮಾಲ್‌ನ್ಯೂಟ್ರಿಷನ್ನೇ ಕಾರಣ ಎಂದೂ ಅವರು ಹೇಳಿದ್ದಾರೆ. ಇನ್ನು ನಮ್ಮ ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇಕಡ 13 ರಷ್ಟು ಜನ ಸದಾ ಕಾಲ ನರಳುತ್ತಿರುತ್ತಾರೆ. ಇನ್ನು ತೀವ್ರ ಕಾಯಿಲೆಯುಳ್ಳಿರತಕ್ಕವರು ಶೇಕಡ 3 ರಷ್ಟು ಇದ್ದಾರೆ. ಶೇಕಡ 7ರಷ್ಟು ನಿತ್ಯ ರೋಗಿಗಳಿದ್ದಾರೆ. ಆದರೆ ನಾನಾಗಲೇ ಹೇಳಿದಂತೆ ಶೇಕಡ 72ರಿಂದ 76ರವರೆಗಿನ ಜನರೇನು ಅನೀಮಿಕ್ ಕಾಯಿಲೆಯಿಂದ ನರಳುತ್ತಿದ್ದಾರೋ ಅಂಥವರಿಗೆ ಹುಟ್ಟತಕ್ಕ ಮಕ್ಕಳಿದ್ದಾರಲ್ಲಾ ಅವರು ಹುಟ್ಟಿದ್ದ ಬಳಿಕ ನಡೆದಾಡುವುದಕ್ಕೆ ಮೊದಲೇ ಅನೇಕರು ಸಾಯುತ್ತಿದ್ದಾರೆ. ಅಂಥಾ ಮಕ್ಕಳು ದೇಶಕ್ಕೆ ಒಂದು ಹೊರೆ ಮತ್ತು ಇತರೇ ಕಾಯಿಲೆಗಳಿಗೆ ಅವರು ಮೂಲ. ಆದರೆ ನಾವು ಇಲ್ಲಿಯವರೆಗೂ ಏನೇನು ಯೋಜನೆಗಳನ್ನು ಕೈಗೊಂಡಿದ್ದೇವೆಯೋ ಅವೆಲ್ಲಾ ತಲೆಕೆಳಗಾಗಿವೆ. ನಮ್ಮ ಯೋಜನೆಗಳು ಎಷ್ಟರ ಮಟ್ಟಿಗೆ ಫಲದಾಯಕವಾಗಿದೆ ಎಂಬುದಕ್ಕೆ ದೇಶದಲ್ಲಿರತಕ್ಕ ಜನರ ಅನಾರೋಗ್ಯವು ಒಂದು ಕನ್ನಡಿಯನ್ನು ಹಿಡಿದಂತಿದೆ. ಇದನ್ನು ನಮ್ಮ ಮಂತ್ರಿಗಳ ಮನಸ್ಸು ಒಪ್ಪಿದ್ದರೂ ಅವರ ಬಾಯಿ ಒಪ್ಪುತ್ತಿಲ್ಲ. ಆದುದರಿಂದ ಇನ್ನು ಆ ನಮ್ಮ ಪ್ಲಾನುಗಳಿಗೆ ಸರ್ಕಾರದವರು ಒಂದು ವಿರಾಮ ಕೊಡಬೇಕೆಂದು ಹೇಳುತ್ತೇನೆ.

ಇನ್ನು ನಮ್ಮ ದೇಶದಲ್ಲಿರತಕ್ಕ ಅನಾರೋಗ್ಯದಿಂದ ನರಳುತ್ತಿರುವ ಆ ನತದೃಷ್ಟ ಜನರ ಹಾಗೂ ಆ ಆರೋಗ್ಯ ಇಲಾಖೆಯ ಆಡಳಿತವರ್ಗ, ಆರೋಗ್ಯವಿದ್ಯಾಭ್ಯಾಸದಲ್ಲಿ ತೊಡಗಿರತಕ್ಕ ವಿದ್ಯಾರ್ಥಿ ವರ್ಗ, ಅವರಿಗೆ ಪಾಠ ಹೇಳತಕ್ಕ ಅಧ್ಯಾಪಕ ವರ್ಗ ಮತ್ತು ನಗರ ಪಟ್ಟಣಗಳಲ್ಲಿರತಕ್ಕ ವೈದ್ಯ ಶಾಲೆಗಳ ವಿಚಾರ—ಇವುಗಳ ಬಗ್ಗೆ ಒಂದೊಂದನ್ನೇ ತೆಗೆದುಕೊಂಡು ಕೆಲವು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಜನಾರೋಗ್ಯ ಇಲಾಖೆಯ ವಿಚಾರ : ಈ ಇಲಾಖೆಯ ಆಡಳಿತ ಜವಾಬ್ದಾರಿಯನ್ನು ಹೊತ್ತಿರತಕ್ಕ ಆಡಳಿತ ವರ್ಗದವರ ಮನೋಧರ್ಮ ಅವರ ದಕ್ಷತೆ ಮತ್ತು ಅವರ ವೃತ್ತಿ ಧರ್ಮ ಹಾಗೂ ಅವರ ವೃತ್ತಿ ಪಾವಿತ್ರತೆ ಇವುಗಳ ಜವಾಬ್ದಾರಿಯನ್ನು ಅವರು ಹೊರಲೇಬೇಕು. ಹೀಗೆ ಈ ಇಲಾಖೆಯ ಆಡಳಿತಗಳ ಸಂಪೂರ್ಣ ಜವಾಬ್ದಾರಿಯನ್ನು ಹೊರಲು ಇರತಕ್ಕ ಆ ಇಬ್ಬರು ಅಧಿಕಾರಿಗಳು ಒಬ್ಬ ರಾಹು, ಒಬ್ಬ ಕೇತು ಇದ್ದ ಹಾಗೆ ಇದ್ದಾರೆ. ಆದರೆ ಯಾರು ರಾಹು, ಯಾರು ಕೇತು ಅನ್ನುವುದನ್ನು ನಾನೀಗ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಒಟ್ಟಿನಲ್ಲಿ ಈ ಇಲಾಖೆಯ ಬಗ್ಗೆ ಎಷ್ಟು ಕಡಮೆ ಹೇಳಿದರೆ ಅಷ್ಟೇ ಸಾಕೆನಿಸುತ್ತದೆ. ಈ ಇಲಾಖೆಯ ಪಾವಿತ್ರ್ಯತೆಯನ್ನು ಆ ಇಬ್ಬರು ಅಧಿಕಾರಿಗಳು ಸರಿಯಾಗಿ ಕಾಪಾಡಿಕೊಂಡು ಬಂದಿದ್ದಾರೆಯೇ ಎಂದು ಕೇಳುತ್ತೇನೆ. ಈ ದಿವಸ ಗ್ರಾಮಾಂತರಗಳ ಆಸ್ಪತ್ರೆಗಳಲ್ಲಿ ಲೇಡಿ ಡಾಕ್ಟರುಗಳಿಲ್ಲ. ಲೇಡಿ ಡಾಕ್ಟರುಗಳು ಸಾಕಷ್ಟು ಸಂಖ್ಯೆಯಲ್ಲಿ ಮುಂದೆ ಬರುತ್ತಿಲ್ಲ ಅನ್ನುವುದೇ ಆ ಅಭಾವಕ್ಕೆ ಕಾರಣ ಎನ್ನುತ್ತಿದ್ದಾರೆ. ಈ ಲೇಡಿ ಡಾಕ್ಟರುಗಳಿಗೆ ಒಂದು ಸಂರಕ್ಷಣೆಯನ್ನು ಕೊಡತಕ್ಕದ್ದು ಆ ಇಲಾಖೆಯ ಆಡಳಿತ ಜವಾಬ್ದಾರಿಯನ್ನು ಹೊತ್ತಿರತಕ್ಕ ಮುಖ್ಯಾಧಿಕಾರಿಗೆ ಸೇರಿದ್ದು. ನಾನು ಮತ್ತು ಶ್ರೀ ಜಯಪ್ರಕಾಶ್ ನಾರಾಯಣ ಅವರು ಒಂದು ದಿವಸ ಕನಕಪುರಕ್ಕೆ ಹೋಗಿದ್ದೆವು. ಅಲ್ಲಿ ಕಾಲರ ಎರಾಡಿಕೇಷನ್ ಬಗ್ಗೆ 2 ಲಕ್ಷ ರೂಪಾಯಿಗಳು ಮಂಜೂರಾಗಿವೆ. ನಾವಿಬ್ಬರೂ ಅಲ್ಲಿಗೆ ಹೋಗಿದ್ದ ದಿವಸ ಅಲ್ಲಿಗೆ ಒಬ್ಬ ಲೇಡಿ ಡಾಕ್ಟರು ವರ್ಗವಾಗಿ ಬಂದಿದ್ದರು. ಅವರು ತಮ್ಮ ವರ್ಗದ ಆರ್ಡರನ್ನು ಕ್ಯಾನ್ಸಲ್ ಮಾಡಿಸಿಕೊಳ್ಳಲು ಬಂದಿದ್ದ ಹಾಗೆ ಗೊತ್ತಾಯಿತು. ನಾವು ಏನೋ ಆ ಲೇಡಿ ಡಾಕ್ಟರ್ ಬಂದಿದ್ದಾರೆ ಅವರ ವಿಚಾರವೇನೋ ಇರಬೇಕು ಕೇಳಿ ಎಂದುದಕ್ಕೆ ಅವರ ಗಂಡನ ವಿಚಾರ ನನಗೆ ಬಹಳ ಚೆನ್ನಾಗಿ ಗೊತ್ತಿದೆ. ಇನ್ನು ಇವಳಾರು, ಇವಳ ವಿಚಾರವೇನು ಎಂಬುದೆಲ್ಲಾ ನನಗೆ ಬಹಳ ಚೆನ್ನಾಗಿ ಗೊತ್ತಿದೆ ಎಂದು ಹೇಳುವುದಕ್ಕೆ ಪ್ರಾರಂಭ ಮಾಡಿದರು. ಆಕೆ ಆ ದಿವಸ ಅಲ್ಲಿಗೆ ಬಂದಿದ್ದುದು ತನ್ನ ವರ್ಗದ ಆರ್ಡರನ್ನು ಕ್ಯಾನ್ಸಲ್ ಮಾಡಿಕೊಡಿ ಎಂದು ಕೇಳುವುದಕ್ಕೆ. ಹಾಗಿರುವಾಗ ಆ ಇಲಾಖೆಯ ಮೊಖ್ತೇಸರರಿಗೆ ಅವಳ ಗಂಡನ ವಿಚಾರವಾಗಲೀ ಅಥವಾ ಆಕೆಯ ಸ್ವಂತ ವಿಚಾರವಾಗಲಿ ಆಕೆಯ ಮನೆಯ ವಿಚಾರವಾಗಲಿ ಇವರಿಗೇಕೆ ಬೇಕಾಗಿತ್ತು ? ಅವರನ್ನು ನಾವು ಅಲ್ಲಿ ಕೂಡಿಸಿರುವುದು ಇಲಾಖೆಯ ಮುಖ್ಯಾಧಿಕಾರಿಯಾಗಿ ಕೆಲಸಮಾಡುವುದಕ್ಕೇ ವಿನಾ ಅವರ ಮನೆಯ ಗಂಡನಾಗಿ ಕೆಲಸಮಾಡುವುದಕ್ಕಾಗಿ ಅಲ್ಲ. ಆದರೆ ಅವರ ಬಗ್ಗೆ ಹೇಳಬೇಕು ಅಂದರೆ ಬಹಳ ಇದೆ.

ಅವರಿಗೆ ತಮ್ಮ ಸ್ವಂತಕಾರಿದ್ದರೂ ಅವರು ಸರ್ಕಾರಿ ಕಾರನ್ನು ತಮ್ಮ ಖಾಸಗೀ ಕೆಲಸಗಳಿಗೆಲ್ಲಾ ಉಪಯೋಗ ಮಾಡುತ್ತಿದ್ದಾರೆ. ಆದರೆ ಈ ಅಧಿಕಾರಿಗಳನ್ನು ಇತ್ತ ಕಡೆ ಕುಳಿತಿರತಕ್ಕವರೇ ಟೀಕೆ ಮಾಡಲಿ ಅಥವಾ ಅತ್ತ ಕಡೆ ಕುಳಿತಿರತಕ್ಕವರೇ ಟೀಕೆ ಮಾಡಲಿ, ನಾವು ಟೀಕೆ ಮಾಡಿದ್ದನ್ನು ಅವರು ಅಲ್ಲಿ ಆಫೀಸುಗಳಲ್ಲಿ ಕುಳಿತು ನಮ್ಮನ್ನು ಟೀಕೆ ಮಾಡುತ್ತಿದ್ದಾರೆ. ಅದನ್ನು ನಾನು ಸ್ವತಃ ಕೇಳಿದ್ದೇನೆ ಈ ದಿವಸ ಜನರು ಬಹಳ ಎಚ್ಚೆತ್ತಿದ್ದಾರೆ. ಆದರೆ ಈ ಡಿಮಾಕ್ರಸಿ ಬಂದುದು ಬಡವರ ಉದ್ಧಾರಕ್ಕಾಗಿ ಅಲ್ಲದಿದ್ದರೂ ಅವರ ಚರ್ಮವನ್ನು ಸುಲಿಯುವುದಕ್ಕೆ. ಇದು ಇನ್ನು ಬಹಳ ಕಾಲ ಇರುವುದಿಲ್ಲ.

ಇನ್ನು ನಾನೀಗ ಶಿಕ್ಷಣ ವರ್ಗಕ್ಕೆ ಬರುತ್ತೇನೆ; ಇವರ ನೇಮಕದ ಬಗ್ಗೆ ಒಂದು ತನಿಖೆ ಯಾಗಲೇ ಬೇಕು. 1961ರಲ್ಲಿ ಇವರಿಗೆ ಎಷ್ಟು ಜನರು ಆ ಕೆಲಸಕ್ಕೆ ಬೇಕಾಗಿತ್ತೋ ಹಾಗೂ ಎಷ್ಟು ಜನರಿಗೆ ಆ ವಿದ್ಯಾ ಅರ್ಹತೆಗಳಿದ್ದವೋ ಅಂಥವರಿಗೆಲ್ಲಾ ಕೆಲಸಗಳನ್ನು ಕೊಟ್ಟರು. ಆಗ ಆ ಪ್ರೊಫೆಸರ್, ಅಸಿಸ್ಟೆಂಟ್ ಪ್ರೊಫೆಸರ್ ಮತ್ತು ಲೆಕ್ಚರರ್ಸ್‌ಗಳ ನೇಮಕದ ಬಗ್ಗೆ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್‌ಗಳಿನ್ನೂ ತಯಾರಾಗಿರಲಿಲ್ಲ. ಅನಂತರ 1965 ರಲ್ಲಿ ಕೆಲವರನ್ನು ಪಿ. ಎಸ್. ಸಿ. ಮೂಲಕ ತುಂಬಲಾಯಿತು. 1964 ರಲ್ಲೇ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್‌ಗಳನ್ನು ಮಾಡಲಾಯಿತು. ಆದರೆ ಅದನ್ನ ಜಾರಿಗೆ ಕೊಡಲಿಲ್ಲ. ತಮಗೆ ಬೇಕಾದವರಿಗೆ ವೈದ್ಯಬಾಬಿನಲ್ಲಿ ಹುದ್ದೆಗಳನ್ನು ಕೊಟ್ಟರು. ಕೆಲವರನ್ನು ತಾತ್ಕಾಲಿಕ ಎಂದು ಭರ್ತಿಮಾಡಿ ಕೊಂಡರು. ಆದರೆ ಮುಂದೆ ಆ ಹುದ್ದೆಗಳನ್ನು ರೆಗ್ಯುಲರೈಜ್ ಮಾಡುವುದಕ್ಕೆ ಕ್ರಮಗಳನ್ನು ಕೈಗೊಳ್ಳಲಿಲ್ಲ. ಆದರೆ ಅವರು ಯಾರು ಎಂಬುದರ ಬಗ್ಗೆ ನಾನೀಗ ಟೀಕೆ ಮಾಡುವುದಕ್ಕೆ ಇಷ್ಟ ಪಡುವುದಿಲ್ಲ. ಅವರಲ್ಲಿ ಕೇವಲ 9 ಜನರನ್ನು ಮಾತ್ರ ರೆಗ್ಯುಲರೈಜ್ ಮಾಡಿದರು. ಉಳಿದವರನ್ನು ಮಾಡಲಿಲ್ಲ. ಅನಂತರ ಸರ್ಕಾರ 1964 ರ ಮೇಲೂ ತಾತ್ಕಾಲಿಕ ಎಂದು ಹೇಳಿ ಜನರನ್ನು ಭರ್ತಿಮಾಡುವುದನ್ನು ನಿಲ್ಲಿಸಲಿಲ್ಲ.

ಚುನಾವಣೆಯ ನಂತರ ಸಂಬಂಧಪಟ್ಟ ಮಂತ್ರಿಗಳು ಸೋತರು. ರಾಜೀನಾಮೆ ಕೊಟ್ಟರು. ರಾಜೀನಾಮೆ ಕೊಟ್ಟು ಇವರು ಆಫೀಸ್ ಬಿಟ್ಟು ಹೋಗೋ ದಿವಸ ಅರ್ಧರಾತ್ರಿಯವರೆಗೆ 17 ಹುದ್ದೆಗಳನ್ನು ಭರ್ತಿಮಾಡಿದರು. ಆಗ ಸೆಕ್ರೆಟರಿ ಮಹಾಶಯರು ಅವರು ಅವೊಂದನ್ನೂ ಜಾರಿಗೆ ಕೊಡಲಿಲ್ಲ. ಇದರ ಬಗ್ಗೆ ಕೋರ್ಟಿನಲ್ಲಿ ರಿಟ್ ಇದೆ. ಕಂಟೆಂಪ್ಟ್ ಆಫ್ ಕೋರ್ಟ್ ಆಗುತ್ತದೆ. ನಾನು ಅದರ ಬಗ್ಗೆ ಈಗ ಹೆಚ್ಚು ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ. ಇನ್ನು ಹೊಸ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ 1967 ನೇ ಆಗಸ್ಟ್ ತಿಂಗಳಲ್ಲಿ ಬಂತು. ಇದರಲ್ಲಿಯೂ ತಾರತಮ್ಯವಿದೆ ಯೆಂಬುದನ್ನು ನಿರ್ದಿಷ್ಟವಾಗಿ ಹೇಳುತ್ತೇನೆ. ಇದರಲ್ಲಿ ಕೆಲವರಿಗೆ ಹೆಚ್ಚುಕಾಲ ಮೈತ್ರಿ ತೋರಿಸಿ ಕೊಟ್ಟಿದ್ದಾರೆ. ಈ ನ್ಯೂ ಕೇಡರ್ ಮತ್ತು ರೆಕ್ರೂಟ್‌ಮೆಂಟ್ ರೂಲ್ಸ್‌ನಲ್ಲಿ 61 ನೇ ಐಸಮಿಯಲ್ಲಿ ಯಾರು ಪಿ. ಎಸ್. ಸಿ. ಮುಖಾಂತರ ನೇಮಕವಾದರೋ ಅಂತವರಿಗೆ ಪ್ರಿಫರೆನ್ಸ್ ಮೊದಲೇ ಸಿಗಬೇಕೆಂದು ಇದರಲ್ಲಿ ಬಹಳ ಜಾಣತನದಿಂದ ಮಾಡಿದ್ದಾರೆ. ಮುಂದೆ ಯಾರ್ಯಾರು ಡೈರೆಕ್ಟರ್ಸ್ ಮತ್ತು ಜಾಯಿಂಟ್ ಡೈರೆಕ್ಟರ್ಸ್ ಮತ್ತು ಪ್ರೊಫೆಸರ್ಸ್ ಆಗಬೇಕೆಂಬ ಬಗ್ಗೆ ನಿರ್ದಿಷ್ಟವಾಗಿ ಕೆಲವು ಗುರಿಗಳನ್ನು ಇಟ್ಟುಕೊಂಡು ಇದನ್ನು ಮಾಡಿದ್ದಾರೆನ್ನುವ ಬಗ್ಗೆ ನಾನು ಏನೂ ಅನುಮಾನ ಇಟ್ಟುಕೊಂಡಿಲ್ಲ. ಜಾಯಿಂಟ್ ಡೈರೆಕ್ಟರ್ ಬಹಳವಾಗಿ ಆಸ್ಥೆ ವಹಿಸಿ ತಮ್ಮ ಕೈವಾಡವನ್ನು ನಡೆಸಿದ್ದಾರೆಂದು ನಾನು ನಿರ್ದಿಷ್ಟವಾಗಿ ಹೇಳುತ್ತೇನೆ. ಸ್ಪೆಷಲ್ ಸಿಸ್ಟಂನಲ್ಲಿ ಕ್ವಾಲಿಫಿಕೇಷನ್ ಬಗ್ಗೆ ಕೆಲವಕ್ಕೆ ಸ್ಕ್ರೀನಿಂಗ್ ಕಮಿಟಿಯಲ್ಲಿ ಇಂಟರ್‌ವ್ಯೂ ಆಗಿ ತೀರ್ಮಾನವಾಗಿದೆ. ಅದು ಮೆಡಿಸನ್ ಅಂಡ್ ಸರ್‌ಜರಿಯಲ್ಲಿ ನಡೆದಿದೆ. ಇನ್ನೂ ಫಲಿತಾಂಶ ಹೊರಬೀಳಬೇಕಾಗಿದೆ. ಎಲ್ಲಾ ಕಮಿಟಿಗಳಿಗೂ ಜಾಯಿಂಟ್ ಡೈರೆಕ್ಟರ್ ಆಫ್ ಮೆಡಿಕಲ್ ಎಜುಕೇಷನ್ ಅವರೇ ಸೆಕ್ರೆಟರಿಗಳಾಗಿದ್ದಾರೆ. ನಮ್ಮ ಮೈಸೂರಿನಲ್ಲಿರತಕ್ಕ ಸರ್‌ಜರಿಯಲ್ಲಾಗಲೀ ಮೆಡಿಸಿನ್‌ನಲ್ಲಾಗಲೀ ಇರತಕ್ಕ ಪ್ರೊಫೆಸರ್ಸ್ ಯಾವ ಮಟ್ಟದಲ್ಲಿಯೂ ಅವರಿಗಿಂತ ಕಡಿಮೆ ಇಲ್ಲ. ಇವರು ಬರೀ ಕೊ–ಎಗ್ಸಾಮಿನರ್ಸ್ ಆಗಿರುವವರು. ಇಂತಹವರನ್ನು ಸ್ಕ್ರೀನಿಂಗ್ ಕಮಿಟಿ ಯಲ್ಲಿರಿಸಿ ಅವರ ಮುಂದೆ ನಮ್ಮವರನ್ನು ಇಂಟರ್‌ವ್ಯೂ ಮಾಡಿಸುವುದು ಸರಿಯೇ? ಇನ್ನೂ ನಮ್ಮ ಆರೋಗ್ಯ ಇಲಾಖೆ ಯಾವ ಮಟ್ಟದಲ್ಲಿದೆ ಎಂಬುದನ್ನು ನೋಡಬೇಕು. ಜೆ. ಡಿ. ಎಂ. ಇ. ಸೆಕ್ರೆಟರಿ ಯಾಗಿರುವವರು ಎಂ. ಬಿ. ಬಿ. ಎಸ್. ಆದಮೇಲೆ ಎಂ. ಪಿ. ಎಚ್. ಗೋಸ್ಕರ ಅಮೇರಿಕಾ ಮತ್ತು ಇಂಗ್ಲೇಂಡ್‌ನಲ್ಲಿ ಆರು ತಿಂಗಳಕಾಲ ತಿರುಗಾಡುತ್ತಿದ್ದರೆ ಅದನ್ನು ಕೊಡುತ್ತಾರೆ. ಅಂತಹ ಪ್ರಮಾದವೇನೂ ಇಲ್ಲ. ಎಫ್. ಆರ್. ಸಿ. ಎಸ್. ಮತ್ತು ಎಂ. ಡಿ. ಮಾಡಿರುವವರು ಇರತಕ್ಕ ಸ್ಕ್ರೀನಿಂಗ್ ಕಮಿಟಿಗೆ ಏನಾದರೂ ಬೆಲೆ ಇದೆಯೇ? ಇ. ಸಿ. ಜಿ. ಅಂದರೇನು? ಅದೇನಾದರೂ ಅವರಿಗೆ ಗೊತ್ತಿದೆಯೆ? ನಮ್ಮ ಪ್ರೊಫೆಸರ್ಸ್‌ನ್ನು ನಿಮ್ಮ ಆ ಕಮಿಟಿಯಲ್ಲಿ ಇಟ್ಟಿದ್ದೀರಾ? ನಮ್ಮಲ್ಲಿ ಅಂತಹವರು ಇರಲಿಲ್ಲವೇ? ಮಾನ್ಯ ಡಾ: ಆದಿಕೇಶವಲು ಮತ್ತು ಡಾ: ವೆಂಕಟ ಸುಬ್ಬರಾಯರು ಇರಲಿಲ್ಲವೇ? ನಿಜವಾಗಿ ನಮ್ಮಲ್ಲಿ ಉನ್ನತ ಪ್ರೊಫೆಸರ್ಸ್ ಇದ್ದಾರೆಂದು ನಾನು ಹೇಳುತ್ತಿದ್ದೇನೆ.

ಉಪಾಧ್ಯಕ್ಷರು.—ಹೆಸರುಗಳನ್ನು ಇಲ್ಲಿ ಹೇಳಬಾರದು.

ಶ್ರೀ ಎಚ್. ಪುಟ್ಟದಾಸ.—ಇದರಲ್ಲಿ ಸೇಕಡ 50 ಭಾಗವನ್ನು ಮಾತ್ರ ಭರ್ತಿ ಮಾಡುತ್ತಾರೆ. ಹಾಲಿ ಕೆಲಸದಲ್ಲಿರತಕ್ಕ 50 ಜನರು ಸ್ಕ್ರೀನಿಂಗ್ ಕಮಿಟಿಯ ದೆಸೆಯಿಂದ ಜಾಗ ಕಳೆದುಕೊಂಡು ಅವರು ಪಿ.ಎಸ್.ಸಿ.ಯವರ ಮುಂದೆ ಹೋಗಬೇಕಾಗಿದೆ. ಪಿ.ಎಸ್.ಸಿ.ಗೆ ಅರ್ಜಿಹಾಕಿ ಎಂ.ಡಿ. ಎಂ.ಪಿ.ಎಚ್. ಪಾಸ್ ಮಾಡಿದ್ದರೂ ಈಗ ಅವರ ಸ್ಟೂಡೆಂಟ್ಸ್ ಜೊತೆಯಲ್ಲಿ ಅಸಿಸ್ಟೆಂಟ್ ಪ್ರೊಫೆಸರ್ಸ್ ಆಗಿರುವವರು ಹೋಗಿ ಕಾಂಪೀಟ್ ಮಾಡಬೇಕಾದರೆ ಮತ್ತು ಅವರು ಅಲ್ಲಿ ಹೋಗಿ ನಿಜವಾಗಿ ಭಾಗವಹಿಸುವುದಕ್ಕೆ ಸಾಧ್ಯವೆ ? ಅವರು ನೇಣು ಹಾಕಿಕೊಳ್ಳಬೇಕೋ ಅಥವಾ ವಿಷ ತೆಗೆದುಕೊಳ್ಳ ಬೇಕೋ ಅದರ ಬಗ್ಗೆ ಆರೋಗ್ಯ ಮಂತ್ರಿಗಳು ಉತ್ತರ ಕೊಡಬೇಕು. ಇನ್ನು ಸ್ಕ್ರೀನಿಂಗ್ ಕಮಿಟಿ ಯೊಳಗೆ ರಿಜರ್‌ವೇಷನ್ ಆಫ್ ಷೆಡ್ಯೂಲ್ಡ್ ಕ್ಯಾಸ್ಟ್ ಪ್ರಶ್ನೆಯೇ ಇಲ್ಲ. 137 ಜನರು ಇರತಕ್ಕ ಪ್ರೊಫೆಸರ್ಸ್ ಮತ್ತು ಅಸಿಸ್ಟೆಂಟ್ ಪ್ರೊಫೆಸರ್ಸ್‌ಗಳಲ್ಲಿ 7 ಜನರಾದರೂ ಎಂ.ಡಿ., ಎಂ.ಪಿ.ಎಚ್. ಆಗಿರ ತಕ್ಕ ಷೆಡ್ಯೂಲ್ಡ್ ಕ್ಯಾಸ್ಟಿನವರು ಇರಬೇಕು. ಈ ರೀತಿ ಇರುವುದಾದರೆ ಬಹಳ ಸಂತೋಷ. ಅವರಲ್ಲಿ 7 ಜನ ಅಧಿಕಾರಿಗಳು ಯಾರು ? ಉತ್ತರ ಇಂಡಿಯಾದಿಂದ ಬಂದಂಥ ಷೆಡ್ಯೂಲ್ಡ್ ಕ್ಯಾಸ್ಟ್ ಗ್ರಾಜು ಯೇಟ್ಸ್ ಆಗಿದ್ದಾರೆಯೇ ? ಸರ್ಕಾರ ಏತಕ್ಕೆ ಬೆನ್ನುತಟ್ಟಿಕೊಳ್ಳಬೇಕು ? ಈಗ ಅವರು ನಮಗೆ ರಿಜರ್ವ್ ಮಾಡುವುದು ಬೇಡ ಎನ್ನುವ ಮಟ್ಟಕ್ಕೆ ಬಂದಿದ್ದಾರೆ. ಏಕೆಂದರೆ ಅವರಿಗೆ ಅಲ್ಲಿ ಸ್ಥಳ ಸಿಗುವ ನಂಬಿಕೆ ಇಲ್ಲವೆಂದು ನಾನು ಹೇಳುತ್ತೇನೆ. ನಾವು ಈಗಿರತಕ್ಕ ಕಾನ್‌ಸ್ಟಿಟ್ಯೂಷನನ್ನು ಒಪ್ಪಿ ಕೊಂಡು 20 ವರ್ಷಗಳು ಆಗಿವೆ. 1963ನೇ ಇಸವಿಯಲ್ಲಿ ಆರ್ಮಿಯಿಂದ ಒಬ್ಬರು ಕಳುಹಿಸಿರುವ ಕಾಗದ. ಅದು 21ನೇ ತಾರೀಖು ಆಗಸ್ಟ್‌ನಲ್ಲಿ ಬಂದಿದೆ. ಅದರಲ್ಲಿ ಹೀಗೆ ಹೇಳಿದೆ.

50 per cent in permanent vacancies in Class I and II posts, Medical and Engineering, which are to be filled up by deserving candidates who have served during the present emergency.

63ನೇ ಇಸವಿಯಲ್ಲಿ ನೀವೇ ಮಾಡಿರತಕ್ಕ ಈ ಕಾನೂನಿನಲ್ಲಿ ಆರ್ಮಿಗೆ ಹೋಗಿ ಬಂದವರಿಗೆ ಪ್ರಿಫರೆನ್ಸ್ ಬೇಡವೇ ? ದೊಡ್ಡದಾದಂಥ ಕಷ್ಟನಷ್ಟಗಳನ್ನು ಅನುಭವಿಸಿರತಕ್ಕ ಜನಗಳು, ಅವರಿಗೆ ಪಿ.ಎಸ್.ಸಿ. ಯಲ್ಲಿಯೂ ರಿಜರ್ವೇಷನ್ ಪ್ರಶ್ನೆ ಉದ್ಭವಿಸಿಲ್ಲ.

ಇನ್ನು 1961ನೇ ಇಸವಿಯಿಂದ 1967ನೇ ಇಸವಿಯವರೆಗೆ ಜನರಲ್ ಎಲೆಕ್ಷನ್ ಆದಮೇಲೆ ಕಳೆದ ಮಂತ್ರಿಗಳು ರಾಜೀನಾಮೆ ಕೊಟ್ಟಂದಿನಿಂದ ನೇಮಕಗಳಾಗಿರುವ ಬಗ್ಗೆ ಒಂದು ನ್ಯಾಯಾಂಗ ವಿಚಾರಣೆ ಖಂಡಿತವಾಗಿ ಆಗಬೇಕೆಂದು ನಾನು ಒತ್ತಾಯಮಾಡುತ್ತೇನೆ.

ಇನ್ನು ವಿದ್ಯಾರ್ಥಿಗಳ ವಿಷಯ. ಈ ರಾಜ್ಯದಲ್ಲಿ ಕಾಲೇಜಿಗೆ 200-300 ವಿದ್ಯಾರ್ಥಿಗಳನ್ನು ಪ್ರತಿವರ್ಷವೂ ತೆಗೆದುಕೊಳ್ಳುತ್ತಿದ್ದೀರಿ. ಈಗಾಗಲೇ ಸಾವಿರಾರು ಜನ ವಿದ್ಯಾರ್ಥಿಗಳು ಇದ್ದಾರೆ. ಪ್ರೀಕ್ಲಿನಿಕಲ್ ಅರೇಂಜ್‌ಮೆಂಟ್ಸ್ ಏನು ? ಕ್ಲಿನಿಕಲ್ ಅರೇಂಜ್‌ಮೆಂಟ್ಸ್ ಏನು ? ಬೆಡ್ ಸ್ಟ್ರೆಂಗ್ತ್ ಎಷ್ಟಿದೆ ? ಆಲ್ ಇಂಡಿಯಾ ಮೆಡಿಕಲ್ ಕೌನ್ಸಿಲ್‌ನವರು ಒಬ್ಬ ವಿದ್ಯಾರ್ಥಿಗೆ ಇಷ್ಟೇ ಜನ ರೋಗಿಗಳು ಇರಬೇಕೆಂದು ನಿಗದಿಮಾಡಿದೆ ಎಂಬುದಾಗಿ ಹೇಳಿದ್ದಾರೆ. ಒಬ್ಬ ರೋಗಿಗೆ 50 ಜನ ವಿದ್ಯಾರ್ಥಿಗಳು ಪರೀಕ್ಷೆಮಾಡುವುದು, ಹ್ಯಾಮರ್ಸ್ ತೆಗೆದುಕೊಂಡು ಪರೀಕ್ಷಿಸುವುದು. ಇದರಿಂದ ರೋಗಿಗಳನ್ನು ಕೊಲೆಮಾಡುವ ಸ್ಥಿತಿಗೆ ತಂದಿಟ್ಟಿದ್ದಾರೆ. ಇನ್ನು ಟೀಚಿಂಗ್ ಇನ್‌ಸ್ಟಿಟ್ಯೂಷನ್ಸ್ ವಿಷಯ ಹೇಳುವು ದಾದರೆ, ಈಗಾಗಲೇ ಎಷ್ಟೋ ಜನ ರೋಗಿಗಳು ಅಲ್ಲಿರತಕ್ಕ ಡಾಕ್ಟರುಗಳು ನಮ್ಮನ್ನು ಸಾಯಿಸು ತ್ತಿದ್ದಾರೆಂದು ಹೇಳುತ್ತಿದ್ದಾರೆ. ಇದೇನು ಕುರಿ ದೊಡ್ಡಿಯೇ ? ಒಬ್ಬ ವಿದ್ಯಾರ್ಥಿಗೆ ಆರೇಳು ಬೆಡ್ಸ್ ಇರಬೇಕು. ಅಂದಮೇಲೆ ಒಬ್ಬ ರೋಗಿಯನ್ನು 50 ವಿದ್ಯಾರ್ಥಿಗಳು ನೋಡಿದರೆ ನಿಜವಾಗಿ ಆ ರೋಗಿ ಪುನಃ ಮನೆಗೆ ಹೋಗುತ್ತಾನೆಂದು ಯಾವ ನಂಬಿಕೆ ? ಇನ್ನು ಅಲ್ಲಿ ಏನಾದರೂ ಕಲಿಯು ವುದು ಇದೆಯೇ ಅಂದರೆ, ಒಂದು ಮೈಕ್ರೋಸ್ಕೋಪ್‌ಕೂಡ ಇಲ್ಲ. ಸುಮಾರು ಎಷ್ಟೋ ವರುಷಗಳಿಂದ ಅದು ಸಿಗುತ್ತಾ ಇಲ್ಲವೆಂದು ಹೇಳುತ್ತಾರೆ. ಆದರೆ ವಿದ್ಯಾರ್ಥಿಗಳ ಬಗ್ಗೆ ನಾನು ಮಾತನಾಡು ವುದಾದರೆ ಅವರಿಗೆ ಸರಿಯಾದ ಪಾಠಪ್ರವಚನಗಳಿಲ್ಲ. ಅದಕ್ಕೆ ಸರಿಯಾದ ಅನುಕೂಲತೆಗಳೂ ಇಲ್ಲ. ಇನ್ನು ಪರೀಕ್ಷೆಗಳನ್ನು ನಡೆಸುವುದರಲ್ಲಿ ಬಹಳವಾಗಿ ಪಾಲಿಟಿಕ್ಸ್ ಇದೆ. ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ಕೆಲವು ತಿಂಗಳುಗಳ ಹಿಂದೆ ರಿಜಲ್ಟ್ಸ್ ಅನೌನ್ಸ್ ಆಗಿದೆ. ಒಂದೇ ಒಂದು ಸಾರಿ ಎಲ್ಲ ರಿಜಲ್ಟ್ಸ್ ಬಂದಿಲ್ಲ. ಕೆಲವು ಮಾಡಿಫಿಕೇಷನ್ಸ್ ಮಾಡಿ ಮೂರು ಸಾರಿ ಬಂತು. ಅದರಲ್ಲಿ ಅಡಿಷನ್ಸ್, ರಿಜಕ್ಷನ್ಸ್, ಮತ್ತೆ ಒಮಿಷನ್ಸ್ ಹೀಗೆ ಬಂತು. ಕಾರಣ ಇಲ್ಲಿ ಹೇಳಬೇಕಾಗಿದೆ, ಒಂದು ಪ್ರಶ್ನೆಪತ್ರಿಕೆ ಇಲ್ಲಿ ಇದೆ, ಅದರಲ್ಲಿ ಪ್ರಶ್ನೆಗಳನ್ನು ಯಾವ ರೀತಿಯಲ್ಲಿ ಕೊಟ್ಟಿದ್ದಾರೆ ಎಂಬುದನ್ನು ಹೇಳುತ್ತೇನೆ. ಅದು ಸೆಕೆಂಡ್ ಎಗ್ಸಾಮಿನೇಷನ್-ಎಂ.ಬಿ.ಬಿ.ಎಸ್. ಡಿಗ್ರಿಯವರಿಗೆ ಪಾರ್ಟ್ 1. ಆ ಪ್ರಶ್ನೆಪತ್ರಿಕೆಯಲ್ಲಿ ಒಟ್ಟು 8 ತಪ್ಪುಗಳಿವೆ. ಅದರಲ್ಲಿ ಹೆಡಿಂಗ್‌ನಲ್ಲಿಯೇ ಅಂಡ್ ಎನ್ನುವುದಕ್ಕೆ ಬದಲಾಗಿ ಅಂಟ್

ಎಂಬುದಾಗಿ ಇದೆ. ಜನವರಿ ಅನ್ನುವುದಕ್ಕೆ ಬದಲಾಗಿ ಜಾನಿ ಎಂದು ಇದೆ. ಎರಡನೆಯ ಪ್ರಶ್ನೆಯಲ್ಲಿ ಪ್ರಾಪರ್ಟೀಸ್ ಎನ್ನುವುದಕ್ಕೆ ಬದಲಾಗಿ ಪ್ರೊ-ಪರ್ಟೀಸ್ ಎಂಬುದಾಗಿ ಹಾಕಿದೆ. ಹೀಗೆ ಮೆಡಿಸನ್ಸ್‌ಗೆ ಹೊಸ ಟಿಮ್ಸ್ ಇತ್ತೀಚೆಗೆ ಬರುತ್ತಾ ಇವೆ. ಎರಡನೆಯ ಪ್ರಶ್ನೆಯಲ್ಲಿಯೇ ಇನ್ನೂ ಒಂದು ಕಡೆ ಅಕ್ಸಿಬಿಟೆಡ್ ಎಂಬುದಾಗಿ 'ಎಗ್ಸಿಬಿಟೆಡ್'ಗೆ ಬದಲಾಗಿ ಹಾಕಿದ್ದಾರೆ. ಹಾಗೆಯೇ 5ನೇ ಪ್ರಶ್ನೆಯಲ್ಲಿ 'ವಾಟ್'' ಬದಲಾಗಿ 'ಮಾಟ್' ಎಂಬುದಾಗಿ ಬಿದ್ದಿದೆ. ಇದೆಲ್ಲವನ್ನೂ ಸರ್ಕಾರದವರು ಚೆನ್ನಾಗಿ ವಿಚಾರಮಾಡಬೇಕು.

ಆಮೇಲೆ ''ವಾಟ್'' ಅನ್ನುವ ಬದಲು ''ಮಾಟ್'' ಎಂದಿದೆ. ''ವೈವಾಕ್ಸ್'' ಬದಲು ''ಟೈವಾಕ್ಸ್'' ಎಂದಿದೆ. ಉತ್ತರ ಬರೆಯುವ ವಿದ್ಯಾರ್ಥಿಗಳು ಇದನ್ನು ಏನೆಂದು ಅರ್ಥಮಾಡಿಕೊಳ್ಳಬೇಕು.

ಇನ್ನೊಂದು ವಿಷಯ. ಈಗ ಪಿ.ಜಿ. ಕೋರ್ಸ್ ಎಂದು ಮೈಸೂರಿನಲ್ಲಿ ಸ್ಟಾರ್ಟ್ ಮಾಡಿದ್ದಾರೆ. ಬೌರಿಂಗ್ ಇನ್‌ಸ್ಟಿಟ್ಯೂಟ್‌ನಲ್ಲಿ, ಮಂಡ್ಯ ಜನರಲ್ ಆಸ್ಪತ್ರೆಯಲ್ಲಿ ಈಗ ಕಳೆದ ಎರಡು ವರ್ಷಗಳಿಂದ ಪೋಸ್ಟ್ ಗ್ರ್ಯಾಜ್ಯುಯೇಟ್ ಕೋರ್ಸ್ ಮತ್ತು ರಿಸರ್ಚ್ ಇನ್‌ಸ್ಟಿಟ್ಯೂಟ್‌ಗಳನ್ನು ಓಪನ್ ಮಾಡಿ, ಪಿ. ಜಿ. ಪ್ರೊಫೆಸರನ್ನು ನೇಮಕಮಾಡಿಕೊಂಡು ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಿ ರಿಸರ್ಚ್ ಮಾಡಿರುವುದು ಏನು ? ಯೂನಿವರ್ಸಿಟಿ ಗ್ರಾಂಟ್ಸ್ ಕಮಿಷನ್ನಿನವರ ಸಿಫಾರಸಿನಂತೆ ಬೌರಿಂಗ್ ಆಸ್ಪತ್ರೆಯಲ್ಲಿ ಪೋಸ್ಟ್ ಗ್ರ್ಯಾಜುಯೇಟ್ ಕೋರ್ಸಿಗೆ ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಿ ಏನು ರಿಸರ್ಚ್ ವರ್ಕ್ ಮಾಡಿದ್ದಾರೆ ? ಇದುವರೆಗೆ ಅಲ್ಲಿ ಒಂದು ಕಪ್ಪೆಯನ್ನಾದರೂ ಕೊಲೆ ಮಾಡಿ ಪ್ರಯೋಗ ಮಾಡಿದ್ದಾರೆಯೇ? ಅಲ್ಲಿ ರಿಸರ್ಚ್‌ಗೋಸ್ಕರ ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಿರುವುದಕ್ಕೆ ಯಾರು ಜವಾಬ್ದಾರರು ? ಅಲ್ಲಿ ಪಿ. ಜಿ. ಪ್ರೊಫೆಸರನ್ನು ನೇಮಕಮಾಡಿದ್ದಾರೆ. ಆ ರಿಸರ್ಚ್ ಶಾಲೆಯಲ್ಲಿ ಒಂದು ಮೈಕ್ರೊಸ್ಕೋಪ್ ಇಲ್ಲ, ಇತರ ಉಪಕರಣಗಳಿಲ್ಲ. ಯಾರ ಹಿತಕ್ಕೋಸ್ಕರ ಅಲ್ಲಿ ರಿಸರ್ಚ್ ಇನ್‌ಸ್ಟಿಟ್ಯೂಟ್ ಮಾಡಿದ್ದೀರಿ ? ಬೌರಿಂಗ್ ಇನ್‌ಸ್ಟಿಟ್ಯೂಟಿನಲ್ಲಿ ಪೆಥಾಲಜಿ ಡಿಪಾರ್ಟ್‌ಮೆಂಟ್ ಇಲ್ಲ. ಅಲ್ಲಿ ಅಗತ್ಯವಾಗಿ ಏನೇನು ಇರಬೇಕೋ ಅದಿಲ್ಲ. ಬೌರಿಂಗ್ ಆಸ್ಪತ್ರೆಯಲ್ಲಿ ಲಕ್ಷಾಂತರ ರೂಪಾಯಿಗಳು ಖರ್ಚಾಗಿರುವ ಬಗ್ಗೆ ತನಿಖೆ ಮಾಡಬೇಕೆಂದು ನಾನು ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಇನ್ನು ಈ ಮೆಡಿಕಲ್ ಇಲಾಖೆಯಲ್ಲಿ 100 ಜನ ಡಾಕ್ಟರುಗಳ ಕೆಲಸಗಳು ಮಾತ್ರ ಖಾಲಿ ಇವೆ. ಈಗಿರತಕ್ಕ ಎಲ್ಲಾ ಮೆಡಿಕಲ್ ಕಾಲೇಜುಗಳಿಂದಲೂ ಪ್ರತಿವರ್ಷವೂ ಸಾವಿರಾರು ಜನ ಮೆಡಿಕಲ್ ಗ್ರ್ಯಾಜ್ಯುಯೇಟ್ಸ್ ಹೊರಗಡೆ ಬರುತ್ತಾರೆ. ಅವರುಗಳ ಗತಿಯೇನು ? ಒಬ್ಬ ವಿದ್ಯಾರ್ಥಿಗೆ 25 ಸಾವಿರ ರೂಪಾಯಿಗಳಿಗೆ ಕಡಿಮೆ ಇಲ್ಲದೆ ಅವರ ತಂದೆ ತಾಯಿಗಳು ಖರ್ಚು ಮಾಡಿ, ಸರ್ಕಾರದವರ ಕಡೆಯಿಂದಲೂ ಹಣವನ್ನು ಖರ್ಚು ಮಾಡಿ ಅವನಿಗೆ ಉದ್ಯೋಗ ಸಿಕ್ಕದೆ ನಿರುದ್ಯೋಗಿ ಆದರೆ ಮೆಡಿಕಲ್ ಕಾಲೇಜಿನಲ್ಲಿ ಯಾವ ಹಿತಕ್ಕೋಸ್ಕರ 200-300 ಜನ ವಿದ್ಯಾರ್ಥಿಗಳನ್ನು ಅಡ್ಮಿಟ್ ಮಾಡಿಕೊಳ್ಳುವುದಕ್ಕೆ ಅವಕಾಶವನ್ನು ಕೊಡುತ್ತಾರೆ ? ಅವರು ವಿದ್ಯಾಭ್ಯಾಸವನ್ನು ಮುಗಿಸಿಕೊಂಡು ಹೊರಗಡೆ ಬಂದ ಮೇಲೆ ಅವರಿಗೆ ಕೆಲಸ ಸಿಕ್ಕದೇ ಇದ್ದರೆ ಅವರು ಎಲ್ಲಿಗೆ ಹೋಗಬೇಕು ? ಇವರುಗಳ ಕೆಲಸದ ಗತಿ ಏನು ? ಒಬ್ಬೊಬ್ಬ ವಿದ್ಯಾರ್ಥಿಗೆ 50 ಸಾವಿರ ರೂಪಾಯಿಗಳನ್ನು ಖರ್ಚು ಮಾಡುವುದಕ್ಕಾಗಿ ಏತಕ್ಕೆ ಮೆಡಿಕಲ್ ಕಾಲೇಜಿನಲ್ಲಿ 200-300 ಜನ ವಿದ್ಯಾರ್ಥಿಗಳನ್ನು ಅಡ್ಮಿಷನ್ ಮಾಡಿಕೊಳ್ಳುತ್ತೀರಿ ? ಇದಕ್ಕೆ ಮಾನ್ಯ ಸಚಿವರು ಉತ್ತರ ಕೊಡಬೇಕು.

ಇನ್ನು ಡಿಸ್ಟ್ರಿಕ್ಟ್ ಆಸ್ಪತ್ರೆಗಳ ವಿಷಯವನ್ನು ತೆಗೆದುಕೊಂಡರೆ ಅವುಗಳ ಪರಿಸ್ಥಿತಿಯನ್ನು ಊಹಿಸುವುದಕ್ಕೆ ಸಾಧ್ಯವಿಲ್ಲ. ಈಗ ನಾನು ಕೇವಲ ಬೆಂಗಳೂರು ಮತ್ತು ಮೈಸೂರು ಆಸ್ಪತ್ರೆಗಳ ಬಗ್ಗೆ ಮಾತ್ರ ನಾನು ಮಾತನಾಡುತ್ತೇನೆ. ಇದರಲ್ಲಿ ಎಂ.ಎಲ್.ಎ.ಗಳು ಎಂ.ಎಲ್.ಸಿ.ಗಳು ಮುಂತಾದ ಗೌರವಸ್ಥರ ದೂರು ಹಾಗಿರಲಿ. ಒಂದು ಉದಾಹರಣೆಯಿಂದಲೇ ಈ ಆಸ್ಪತ್ರೆಗಳ ಸ್ಥಿತಿಯನ್ನು ಅರಿಯಬಹುದು. ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಒಂದು ಉನ್ನತ ಸ್ಥಾನದಲ್ಲಿದ್ದ ಒಬ್ಬ ಡಾಕ್ಟರ ತಂದೆಗೆ ಖಾಯಿಲೆ ಬಂತು. ಆಗ ಅವರನ್ನು ವಿಕ್ಟೋರಿಯಾ ಆಸ್ಪತ್ರೆಗೆ ಇತ್ತೀಚೆಗೆ ಚಿಕಿತ್ಸೆಗಾಗಿ ಸೇರಿಸಲಾಗಿತ್ತು. ಇನ್ನೊಬ್ಬ ಡಾಕ್ಟರು ಅವರನ್ನು ಪರೀಕ್ಷೆ ಮಾಡಿದರು. ಅವರಿಗೆ Non-specific Lymphadenites ಖಾಯಿಲೆ ಇದೆ ಎಂದು ಒಂದು ತೀರ್ಮಾನವನ್ನು ಕೊಟ್ಟರು. ಆ ಡಾಕ್ಟರಿಗೆ ಅನುಮಾನ ಬಂದು ನಮ್ಮ ತಂದೆಗೆ ಇಂತಹ ರೋಗ ಇರಲಿಕ್ಕೆ ಸಾಧ್ಯವಿಲ್ಲ ಎಂದು ಅಭಿಪ್ರಾಯ ಪಟ್ಟರು. ವೈದ್ಯ ಪರೀಕ್ಷೆಯ ವಿವರಗಳನ್ನು ಕೇಳಿದರು. ಆದರೆ ಅವರು ಆ ವಿವರಗಳನ್ನು ಕೊಡಲಿಲ್ಲ. ಕೊನೆಗೆ ಆ ಡಾಕ್ಟರು ಅವುಗಳನ್ನು ಕದ್ದು ವೆಲ್ಲೂರಿಗೆ ಕಳುಹಿಸಿದರು. ಅಲ್ಲಿಯ ಡಾಕ್ಟರು ಈ ವಿವರಗಳನ್ನು ಪರೀಕ್ಷೆ ಮಾಡಿ ಆ ಖಾಯಿಲೆ ಇಲ್ಲ. Lymphosarcoma ಎಂದು ಅಲ್ಲಿಂದ ತಂತಿ ಮೂಲಕ ರಿಜಲ್ಟ್ ಕಳುಹಿಸಿದರು. ಅದು ಬರುವುದು ಸ್ವಲ್ಪ ತಡವಾಗಿತ್ತು. ತಪ್ಪು ಚಿಕಿತ್ಸೆ ಆರಂಭವಾಗಿತ್ತು. ಎರಡು ದಿನಗಳಲ್ಲಿ ರೋಗಿಯು ಸತ್ತರು. ಆಸ್ಪತ್ರೆಯಲ್ಲಿ ಕೆಲಸ ಮಾಡುವ ಡಾಕ್ಟರ ತಂದೆಗೇ ಹೀಗಾದರೆ ಈ ಆಸ್ಪತ್ರೆಯಲ್ಲಿ ಸಾಮಾನ್ಯ ಮನುಷ್ಯರ ಪಾಡೇನು ? ಆಸ್ಪತ್ರೆಗಳಲ್ಲಿ

(ಶ್ರೀ ಎಚ್. ಪುಟ್ಟದಾಸ)

ಏತಕ್ಕೆ ಈ ತರಹ ಇದೆ. ಪ್ರತಿಯೊಂದು ಖಾಯಿಲೆಯನ್ನೂ ಇನ್ವೆಸ್ಟಿಗೇಷನ್ ಮಾಡಬೇಕಾದರೆ ಅದಕ್ಕೆ ಬೇಕಾದ ಸಲಕರಣೆಗಳು, ಉಪಕರಣಗಳು ಇಲ್ಲದೇ ಹೋದರೆ ಇಂಥಾ ಖಾಯಿಲೆ ಎಂದು ಹೇಳುವುದಕ್ಕಾಗುವುದಿಲ್ಲ. ಏತಕ್ಕೆಂದರೆ ಬೇಕಾದಷ್ಟು ಇನ್ವೆಸ್ಟಿಗೇಷನ್‌ಗಳು ಆಗಬೇಕು, ವೈದ್ಯದಲ್ಲಿ ಬಹುಮುಖ್ಯ ಪಾತ್ರವನ್ನು ವಹಿಸತಕ್ಕಂಥ ಯಾವುದೇ ಸ್ಟೈನಿಂಗ್ ಮೆಟೀರಿಯಲ್ಸ್ ಆಸ್ಪತ್ರೆಯಲ್ಲಿ ಇಲ್ಲ. ಹೀಗಾದರೆ ಏನು ಇನ್ವೆಸ್ಟಿಗೇಷನ್ ಮಾಡುತ್ತಾರೆ ? ಅವುಗಳಿಲ್ಲದೆ ರೋಗಗಳನ್ನು ಹೇಗೆ ಪತ್ತೆ ಮಾಡುವುದು ? ಸಲ್ಯೂಷನ್ಸ್ ಇಲ್ಲ, ಲೋಷನ್ಸ್ ಇಲ್ಲ, ಡ್ರಗ್ಸ್ ಇಲ್ಲ. ಲೈಫ್ ಸೇವಿಂಗ್ ಡ್ರಗ್ಸ್ ಇಲ್ಲ. ಟಿಂಚರ್ ಇಲ್ಲ. ಏತಕ್ಕೆ ಜನಗಳಿಗೆ ಮೋಸ ಮಾಡುತ್ತೀರಿ ? ಡಾಕ್ಟರು ತನ್ನ ಕೈಯಲ್ಲಿರತಕ್ಕ ಕ್ರಿಮಿಗಳನ್ನು ಹೋಗಲಾಡಿಸಿಕೊಳ್ಳಬೇಕಾದರೆ ಲೋಷನ್‌ನಲ್ಲಿ ಕೈಯ್ಯುಗಳನ್ನು ಅದ್ದಬೇಕು. ಅದಕ್ಕೂ ಆಸ್ಪತ್ರೆಯಲ್ಲಿ ಲೋಷನ್ ಇಲ್ಲ ಎಂದರೆ ಹೇಗೆ ? ಆ ರೀತಿ ಡಾಕ್ಟರು ಲೋಷನ್‌ನಲ್ಲಿ ಕೈ ಅದ್ದದಿದ್ದರೆ ರೋಗ ಒಬ್ಬರಿಂದೊಬ್ಬರಿಗೆ ಸ್ಪ್ರೆಡ್ ಆಗುತ್ತದೆ. ಇದು ಉತ್ಪ್ರೇಕ್ಷೆಯ ಮಾತಲ್ಲ. ನಿಜವಾದ ವಿಷಯ. ನನಗೆ ಆರೋಗ್ಯ ಮಂತ್ರಿಗಳಲ್ಲಿ ವೈಯಕ್ತಿಕವಾಗಿ ಸಂಪೂರ್ಣವಾಗಿ ಅಭಿಮಾನ ಇದೆ. ಇವೊತ್ತು ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಯಾವ ಒಂದು ಮಟ್ಟದ ಚಿಕಿತ್ಸೆ ನಡೆಯುತ್ತಿದೆ, ಎಷ್ಟರಮಟ್ಟಿಗೆ ಆಸ್ಪತ್ರೆಗಳಲ್ಲಿ ಉಪಕರಣಗಳಿವೆ, ಆಸ್ಪತ್ರೆಗಳ ಸ್ಥಿತಿಗಳು ಯಾವ ರೀತಿ ಇವೆ ಎನ್ನುವುದಕ್ಕಾಗಿ ನಾನು ಈ ವಿಷಯವನ್ನು ಹೇಳಬೇಕಾಯಿತು. ಆಸ್ಪತ್ರೆಯಲ್ಲಿ ಲೈಫ್ ಸೇವಿಂಗ್ ಡ್ರಗ್ಸ್ ಇಲ್ಲದಿದ್ದರೆ ಹೇಗೆ ? ಇತ್ತೀಚೆಗೆ ವಿಧಾನ ಸಭಾ ಸದಸ್ಯರೊಬ್ಬರಿಗೆ ಪೆನ್ಸಿಲಿನ್ ಇಂಜಕ್ಷನ್ ಕೊಟ್ಟಾಗ ಅದರ ಪ್ರತಿಕೂಲದ ಪರಿಣಾಮವಾಗಿ ಅವರು ಕುಸಿದುಬಿದ್ದರು. ಇಂಜಕ್ಷನ್ ಕೊಡಲು ಬಂದಿದ್ದ ಡಾಕ್ಟರ ಹತ್ತಿರ ಸುದೈವದಿಂದ ಈ ಪ್ರತಿಕೂಲದ ನಿರೋಧಕ ಮಾತ್ರೆ ಇದ್ದುದರಿಂದ ಅದನ್ನು ಕೊಡಲಾಯಿತು. ಆದ್ದರಿಂದ ಆ ಎಂ.ಎಲ್.ಎ. ಬದುಕಿಕೊಂಡರು. ಇಲ್ಲವಿದ್ದರೆ ಇಷ್ಟರಲ್ಲಿ ಉಪ ಚುನಾವಣೆ ನಡೆಯಬೇಕಾಗಿತ್ತು. ಲೈಫ್‌ಸೇವಿಂಗ್ ಡ್ರಗ್ಸ್ ಸಪ್ಲೈ ಮಾಡುವುದಕ್ಕೆ ನಿಮಗೆ ಶಕ್ತಿ ಇಲ್ಲದಿದ್ದರೆ ಆಸ್ಪತ್ರೆಯನ್ನು ಏಕೆ ನಡೆಸಬೇಕು ? ಆಸ್ಪತ್ರೆಗಳಲ್ಲಿರತಕ್ಕ ರೋಗಿಗಳಿಗೆ ಕೊಡತಕ್ಕ ಆಹಾರ ವಿಚಾರದಲ್ಲಂತೂ ಹೇಳುವುದಕ್ಕೆ ಸಾಧ್ಯವಿಲ್ಲ. ನಿಜವಾಗಿಯೂ ರೋಗಿಗಳಿಗೆ ಆಸ್ಪತ್ರೆಗಳಲ್ಲಿ ಸರಿಯಾದ ಆಹಾರವನ್ನು ಕೊಡುತ್ತಿಲ್ಲ. ಆಸ್ಪತ್ರೆಗಳಲ್ಲಿ ಸರ್ಕಾರದವರು ರೋಗಿಗಳಿಗಾಗಿ ಕೊಡತಕ್ಕಂಥ ಅಕ್ಕಿ ಹಾಲು ಇತ್ಯಾದಿ ಪದಾರ್ಥಗಳನ್ನೆಲ್ಲಾ ಅಲ್ಲಿರತಕ್ಕ ನೌಕರವರ್ಗದವರು ಹೊರಗಡೆ ಮಾರಿಕೊಳ್ಳುತ್ತಿದ್ದಾರೆ.

ಒಂದು ಮಂಚ ಇದ್ದರೆ, ಆ ಮಂಚದ ಪಕ್ಕದಲ್ಲೂ ಸಹ ಒಂದು ಹಾಸಿಗೆ ಹಾಕಿರುತ್ತಾರೆ, ಮಂಚದ ಕೆಳಗೂ ಸಹ ಒಂದು ಹಾಸಿಗೆ ಹಾಕಿರುತ್ತಾರೆ, ಅಂದಮೇಲೆ ಈ ಮಂಚವಾದರೂ ಏತಕ್ಕೆ ಇರಬೇಕು ? ಒಂದು ಮಂಚಕ್ಕೂ ಇನ್ನೊಂದು ಮಂಚಕ್ಕೂ ಎಷ್ಟು ಅಂತರವಿರಬೇಕೆಂದು ನಿಯಮವಿದೆಯೋ ಅದನ್ನು ಪಾಲನೆ ಮಾಡುತ್ತಿಲ್ಲ.

5-00 P.M.

ಇನ್ನು ಎಕ್ಸರೇ ಮಿಷನ್ (ಫಿಲಮ್ಸ್)ನ ಉಪಯೋಗ ನಿಜಕ್ಕೂ ಬಡವರಿಗೆ ಸಿಕ್ಕುವ ವಸ್ತುವಾಗಿಲ್ಲ. ಮೊನ್ನೆ ಮಾನ್ಯ ಮಂತ್ರಿಗಳಾದ ಶ್ರೀ ರಾಚಯ್ಯನವರ ಕಾರು ಬಸ್ಸಿಗೆ ಡಿಕ್ಕಿ ಹೊಡೆದು 30 ಜನ ಗಾಯಗೊಂಡಾಗ ಅವರನ್ನು ಮೈಸೂರಿನ ಕೆ. ಆರ್. ಆಸ್ಪತ್ರೆಗೆ ಸೇರಿಸಲಾಯಿತು. ಈ ಗಾಯಗೊಂಡವರಿಗೆ ಲೋಕಲ್ ಅನಸ್ಥಿಸಿಯಾವನ್ನು ಕೊಡದೆ ದಬ್ಬಳದಲ್ಲಿ ಹೊಲಿಗೆ ಹಾಕಿದ್ದಾರೆ. ದಬ್ಬಳದಲ್ಲಿ ಹೊಲಿಗೆ ಹಾಕುವುದಕ್ಕೆ ಅವು ಏನು ಗೋಣಿ ಚೀಲ ಕಿಟ್ಟು ಹೋಯಿತೆ ? ಮುಖ್ಯವಾಗಿ ಬೇಕಾದಂಥ ಇಂತಹ ಔಷದಗಳು ಇಲ್ಲದಿದ್ದ ಮೇಲೆ ಈ ಆಸ್ಪತ್ರೆಗಳಾದರೂ ಏತಕ್ಕೆ ಇರಬೇಕು ?

ಇನ್ನು ಕ್ಯಾಸುಯಾಲಿಟಿ ವಾರ್ಡ್‌ಗೆ ಆಕ್ಸಿಡೆಂಟ್ ಕೇಸಸ್‌ಗಳು ಬಂದರೆ ಆ ಕೇಸ್‌ಗಳನ್ನು ಅಟೆಂಡ್ ಮಾಡಲು ಬಹು ಮುಖ್ಯವಾಗಿ ಬೇಕಾದಂಥ ಕರ್ವ್‌ಡ್ ನೀಡಲ್ಸ್‌ಗಳು ಇರುವುದಿಲ್ಲ. ಬೆಂಗಳೂರಿನ ಆಸ್ಪತ್ರೆಯಲ್ಲಿ ಮಾತ್ರ ಒಂದು ಕರ್ವ್‌ಡ್ ನೀಡಲ್ ಇದೆ.

ಇನ್ನು ಬಹುಮುಖ್ಯವಾಗಿ ಆರೋಗ್ಯದ ವಿಷಯದಲ್ಲಿ ಹೇಳಬೇಕಾದರೆ, ಸಾಮಾನ್ಯವಾಗಿ ಪ್ರತಿಯೊಬ್ಬ ರೋಗಿಯೂ ಆಸ್ಪತ್ರೆಗೆ ಬರಬೇಕಾದರೆ ಭೇದಿ ಕಾಯಿಲೆಯಿಂದ. ಇವರಿಗೆ ಕೊಡಬೇಕಾದಂಥ ಬಿಸ್‌ಮತೆ ಔಷದವೇ ಆಸ್ಪತ್ರೆಗಳಲ್ಲಿ ಇರುವುದಿಲ್ಲ. ಮತ್ತು ರಿಬ್ ಫ್ರಾಕ್ಚರ್ ಆಗಿ ಯಾರಾದರೂ ಆಸ್ಪತ್ರೆಗೆ ಬಂದರೆ ಅವರಿಗೆ ಬೇಕಾದಂಥ ಅಡಿಸಿವ್ ಪ್ಲಾಸ್ಟರ್ ಇರುವುದಿಲ್ಲ. ದೊಡ್ಡ ಆಸ್ಪತ್ರೆಗಳಾದಂಥ ಮೈಸೂರಿನ ಕೆ. ಆರ್. ಆಸ್ಪತ್ರೆ ಮತ್ತು ಬೆಂಗಳೂರಿನ ವಿಕ್ಟೋರಿಯ ಆಸ್ಪತ್ರೆಯಲ್ಲಿ ಯಾವಾಗಲೂ ಸಿರಂಜಸ್ ಮತ್ತು ನೀಡಲ್ಸ್ ಇರುವುದಿಲ್ಲ.

ಇನ್ನು ಬಹು ಮುಖ್ಯವಾಗಿ ಪ್ರಸ್ತಾಪ ಮಾಡಬೇಕಾದ ವಿಷಯವೆಂದರೆ ರಾತ್ರಿ ಕಾಲದಲ್ಲಿ ಅಕ್ಸಿಡೆಂಟ್ ಆಗಿ ಬಂದಂಥವರಿಗೆ ವೈದ್ಯರು ಚಿಕಿತ್ಸೆ ನಡೆಸಬೇಕಾದರೆ, ಸೂಚಿ ಮಾಡಬೇಕಾದರೆ, ಫಸ್ಟ್—ಏಡ್ ಕೊಡಬೇಕಾದರೆ ಇನ್ಸ್‌ಟ್ರುಮೆಂಟ್‌ಗಳನ್ನು ಸ್ಟರಿಲೈಜ್ ಮಾಡಬೇಕಾಗುತ್ತದೆ. ಈ ಕೆಲಸಗಳನ್ನು ಮಾಡಬೇಕಾದರೆ ಡಾಕ್ಟರ್‌ಗಳ ಸಹಾಯಕ್ಕೆ ನರ್ಸ್‌ಗಳು ಬೇಕಾಗುತ್ತಾರೆ. ಸರ್ಕಾರದವರಿಗೆ ರಾತ್ರಿಕಾಲದಲ್ಲಿ ನರ್ಸ್‌ಗಳನ್ನು ನೇಮಕ ಮಾಡಿದರೆ ಹೇಗೋ ಏನೋ ಎನ್ನುವ ಅಪನಂಬಿಕೆ ಇರಬಹುದು. ಆದರೆ ಸರ್ಕಾರದವರು ಈ ವೃತ್ತಿಯ ಬಗ್ಗೆ ಅಷ್ಟೊಂದು ಅಗೌರವವನ್ನಾಗಲೀ, ಅಷ್ಟೊಂದು ಅನುಮಾನವನ್ನಾಗಲೀ ತೋರಿಸಬಾರದು. ಈ ಬಗ್ಗೆ ಮೈಸೂರು ಮೆಡಿಕಲ್ ಕಾಲೇಜಿನ ಒಂದು ಉದಾಹರಣೆಯನ್ನು ಹೇಳುತ್ತೇನೆ: ಮೊದಲನೆಯ ಮತ್ತು ಎರಡನೆಯ ಮಹಡಿಯಲ್ಲಿ ಡ್ಯೂಟಿ ನರ್ಸ್‌ಗಳಿರುತ್ತಾರೆ. ಮೂರನೆಯ ಮಹಡಿ ಮೇಲೆ ಹೌಸ್ ಸರ್ಜನ್ ವಾಸ ಮಾಡುತ್ತಿರುತ್ತಾರೆ. ಇವರಿಗೂ ನರ್ಸ್‌ಗಳಿಗೂ ಸಂಪರ್ಕವಿರುವುದರಿಂದ ಏತಕ್ಕೆ ಅನುಮಾನ ಪಡಬೇಕು ? ಈಗ ವಾರ್ಡ್ ಬಾಯ್ಸ್‌ಗಳೇ ಇನ್ಸ್‌ಟ್ರುಮೆಂಟ್ ಗಳನ್ನು ಸ್ಟರಿಲೈಜ್ ಮಾಡುತ್ತಿದ್ದಾರೆ. ಆದರೆ ನರ್ಸ್‌ಗಳಿಗೆ ಗೊತ್ತಿರುವಷ್ಟು ವಿಚಾರ ಇವರಿಗೆ ಗೊತ್ತಿರುವುದಿಲ್ಲವಾದ್ದರಿಂದ ರಾತ್ರಿ ಕಾಲದಲ್ಲೂ ಸಹ ನರ್ಸ್‌ಗಳನ್ನು ನೇಮಕ ಮಾಡುವುದಕ್ಕೆ ಸರ್ಕಾರದವರು ತಕ್ಕ ಏರ್ಪಾಡು ಮಾಡಬೇಕು.

ಇನ್ನು ಸರ್ಜಿಕಲ್ ಬಗ್ಗೆ ಮಾತನಾಡುವುದಾದರೆ, ಆಸ್ಪತ್ರೆಗಳು ಪ್ರಾರಂಭವಾದಾಗ ಏನು ಇನ್ಸ್‌ಟ್ರುಮೆಂಟ್‌ಗಳನ್ನು ಒದಗಿಸಿದ್ದರೋ, ಅವುಗಳೇ ಇವತ್ತಿನವರೆಗೂ ಇವೆಯೇ ಹೊರತು ಹೊಸ ಹೊಸ ಇನ್ಸ್‌ಟ್ರುಮೆಂಟ್‌ಗಳನ್ನು ತರಿಸಿ ಒದಗಿಸಿಲ್ಲ, ಮತ್ತು ಹೆಚ್ಚು ಮಾಡಿಲ್ಲ. ಮತ್ತು ಇರಲೇ ಬೇಕಾದಂಥ ಕ್ಯಾಚೆಟ್ಸ್ ಆಗಲೀ, ಹೊಲಿಗೆ ದಾರವಾಗಲೀ, ಕರ್ವ್‌ಡ್ ನೀಡಲ್ಸ್ ಆಗಲೀ, ಆಕ್ಸಿಜನ್ ಆಗಲಿ ಇರುವುದಿಲ್ಲ. ಇಂತಹ ಕೆಲವು ಔಷಧಿಗಳು ಇಲ್ಲವೆಂದು ಇನ್ಸ್‌ಟ್ರುಮೆಂಟ್‌ಗಳು ಇಲ್ಲವೆಂದು ಕೆಲವು ಸಲ ಆಪರೇಷನ್‌ಗಳನ್ನು ಮುಂದಕ್ಕೆ ಹಾಕಿದ್ದಾರೆ. ಒಟ್ಟಿನಲ್ಲಿ ಮೈಸೂರು ಮತ್ತು ಬೆಂಗಳೂರಿನ ದೊಡ್ಡ ಆಸ್ಪತ್ರೆಗಳಲ್ಲಿರುವ ಆಪರೇಷನ್ ಥಿಯೇಟರ್‌ಗಳನ್ನು ಈ ಕಾರಣಗಳಿಂದ ಮುಚ್ಚಿದ್ದಾರೆಂದು ಹೇಳಬಹುದು. ಈ ರೀತಿ ಹೊರ ದೇಶಗಳಲ್ಲಿ ಮಾಡಿದ್ದರೆ ರೋಗಿಗಳು ಸರ್ಕಾರದಿಂದ ಜೀವನಾಂಶವನ್ನು ಕ್ಲೈಮ್ ಮಾಡುತ್ತಿದ್ದರು. ಈ ರೀತಿ ಆಪರೇಷನ್‌ಗಳನ್ನು ಮುಂದಕ್ಕೆ ಹಾಕಿದ ಪರಿಣಾಮವಾಗಿ ಮೈಸೂರು ಮತ್ತು ಬೆಂಗಳೂರಿನಲ್ಲಿ 5–6 ಜನ ಸತ್ತಿದ್ದಾರೆ. ಕಳೆದ ತಿಂಗಳು ಮಾಜೀ ಕಾಂಗ್ರೆಸ್ ಸದಸ್ಯರೊಬ್ಬರು ಆಪರೇಷನ್ ಟೇಬಲ್ ಮೇಲೆಯೇ ಸತ್ತುಹೋದರು. ಇದಕ್ಕೆ ಕಾರಣವೆಂದರೆ ಸರಿಯಾಗಿ ಸ್ಟರ್‌ಲೈಜೇಷನ್ ಮಾಡದಿರುವುದು. ಇದನ್ನೆಲ್ಲಾ ಯಾವಾಗ ಸರಿಪಡಿಸುತ್ತಾರೆಂಬುದು ಗೊತ್ತಾಗುತ್ತಿಲ್ಲ.

ಇನ್ನು ಲೇಡಿ ಡಾಕ್ಟರ್‌ಗಳು ಆಪರೇಷನ್ ಥಿಯೇಟರ್‌ಗೆ ಜಡೆ ಹಾಕಿಕೊಂಡು, ಹೂ ಮುಡಿದು ಕೊಂಡು ಬರುತ್ತಾರೆ. ಮತ್ತು ಬಣ್ಣ ಬಣ್ಣದ ಸೀರೆಗಳನ್ನು ಉಟ್ಟುಕೊಂಡು ಬರುತ್ತಾರೆ. ಇದರಿಂದ ರೋಗಿಗಳ ಮನಸ್ಸಿನ ಮೇಲೆ ಕೆಟ್ಟ ಪರಿಣಾಮ ಉಂಟಾಗಬಹುದು.

ಶ್ರೀ ಎಸ್. ವಿ. ಅಗ್ನಿಹೋತ್ರಿ.—ಅಂದರೆ ಲೇಡೀ ಡಾಕ್ಟರ್‌ಗಳೆಲ್ಲಾ ಜಡೆ ಬೋಳಿಸ ಬೇಕೆಂತೀರೇನೋ ?

(ನಗು)

ಶ್ರೀ ಎಚ್. ಪುಟ್ಟದಾಸ.—ಬೋಳಿಸಿಕೊಂಡು ಬರಲಿ ಎಂದು ಹೇಳುವುದಿಲ್ಲ. ಈಗ ಇಲ್ಲಿ ಕುಳಿತಿರುವ ಶ್ರೀಮತಿ ನಾಗರತ್ನಮ್ಮನವರು ತುರುಬು ಕಟ್ಟಿಕೊಂಡಿರುವಂತೆ ಕಟ್ಟಿಕೊಂಡು ಮೇಲೆ ಬಿಳಿ ಬಟ್ಟೆಯನ್ನು ಕಟ್ಟಿಕೊಂಡು ಬಂದರೆ ನೈರ್ಮಲ್ಯದೃಷ್ಟಿಯಿಂದ ಒಳ್ಳೆಯದಾಗುತ್ತದೆ. ನಾನು ಈ ವಿಷಯವನ್ನು ಏತಕ್ಕೆ ಹೇಳುತ್ತೇನೆಂದರೆ. ಮಹಿಳಾ ಡಾಕ್ಟರ್‌ಗಳು ಅನೇಕ ಸಲ ಜಡೆ ಹಾಕಿಕೊಂಡು ಹೂ ಮುಡಿದುಕೊಂಡು ಆಪರೇಷನ್ ಥಿಯೇಟರ್‌ಗೆ ಬಂದ ಸಂದರ್ಭದಲ್ಲಿ, ಮೈಸೂರಿನ ಕೆ. ಆರ್. ಆಸ್ಪತ್ರೆಯಲ್ಲಿ ಮತ್ತು ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಕೆಲವು ಸಾವುಗಳಾಗಿವೆ. ಇದನ್ನು ಸರ್ಕಾರದವರು ಗಮನಿಸಬೇಕು.

ಇನ್ನು ಮೆಟರ್‌ನಿಟಿ ಇಲಾಖೆಗೆ ಸಂಬಂಧಪಟ್ಟಂತೆ ಹೇಳುವುದಾದರೆ, ಬಹಳ ಜನ ಹೆಂಗಸರು ಅನೀಮಿಯ ಕಾಯಿಲೆಯಿಂದ ಬಂದರೆ ಅವರಿಗೆ ಇನ್‌ಫರನ್ ಸಿಗುತ್ತಿಲ್ಲ. ಹೆರಿಗೆಯಾದಾಗ ಸಾಮಾನ್ಯವಾಗಿ ಮರ್ಮವನ್ನು ಸ್ಪಿರಿಟ್‌ನಿಂದ ತೊಳೆಯುವುದು ಬಹಳ ಮುಖ್ಯವಾದ ಕೆಲಸ. ಆದರೆ ಅನೇಕ ಆಸ್ಪತ್ರೆಗಳಲ್ಲಿ ಸ್ಪಿರಿಟೇ ಇರುವುದಿಲ್ಲ. ಇದರ ಜೊತೆಗೆ ಮಕ್ಕಳು ಹುಟ್ಟಿದ ಕೂಡಲೇ ಕಣ್ಣನ್ನು ಉಜ್ಜಬೇಕಾದರೆ ನೈಟ್ರೇಟ್ ಸಲ್ಯೂಷನ್ ಬೇಕಾಗುತ್ತದೆ. ಇದೂ ಸಹ ಸರಿಯಾಗಿ ಆಸ್ಪತ್ರೆಗಳಲ್ಲಿ ಸ್ಟಾಕ್ ಇರುವುದಿಲ್ಲ. ಈ ಕಾರಣಗಳಿಂದ ಅನೆಮಿಕ್ ರೋಗಿಗಳು ಜಾಸ್ತಿ

(ಶ್ರೀ ಎಸ್. ವಿ. ಅಗ್ನಿಹೋತ್ರಿ)

ಯಾಗುತ್ತಿವೆ. ಈ ರೋಗವಿರುವ ಹೆಂಗಸರಿಂದ ಹುಟ್ಟಿದ ಮಕ್ಕಳು ನೀಲಿ ಬಣ್ಣದಲ್ಲಿರುತ್ತವೆ. ಈ ರೀತಿ ಹುಟ್ಟುವ ಮಕ್ಕಳಿಗೆ ಆಕ್ಸಿಜನ್ ಕೊಡಬೇಕು. ಕೊಡದಿದ್ದರೆ ಮಕ್ಕಳು ಬದುಕುವುದು ಕಷ್ಟವಾಗುತ್ತದೆ. ಕೆಲವು ಆಸ್ಪತ್ರೆಗಳಲ್ಲಿ ಆಕ್ಸಿಜನ್ ಇಲ್ಲದೆ ನನ್ನ ಕಣ್ಣೆದುರಿಗೆ 8–10 ಮಕ್ಕಳು ಸತ್ತಿವೆ. ಇದಕ್ಕೆಲ್ಲಾ ಯಾರು ಜವಾಬ್ದಾರರು ? ಮಾನ್ಯ ಸದಸ್ಯರಾದ ವೀರಪ್ಪಗೌಡರು ಹೇಳಿದಂತೆ, ಇದೂ ಒಂದು ರೀತಿಯ ಫ್ಯಾಮಿಲಿ ಪ್ಲಾನಿಂಗ್ ಎಂದು ಹೇಳುವುದಾದರೆ ಒಪ್ಪಬಹುದು. ಸರ್ಕಾರದವರು ಈ ಬಗ್ಗೆ ಸರಿಯಾದ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ಪೆಡಿಯಾಟ್ರಿಕ್ ಇಲಾಖೆಯ ಬಗ್ಗೆ ಹೇಳುವುದಾದರೆ, ಅನೀಮಿಯಾ ಎಂಬುದು ಬಹಳ ಮುಖ್ಯವಾದ ಕಾಯಿಲೆ. ಇಂತಹ ಕಾಯಿಲೆ ಬಂದ ಮಕ್ಕಳಿಗೆ ಪ್ರೋಟೀನ್ ಫುಡ್ ಕೊಡಬೇಕಾಗುತ್ತದೆ. ಆದರೆ ಇದೂ ಸಹ ಆಸ್ಪತ್ರೆಗಳಲ್ಲಿ ಇರುವುದಿಲ್ಲ. ಸರ್ಕಾರದವರು ಈ ಫುಡ್‌ನ್ನು ಸಕಾಲದಲ್ಲಿ ಸರಬರಾಜು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು Opthalmology Department ನಲ್ಲಿ ಈ ಕೆಳಕಂಡಂತಹ ಬಹು ಮುಖ್ಯವಾದಂಥ ಔಷಧಗಳು ಮತ್ತು ಉಪಕರಣಗಳು ಇಲ್ಲವೆಂದು ಹೇಳುತ್ತೇನೆ.

1. No trolleys
2. No corneal suturing needle for Keratoplasty
3. No Dewickers Scissors
4. No Drip Stand
5. No oxygen
6. No anaetshetisians

ಇವುಗಳೆಲ್ಲಾ ಎಲ್ಲಾ ಕಾಲದಲ್ಲೂ ಇರುವಂತೆ ಸರ್ಕಾರದವರು ನೋಡಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಇದೇ ಸಂದರ್ಭದಲ್ಲಿ ನಮ್ಮ ದೇಶ ಬಡದೇಶ ಎಂಬುದನ್ನು ಒಪ್ಪಿಕೊಳ್ಳುತ್ತೇನೆ. ಅದೇ ಬ್ರಿಟನ್ ದೇಶದ ಒಂದು ಚಿತ್ರ ನೋಡುವುದಾದರೆ ಅಲ್ಲಿಯ ವೈದ್ಯ ಇಲಾಖೆಯವರು ಜನರಿಗೆ ಈ ಕೆಳಗಿನ ಸೌಕರ್ಯವನ್ನು ಒದಗಿಸುತ್ತಿದ್ದಾರೆ :

> "General medical services, general dental services, pharmeceutical services, local health authority services, hospital out-patient services, and health education. Centres can be used by other bodies, such as by the local education authorities for school health services, and thus represent a further example of their integration into the life of the local neighbourhood."

ಇಷ್ಟೊಂದು ಸೌಲಭ್ಯಗಳನ್ನು ನಮ್ಮ ದೇಶದಲ್ಲಿ ಜನರಿಗೆ ಒದಗಿಸುವುದಕ್ಕಾಗದಿದ್ದರೂ ಸಹ ಸ್ವಲ್ಪವಾದರೂ ಸೌಲಭ್ಯಗಳನ್ನು ಒದಗಿಸುವುದಕ್ಕೆ ಈ ದಿಶೆಯಲ್ಲಿ ಪ್ರಯತ್ನಪಟ್ಟಿದ್ದೇವೆಯೇ ಎಂದರೆ ಇಲ್ಲವೆಂದು ಹೇಳಬಹುದು; ಮತ್ತು ಈ ರೂರಲ್ ಆಸ್ಪತ್ರೆಯ ಬಗ್ಗೆ ಮಾತನಾಡುತ್ತೇನೆ. ಒಟ್ಟು ಆಸ್ಪತ್ರೆಗೆ ಜನಸಂಖ್ಯೆಯನ್ನು ಲೆಕ್ಕ ಹಾಕಿದರೆ, ಸುಮಾರು 19 ಸಾವಿರ ಚಿಲ್ಲರೆ ಜನರಿಗೆ ನಮ್ಮದು ಒಂದು ಆಸ್ಪತ್ರೆ ಇದೆ. ಆದರೆ, ಅದರ ಸ್ಥಿತಿ ಏನಾಗಿದೆ? ಮೊದಲು ಪೋಸ್ಟಿಂಗ್ಸ್ ಆಗುವ ವಿಚಾರ ತೆಗೆದುಕೊಳ್ಳೋಣ. ಇದರಲ್ಲಿ ಏನು ತಾರತಮ್ಯ ಸ್ವಾಮಿ ? ಒಬ್ಬ ಐಶ್ವರ್ಯವಂತನ ಮಗ ಡಾಕ್ಟರ್ ಆದರೆ ಅವನ ಮೇಲೆ ಅವಲಂಬನೆ ಮಾಡಿರುವವರು ಜಾಸ್ತಿ ಜನ ಇರುವುದಿಲ್ಲ. ಆದರೆ ಒಬ್ಬ ಅದೇ ಬಡವನಾದರೆ, ತಾನು ಗ್ರಾಜ್ಯುಯೇಟ್ ಆದರೆ, ಅವನ ಜೀವನದಲ್ಲಿ ಎಲ್ಲರೂ, ಅವನ ಅಣ್ಣ ತಮ್ಮ, ತಂಗಿಯಂದಿರೂ ಎಲ್ಲರೂ ಅವನನ್ನು ಅವಲಂಬನೆ ಮಾಡಿರುತ್ತಾರೆ. ಅಂಥವರನ್ನು ರೂರಲ್ ಆಸ್ಪತ್ರೆಗಳಿಗೆ ಪೋಸಿಂಗ್ಸ್ ಮಾಡಿದರೆ, ಅವನ ಕಷ್ಟವನ್ನು ಯಾರು ನೋಡುವುದು ? ಆದರೆ, ತಮಗೆ ಬೇಕಾಗಿರತಕ್ಕಂಥವರನ್ನು ನಗರದಲ್ಲಿ ಇಟ್ಟುಕೊಳ್ಳುತ್ತಿದ್ದಾರೆ. ಇದು ಬಹಳ ಕೆಟ್ಟ ಅಭ್ಯಾಸ. ಸರ್ ಅಂಟನಿ ಈಡನ್ ಪ್ರೈಮ್ ಮಿನಿಸ್ಟರಾಗಿದ್ದಾಗ ತನ್ನ ಮಗನಿಗೆ ಮೂರು ವರ್ಷ ರೂರಲ್ಸ್ ಏರಿಯಾಗೆ ಕಳಿಸಿದ್ದಾರೆ. ಅದೇ ರೀತಿ ಈಗ ಅಮೇರಿಕಾದಲ್ಲಿ ಪ್ರೆಸಿಡೆಂಟ್ ಆಗಿರತಕ್ಕ ಜಾನ್ಸನ್ ಅವರ ಮಗಳಿಗೆ

ಕೇವಲ ಆರು ತಿಂಗಳಾಯಿತು ಮದುವೆಯಾಗಿ. ಅವಳ ಗಂಡ ದಕ್ಷಿಣ ವಿಯಾಟ್ನಾಮ್‌ನಲ್ಲಿ ಯುದ್ಧದಲ್ಲಿ ಕೆಲಸ ಮಾಡುತ್ತಿದ್ದಾನೆ. ಇದರಿಂದ ಅವರಲ್ಲಿ ಎಂಥ ಒಂದು ಶಿಸ್ತು ಇದೆ, ಎಂಥ ಶಿಸ್ತಿನಲ್ಲಿ ಪೋಸ್ಟಿಂಗ್ಸ್ ಮಾಡುತ್ತಾರೆ ಎಂಬುದನ್ನು ತಿಳಿಯಬಹುದು. ನಾವು ಇಲ್ಲಿ ಐಶ್ವರ್ಯವಾಗಿರತಕ್ಕಂತವರಿಗೆ, ಇನ್‌ಫ್ಲುಯೆನ್ಸ್ ಇರುವವರಿಗೆ, ಇಂಥವರನ್ನು ನಗರದಲ್ಲಿ ಇಟ್ಟುಕೊಂಡು ಬಡವರನ್ನು ಹಳ್ಳಿಗಳಿಗೆ ಕಳಿಸಿ ಅಲ್ಲಿ ಸಾಯಬೇಕೆಂದರೆ, ಇದಕ್ಕಿಂತಲೂ ಅನ್ಯಾಯ ಬೇರೆ ಇಲ್ಲ.

ಇನ್ನು ರೂರಲ್ ಆಸ್ಪತ್ರೆಯ ಸೌಕರ್ಯದ ವಿಚಾರ. ಈಗ ಕಂಬೈನ್ಡ್ ಹಾಸ್ಪಿಟಲ್ ತಾಲ್ಲೂಕು ಲೆವಲ್—ಮೂರು ಸಾವಿರ ಮತ್ತು ಒಂದು ಸಾವಿರ (package indent) ಕೊಡುತ್ತಿದ್ದೀರಿ. ಕಂಬೈನ್ಡ್ ಆಸ್ಪತ್ರೆ ಬಿಲೋ ತಾಲ್ಲೂಕು ಲೆವಲ್ ಎರಡು ಸಾವಿರ ಮತ್ತು ಒಂದು ಸಾವಿರ ಕೊಡುತ್ತೀರಿ. ಪ್ರೈಮರಿ ಹೆಲ್ತ್ ಯೂನಿಟ್ (ಮೈಸೂರು ಪ್ಯಾಟರ್ನ್) ಎರಡು ಸಾವಿರ ಮತ್ತು 500 ರೂಪಾಯಿ ಕೊಡುತ್ತಿದ್ದೀರಿ. ರೆಡ್ಯೂಸ್ಡ್ ಸ್ಕೇಲ್ ಲೋಕಲ್ ಫಂಡ್ ಡಿಸ್ಪೆನ್ಸರಿ 900 ರೂಪಾಯಿ, ಮತ್ತು ಲೋಕಲ್ ಫಂಡ್ ಡಿಸ್ಪೆನ್ಸರಿಗೆ 1,500 ರೂಪಾಯಿ. ಆದರೆ ಔಷಧಿಗಳನ್ನು ಕೊಂಡುಕೊಳ್ಳುವವರು ಗೌರ್ನಮೆಂಟ್ ಮೆಡಿಕಲ್ ಸ್ಟೋರ್ಸ್‌ನವರು. ಆದರೆ ಕಾಲ ಸ್ಥಿತಿಗೆ ಅನುಸರಿಸಿಕೊಂಡು ಕೊಳ್ಳುತ್ತಾ ಇಲ್ಲ. ಕೇವಲ ಟಿಂಚರ್ ಬಿಸ್ಮತ್, ಕಾಟನ್ ಬಿಸ್ಮತ್ ಮಿಕ್ಸ್‌ಚರ್ ಸಪ್ಲೈ ಮಾಡುತ್ತಿದ್ದಾರೆ. ಬಹು ಮುಖ್ಯ ಖಾಯಿಲೆ, ಭೇದಿ. ಈ ಬಿಸ್ಮತ್ ಕಾರ್ಬನ್ ಒಂದು ದಿವಸಕ್ಕೆ ಸಾಕು. ಮಿಕ್ಕ ದಿನ ಜನರಿಗೆ ಸೋಡಾ ಕಾರ್ಬ ಮತ್ತು—ಮ್ಯಾಕ್ ಕಾರ್ಬ ಕೊಟ್ಟು ಮೋಸ ಮಾಡುತ್ತಿದ್ದಾರೆ. ಇದಕ್ಕೆಲ್ಲಾ ಯಾರು ಹೊಣೆ? ಈಗ ಸಾಮಾನ್ಯವಾಗಿ ಹಳ್ಳಿಯಲ್ಲಿ ವ್ಯಾಜ್ಯ, ಗಲಾಟೆಗಳಾಗಿ ಗಾಯಗಳಾಗಿ ಬಂದರೆ; ಇಲ್ಲಿ ಕೇವಲ 10 ಸಿ.ಸಿ.ಯ ಎರಡು ವಯಲ್ಸ್ ಕೊಟ್ಟಿರುತ್ತಾರೆ. ಗಂಡ ಹೆಂಡತಿ ಇಬ್ಬರು ಜಗಳ ಮಾಡಿಕೊಂಡರೆ ಮುಗಿದೇ ಹೋಯಿತು. ಇವರಿಬ್ಬರಿಗೂ ಈ ಎರಡು ವಯಲ್ಸ್ ಮುಗಿದು ಹೋಗುತ್ತದೆ. ಇನ್ನು ಉಳಿದವರಿಗೆ ಏನು ಮಾಡುತ್ತೀರಿ? ನೀವು ಹೇಳುತ್ತೀರಿ, ಇಲಾಖೆಯನ್ನು ಒಂದು ರೀತಿಯ ಮಾದರಿಯನ್ನಾಗಿ ಮಾಡಬೇಕೆಂದು ಹೇಳುತ್ತಾರೆ. ಈ ನಾನ್ ಪ್ರಾಕ್ಟಿಸಿಂಗ್ ಅಲೋಯೆನ್ಸ್ ಕೊಟ್ಟು ಇದನ್ನು ತಪ್ಪಿಸಬೇಕೆಂದು ಹೇಳುತ್ತಿದ್ದಾರೆ. ಇವತ್ತು ಆಸ್ಪತ್ರೆಗಳಲ್ಲಿ ಪಿಲ್ಸ್, ಟಿಂಚರ್ಸ್ ಕೊಟ್ಟು ಕಾಯಿಲೆಯನ್ನು ವಾಸಿ ಮಾಡುವುದಕ್ಕೆ ಸಾಧ್ಯ ಇದೆಯೆ? ರೋಗಿಗಳ ಹಿತದೃಷ್ಟಿಯಿಂದ ಕೆಲವು ಔಷಧಿಗಳನ್ನು ಇಟ್ಟುಕೊಳ್ಳಬಹುದು. ರೋಗಿಗಳು ಅಲ್ಲಿ ಬಂದಾಗ ಚಿಕಿತ್ಸೆ ಮಾಡಬೇಕು, ಮತ್ತು ಚಿಕಿತ್ಸೆ ಮಾಡಬೇಕಾದರೆ ಎಲ್ಲಾ ಔಷಧಿಯೂ ಅಲ್ಲಿರಬೇಕಾಗುತ್ತದೆ. ಅವನಿಗೆ ಪೂರ್ತಿ ಔಷಧಿ ಕೊಟ್ಟು ಪ್ರಾಕ್ಟೀಸ್ ಮಾಡುವುದನ್ನು ತಪ್ಪಿಸಬಹುದು.

ಇನ್ನು ಡಾಕ್ಟರ ಜವಾಬ್ದಾರಿ ವಿಚಾರ. ಮೊದಲು ಕ್ಯೂರೇಟಿವ್ ಒಂದೇ ಇತ್ತು. ಆದರೆ ಇವತ್ತು ಯಾರೋ ಒಬ್ಬರಿಗೆ ಡೈರೆಕ್ಟರ್ ಮಾಡಬೇಕೆಂಬ ದೃಷ್ಟಿಯಿಂದ ಕ್ಯುರೇಟಿವ್ ಮತ್ತು ಪ್ರಿವೆಂಟಿವ್ ಅಮಾಲ್ಗಮೇಶನ್ ಮಾಡಿರುತ್ತಾರೆ. ಇವತ್ತು ಆಸ್ಪತ್ರೆಯಲ್ಲಿ ಒಂದು ಹೆರಿಗೆಯಾಗಬೇಕಾದರೆ, ಮಿಡ್‌ವೈಫನ್ನು ಹುಡುಕಿಕೊಂಡು ಹೋಗಬೇಕು, ಹೆಲ್ತ್ ಇನ್‌ಸ್ಪೆಕ್ಟರ್ ಕಕ್ಕಸಕ್ಕೆ ಹೋಗಿದ್ದರೆ, ಅಲ್ಲಿಗೆ ಹುಡುಕಿಕೊಂಡು ಹೋಗಬೇಕು, ಫ್ಯಾಮಿಲಿ ಪ್ಲಾನಿಂಗ್ ಇನ್‌ಸ್ಪೆಕ್ಟರ್ ಬೇರೆ, ಬಿ. ಡಿ. ಒ. ಬರುತ್ತಾರೆ, ಅವನನ್ನು ಫಾಲೋ ಮಾಡಬೇಕಾಗುತ್ತದೆ. ಅವನು ಅಲ್ಲಿ ಯಾರನ್ನೆಲ್ಲಾ ಫಾಲೋ ಮಾಡುವುದು? ಇವನ ವೃತ್ತಿ ಏನು, ಇವನ ಪ್ರೋಗ್ರಾಂ ಯಾವ ತರಹ ಅಡ್‌ಜಸ್ಟ್ ಮಾಡಬೇಕು? ಇದಕ್ಕೆ ಏನಾದರೂ ಒಂದು ಅರ್ಥವಿದೆಯೋ? ಅವನ ಡ್ಯೂಟಿಯ ಪ್ರಶ್ನೆ ಏನಾಗಿದೆ? ಅವನು ಆಫೀಸರೋ, ಅಥವಾ ಡಾಕ್ಟರೋ? ಏನಾದರೂ ಒಂದಕ್ಕೊಂದು ಸಂಬಂಧವಿದೆಯೋ? ಮೊದಲು ಪ್ರಿವೆಂಟಿವ್ ಮತ್ತು ಕ್ಯುರೇಟಿವ್ ಯಾವ ಸೈಡಿನಲ್ಲಿ ಇತ್ತೋ ಆ ತರಹ ಸ್ಪ್ಲಿಟ್ ಮಾಡಿ ಫ್ಯಾಮಿಲಿ ಪ್ಲಾನಿಂಗ್ ಒಂದು ಪ್ರತ್ಯೇಕವಾಗಿ ಮಾಡಬೇಕು; ಮತ್ತು ಪ್ರತ್ಯೇಕ ಡೈರೆಕ್ಟರನ್ನು ಮಾಡಬೇಕೆಂದು ಸೂಚಿಸುತ್ತೇನೆ. ಅದೇ ರೀತಿ ಇವತ್ತಿನ ದಿವಸ ಹೆಡ್ ಆಫೀಸಿನಲ್ಲಿ ಡೈರೆಕ್ಟರ್ ಆಫ್ ಹೆಲ್ತ್ ಸರ್ವಿಸಸ್ ಮಾಡಿದರು. ಜಾಯಿಂಟ್ ಡೈರೆಕ್ಟರ್ ಆಫ್ ಹೆಲ್ತ್ ಸರ್ವಿಸಸ್ ಮಾಡಿದ್ದಾರೆ. ಜಾಯಿಂಟ್ ಡೈರೆಕ್ಟರ್ ಫಾರ್ ಸ್ಪೆಶಲ್ ಸಿಸ್ಟಂ ಎಂದು ಮಾಡಿದ್ದಾರೆ. ಜೊತೆಗೆ ಇವರೆಲ್ಲರಿಗೂ ಒಬ್ಬ ಐ. ಎ. ಎಸ್. ಆಫೀಸರ ಒಬ್ಬ ಡೆರೆಕ್ಟರಿಗೆ ಏಕೆ ಎಲ್ಲಾ ಪವರ್ಸ್ ಇರಬಾರದು? ಇವತ್ತು ಸಹಕಾರ ಇಲಾಖೆ ಯಾವ ತರಹ ಜೋನಲ್ ಸಿಸ್ಟಂನಲ್ಲಿದೆ ಆ ತರಹ ಮಾಡಬಹುದು. ಎಲ್ಲಾ ಫೈಲುಗಳು ಡೈರೆಕ್ಟರಿಗೆ ಹೋಗಬೇಕೆಂಬುದಾಗಿ ಏಕೆ? ಜಾಯಿಂಟ್ ಡೈರೆಕ್ಟರನ್ನು ಮೂರು ನಾಲ್ಕು ಜಿಲ್ಲೆಗಳನ್ನು ಕೊಟ್ಟು ಕಳಿಸಿ. ಬಹಳ ವೇಗವಾಗಿ ಕೆಲಸವಾಗಬಹುದು. ಇದನ್ನು ಯೋಚನೆ ಮಾಡಬೇಕು. ತಾಲ್ಲೂಕಾ ಮಟ್ಟದಲ್ಲಿರುವ ಆಸ್ಪತ್ರೆಗಳನ್ನು ನೋಡಿದರೆ ಅಲ್ಲಿ ಹೆರಿಗೆಗಾಗಿ ಎರಡೇ ಬೆಡ್‌ಗಳಿಗೆ ಮಾತ್ರ ಅವಕಾಶ ಇದೆ. ತುರ್ತಾಗಿ ಯಾರಾದರೂ ಹೆರಿಗೆಗೆ ಹೆಂಗಸರು ಬಂದರೆ ಅವರನ್ನು ಮೈಸೂರಿಗೋ ಇಲ್ಲ ಬೆಂಗಳೂರಿಗೋ ಕರೆದುಕೊಂಡು ಹೋಗಿ ಎಂದು ಹೇಳಿದರೆ ಎಷ್ಟು ಕಷ್ಟವಾಗುತ್ತದೆ ಎನ್ನುವುದನ್ನು ಯಾರಾದರೂ ಯೋಚನೆ

(ಶ್ರೀ ಎಸ್. ವಿ. ಅಗ್ನಿಹೋತ್ರಿ)

ಮಾಡಿದ್ದಾರೆಯೇ ? ಸುಮಾರು ಎಲ್ಲಾ ತಾಲ್ಲೂಕಾ ಆಸ್ಪತ್ರೆಗಳಲ್ಲಿ ನೋಡಿದರೂ ಯಾವ ಆಸ್ಪತ್ರೆಗಳಲ್ಲಿಯೂ ಎರಡು ಬೆಡ್ಸ್‌ಗಳಿಗಿಂತಹ ಹೆಚ್ಚಾಗಿ ಇಲ್ಲ. ಹೆಚ್ಚಿಗೆ ಜನರು ಆಕ್ಸಿಡೆಂಟಲ್ ಕೇಸಸ್ ಹಾಗೂ ಎಮರ್ಜನ್ಸಿ ಕೇಸುಗಳು ಬಂದರೆ ಏನು ಮಾಡುವುದು ? ತುರ್ತಾಗಿ ಅವರಿಗೆ ವೈದ್ಯಚಿಕಿತ್ಸೆ ಕೊಡಲೇಬೇಕಾಗುತ್ತದೆ. ಇಂತಹ ರೋಗಿಗಳನ್ನು ದೂರದ ಜಾಗಗಳಾದ ಬೆಂಗಳೂರಿಗೋ ಇಲ್ಲ ಮೈಸೂರಿಗೋ ಕರೆದುಕೊಂಡು ಹೋಗಬೇಕೆಂದು ಹೇಳಿದರೆ ಅವರನ್ನು ಹೇಗೆ ತಾನೇ ಕರೆದುಕೊಂಡು ಹೋಗಲು ಸಾಧ್ಯ ? ಶ್ರೀಮತಿ ನಾಗರತ್ನಮ್ಮನವರು ಒಂದು ಸಂದರ್ಭದಲ್ಲಿ ಇಲ್ಲಿ ವಿವರಗಳನ್ನು ಹೇಳುತ್ತಾ ಆರೋಗ್ಯ ಮಂತ್ರಿಗಳಿಗೆ ಒಂದು ಸಲಹೆ ಕೊಟ್ಟರು. ಹಳೆಯ ಕಾಲದಲ್ಲಿ ಆಸ್ಪತ್ರೆಗಳೇ ಇರಲಿಲ್ಲ. ಆಗ ಅವರೆಲ್ಲಾ ಆರೋಗ್ಯವಂತರಾಗಿರಲಿಲ್ಲವೇ ಎಂದು. ಆಗಿನ ಕಾಲದಲ್ಲಿ ಈಗ ಇರುವಂತೆ ಜನ ಆಸ್ಪತ್ರೆಗಳಲ್ಲಿ ಬಂದು ನಿಂತುಕೊಳ್ಳುತ್ತಿರಲೇ ಇರಲಿಲ್ಲ. ಇಂದು ಜನರೂ ಜಾಸ್ತಿಯಾಗಿದ್ದಾರೆ ಅದಕ್ಕೆ ತಕ್ಕಂತೆ ಆಸ್ಪತ್ರೆಗಳೂ ಜಾಸ್ತಿಯಾಗಿವೆ. ಆದರೆ ತಾಲ್ಲೂಕಾಮಟ್ಟದಲ್ಲಿರುವ ಆಸ್ಪತ್ರೆಗಳಲ್ಲಿ ಅನುಕೂಲಗಳು ಬಹಳ ಕಡಿಮೆ. ಆದರೆ ಬೆಂಗಳೂರು ಹಾಗೂ ಮೈಸೂರುಗಳಲ್ಲಿರುವ ದೊಡ್ಡ ಆಸ್ಪತ್ರೆಗಳಿಗೇ ಬಡ ಜನರನ್ನು ಕರೆದುಕೊಂಡು ಹೋಗಬೇಕೆಂದರೆ ಅದು ಹೇಗೆ ತಾನೇ ಸಾಧ್ಯವಾಗುತ್ತದೆ ? ಶ್ರೀಮಂತರಾಗಿರುವವರೇನೋ ದೊಡ್ಡ ಪಟ್ಟಣಗಳಿಗೆ ಹೋಗಿ ಚಿಕಿತ್ಸೆಗಳನ್ನು ಪಡೆಯುತ್ತಾರೆ. ಅವರಲ್ಲಿ ದುಡ್ಡಿದೆ ಹೇಗಾದರೂ ಖರ್ಚು ಮಾಡೋಣ ಎಂದು ಅವರು ಮಾಡಬಹುದು. ಬಡವರಿಗೆ ತೊಂದರೆಯಾಗುತ್ತದೆ. ಆದುದರಿಂದ ಕೊನೆಯ ಪಕ್ಷ ಇಷ್ಟು ಜನಸಂಖ್ಯೆಗೆ ಇಷ್ಟು ಆಸ್ಪತ್ರೆಗಳು ಇರಬೇಕು ಎನ್ನುವ ನಿಯಮವನ್ನು ಇಲ್ಲಿ ಇಟ್ಟುಕೊಳ್ಳುವುದು ಯೋಗ್ಯ. ಮತ್ತು ಇಲ್ಲಿರುವ ಅಧಿಕಾರಿಗಳಲ್ಲಿ ದಕ್ಷತೆ ಇಲ್ಲದೇ ಹೋದರೆ ತಾಲ್ಲೂಕಾ ಮಟ್ಟದಲ್ಲಿರುವ ಆಸ್ಪತ್ರೆಗಳಿಂದ ಏನೂ ಉಪಯೋಗವಾಗುವುದಿಲ್ಲ. ನಾನು ಮೊದಲೇ ಹೇಳಿದಂತೆ ಶೇಕಡಾ 72 ರಿಂದ 76 ರಷ್ಟು ರೋಗಿಗಳು ಅನಿಮಿಕ್ ರೋಗಿಗಳೇ ಆಗಿರುತ್ತಾರೆ. ಹೀಗಿರುವಾಗ ರೂರಲ್ ಲೈಫ್ ಹೇಗೆತಾನೇ ಅಭಿವೃದ್ಧಿ ಹೊಂದಲು ಸಾಧ್ಯ ಎನ್ನುವುದನ್ನು ಯಾರೂ ಆಲೋಚನೆಮಾಡಿದಂತೆ ಕಾಣುವುದಿಲ್ಲ. ಎಲ್ಲರೂ ಬೆಂಗಳೂರು ಹಾಗೂ ಮೈಸೂರಿಗೆ ಹೋಗುವುದಕ್ಕೆ ಹೇಗೆತಾನೇ ಸಾಧ್ಯ ! ತಾಲ್ಲೂಕಾ ಮಟ್ಟದಲ್ಲಿರುವ ಬಡ ಜನತೆಯ ಬಗ್ಗೆ ತೀವ್ರವಾಗಿ ಯೋಚನೆ ಮಾಡಬೇಕು. ತಾಲ್ಲೂಕಾ ಮಟ್ಟದ ಆಸ್ಪತ್ರೆಗಳಲ್ಲಿ ಆಕ್ಸಿಡೆಂಟು ಕೇಸುಗಳು ಬಂದರೆ, ಡೆಲಿವರಿ ಕೇಸುಗಳು ಬಂದರೆ ಅಥವಾ ಆರ್ಥೋ ಪೀಡಿಯಾಟ್ರಿಕ್ಸ್ ಕೇಸುಗಳು ಬಂದರೆ ಏನು ಮಾಡಬೇಕು ? ಇಂತಹ ತಾಲ್ಲೂಕಾ ಮಟ್ಟದ ಆಸ್ಪತ್ರೆಗಳಲ್ಲಿ ಕೊನೆಯ ಪಕ್ಷ ಮೈನರು ಆಪರೇಷನ್‌ಗಳನ್ನು ಮಾಡುವ ವ್ಯವಸ್ಥೆ ಇರಬೇಕು. ಇಲ್ಲದೇ ಇದ್ದರೆ ಈ ಒಂದು ಇಲಾಖೆಯಲ್ಲಿ ಒಬ್ಬರು ಡೈರೆಕ್ಟರು ಎಂದು ಇಟ್ಟುಕೊಂಡಿದ್ದೀರಿ, ಅವರಿಗೆ ಇಬ್ಬರು ಅಸಿಸ್ಟೆಂಟರುಗಳು ಎಂದು ಇಟ್ಟುಕೊಂಡಿದ್ದೀರಿ ಮತ್ತು ಇವರ ಕೈ ಕೆಳಗೆ ಸುಮಾರು 4-5 ಜೂನಿಯರು ಡಾಕ್ಟರು ಎಂದು ಇಟ್ಟುಕೊಂಡಿದ್ದೀರಿ ಮತ್ತು ಇವರ ಮೇಲೆ ಒಬ್ಬರು ಐ. ಎ. ಎಸ್. ಅಧಿಕಾರಿಗಳು ಮತ್ತು ಅವರ ಮೇಲೆ ಮಂತ್ರಿಗಳು ಎಂದು ಇಲಾಖೆಯಲ್ಲಿ ಆಡಳಿತವರ್ಗ ಮಾಡಿಕೊಂಡಿದ್ದಾರೆ. ಇಷ್ಟು ಜನರನ್ನು ನೇಮಕ ಮಾಡಿಕೊಂಡಿರುವುದರಲ್ಲಿ ಅರ್ಥವೇನು ? ಇಂತಹವರಿಂದ ದೇಶ ಸೇವೆ ಮಾಡಲು ಹೇಗೆ ತಾನೇ ಸಾಧ್ಯವಾದೀತು ? ನಾನು ಇದನ್ನು ಇಲ್ಲಿ ಕೇವಲ ಪ್ರಚಾರ ದೃಷ್ಟಿಯಿಂದ ಹೇಳುತ್ತಿಲ್ಲ. ಮಾನ್ಯ ಮಂತ್ರಿಗಳೇನೋ ಉತ್ತರ ಕೊಡುವಾಗ ಇವೆಲ್ಲಾ ಮಾಮೂಲಿ ಸಂಗತಿಗಳು ಎಂದು ಹೇಳಬಹುದು. ಅವರು ಆ ರೀತಿ ಉತ್ತರ ಹೇಳಬಾರದು ಎಂದು ಇಲ್ಲಿ ಇಷ್ಟು ವಿವರಗಳನ್ನು ನನ್ನ ಸ್ವಂತ ಅನುಭವದಿಂದ ಅವರಿಗೆ ಹೇಳುತ್ತಿದ್ದೇನೆ ಮತ್ತು ಅದನ್ನು ಅವರು ಒಂದು ನೈತಿಕ ದೃಷ್ಟಿಯಿಂದ ಮಾನವೀಯತೆಯ ದೃಷ್ಟಿಯಿಂದ ನೈಜ ಚಿತ್ರವನ್ನು ಅರಿತು ಇಲ್ಲಿ ಉತ್ತರ ಕೊಡಲಿ ಎಂದು ಇಲ್ಲಿ ಹೇಳುತ್ತಿದ್ದೇನೆ. ಈ ದೇಶದ ಜನರು ಹೇಗಾದರೂ ಅಭಿವೃದ್ಧಿ ಹೊಂದಲಿ ಎನ್ನುವ ಆಸೆಯಿಂದ ಇಂದು ಆಸ್ಪತ್ರೆಗಳಲ್ಲಿರುವ ಕೊರತೆಯ ಬಗ್ಗೆ, ಇರತಕ್ಕ ಅವಶ್ಯಕತೆಗಳ ಬಗ್ಗೆ ನನ್ನ ಅನುಭವದಿಂದ ಇಲ್ಲಿ ಹೇಳುತ್ತಿದ್ದೇನೆ ಮತ್ತು ಪ್ರಚಾರ ದೃಷ್ಟಿಯಿಂದ ಖಂಡಿತ ಇಲ್ಲಿ ನಾನು ಮಾತನಾಡುತ್ತಿಲ್ಲ.

ಇನ್ನು ಫ್ಯಾಮಿಲಿ ಪ್ಲಾನಿಂಗ್‌ನ ಬಗ್ಗೆ ನಾನು ಬಹಳ ಆಸ್ಥೆಯನ್ನು ವಹಿಸತಕ್ಕ ವ್ಯಕ್ತಿ. ನನಗೆ ಇದರ ಬಹಳ ಅಭಿಮಾನವೂ ಇದೆ. ಫ್ಯಾಮಿಲಿ ಪ್ಲಾನಿಂಗ್ ಬಗ್ಗೆ ಮೊದಲಿಗೆ ಸರಕಾರಿ ನೌಕರರ ಬಗ್ಗೆ ಒಂದು ರೆಸ್ಟ್ರಿಕ್ಷನ್ ಹಾಕಿದ್ದಾರೆ. Why there is restriction only on Government Officials ? ಇದಕ್ಕೆ ಮೊದಲು ಐವತ್ತು ಜನ ಹುಟ್ಟಿಸಿದ್ದರೆ ಅವರಿಗೇನೂ ಅಡ್ಡಿ ಇಲ್ಲ. ಸರಕಾರಿ ಕೆಲಸದಲ್ಲಿರುವವರು ಮೂರು ಮಕ್ಕಳಾದನಂತರ ಅವರಿಗೆ ಹೆಚ್ಚು ಮಕ್ಕಳಾದರೆ ಅವರಿಗೆ ಇನ್‌ಕ್ರಿಮೆಂಟು ಕೊಡುವುದಿಲ್ಲ ಎಂದು ಹೇಳಿದರೆ ಇದು ಯಾವ ನ್ಯಾಯ ?

Why there is restriction only on Government Officials? First they are Citizens of India and then only they are Government servants. ಆದರ್ಶ ಎನ್ನುವುದು ನಿಮ್ಮಿಂದ ಎಂದರೆ, ಸರಕಾರದಿಂದ ಮೊದಲು ಆಗಲಿ. First he is the citizen of India and then only he is Government Official.

Sri S. V. AGNIHORTI.—What is the position of Minister?

Sri K. PUTTASWAMY.—If this House votes for increments for Ministers, then increment will be stoped to the Minister if he gets one more child than three.

ಶ್ರೀ ಎಚ್. ಪುಟ್ಟದಾಸ.—ಎಷ್ಟು ಜನ ಫ್ಯಾಮಿಲಿ ಪ್ಲಾನಿಂಗ್ ನೆಪದಲ್ಲಿ ದುಡ್ಡು ಮಾಡಿ ಕೊಳ್ಳುತ್ತಿದ್ದಾರೆ ಎನ್ನುವುದನ್ನೇನಾದರೂ ಸರಕಾರ ಪರಿಶೀಲನೆ ಮಾಡಿ ನೋಡಿದ್ದಾರೆಯೇ? ಇದಕ್ಕೆ ಕಾರಣವೇನು ಎನ್ನುವುದರ ಅಂಕಿಅಂಶಗಳು ಏನಾದರೂ ಸರಕಾರದಲ್ಲಿವೆಯೇ? ಯಾವುದರ ಮೇಲೆ ನೀವು ಆಧಾರವಾಗಿಟ್ಟುಕೊಂಡು ಪ್ರಗತಿ ಸಾಧಿಸುತ್ತಿದ್ದೇವೆ ಎಂದು ಇಲ್ಲಿ ಹೇಳುತ್ತೀರಿ? ಸರಕಾರದವರೇನೋ 18 ರೂಪಾಯಿಗಳನ್ನು ಕೊಡುತ್ತಾರೆ ಮತ್ತು ಅದಕ್ಕೆ ಜನರು ವ್ಯಾಸಿಕ್ಟೆಮಿ ಆಪರೇಷನ್ನುಗಳನ್ನು ಮಾಡಿಸಿಕೊಳ್ಳುತ್ತಾರೆ ಎಂದು ಸರ್ಕಾರೀ ಆಜ್ಞೆ ಇದೆ. ಆದರೆ ಎಷ್ಟು ಕಡೆ ಆಪರೇಷನ್‌ಗಳಾದ ಮೇಲೆ ಅದನ್ನು ಯಾರಾದರೂ ಆಗಲಿ ಸರಿಯಾಗಿ ಫಾಲೋ ಅಪ್ ಮಾಡುತ್ತಿದ್ದಾರೆಯೇ? ಇದರಲ್ಲಿ ಯಾವ ರೀತಿಯಾಗಿ ಅವ್ಯವಹಾರಗಳು ಆಗುತ್ತಿವೆ ಎನ್ನುವ ದನ್ನು ಯಾರಾದರೂ ಪರಿಶೀಲನೆ ಮಾಡಿದ್ದಾರೆಯೇ? ಲೂಪುಗಳನ್ನು ಅಳವಡಿಸಬೇಕು ಎಂದು ಹೇಳುತ್ತಿದ್ದಾರೆ. ಆದರೆ ಲೂಪುಗಳನ್ನು ಅಳವಡಿಸಿದ ಮೇಲೆ ರಕ್ತಸ್ರಾವ (ಬ್ಲೀಡಿಂಗ್) ಆಗುತ್ತಿದ್ದರೆ ಅದನ್ನು ಫಾಲೋ ಅಪ್ ಮಾಡಿ ಅದಕ್ಕೇನಾದರೂ ಸರಿಯಾದ ಸಲಹೆ ಅಥವಾ ಚಿಕಿತ್ಸೆಗಳನ್ನು ಮಾಡುತ್ತಿದ್ದಾರೆಯೇ? ಇದರ ಕಡೆಗೆ ಯಾರೂ ಗಮನ ಕೊಡುತ್ತಿಲ್ಲ. ಈಗೇನೋ ಕಾಂಟ್ರಸೆಪ್ಟೀವ್ಸ್‌ಗಳು ಓಪನ್ ಮಾರ್ಕೆಟ್ಟಿನಲ್ಲಿ ಬೇಕಾದ ಹಾಗೆ ಸಿಗುತ್ತದೆ. ಎಷ್ಟೋ ಜನ ಅದನ್ನು ತೆಗೆದುಕೊಂಡು ಉಪಯೋಗಿಸುತ್ತಲೂ ಇದ್ದಾರೆ. ಇದರಲ್ಲಿ ಎಷ್ಟೋ ಜನ ಕಾಲೇಜುಗಳಲ್ಲಿರುವ ಅವಿವಾಹಿತ ಹುಡುಗರು ಇಂತಹ ಕಾಂಟ್ರಸೆಪ್ಟೀವ್ಸ್‌ಗಳನ್ನು ಕೊಂಡುಕೊಂಡು ನಮ್ಮ ನೈತಿಕ ಮಟ್ಟ ಹಾಳಾಗಿ ಹೋಗುತ್ತಿದೆ. ಇಂದು ಯುವಕರಲ್ಲಿ ಒಂದು ರೀತಿಯಾದ ಅನೈತಿಕ ಪ್ರವೃತ್ತಿ ಹೆಚ್ಚಲು ಇದರಿಂದ ಕಾರಣವಾಗಿದೆ. ಅದರಲ್ಲೂ ಎಷ್ಟೋ ಅನಾಹುತಗಳು ಆಗುತ್ತಿವೆ. ಜನ ಸಂಖ್ಯೆ ಇಂದು ದೇಶದಲ್ಲಿ ಹೆಚ್ಚಾಗುತ್ತಿದೆ ಇದಕ್ಕಾಗಿ ಫ್ಯಾಮಿಲಿ ಪ್ಲಾನಿಂಗ್ ಮಾಡಬೇಕು ಎನ್ನುವು ದನ್ನು ಎಲ್ಲರೂ ಒಪ್ಪಿಕೊಳ್ಳಬಹುದು. ಆದರೆ ಇಂದು ಇದರಿಂದ ಆಗುತ್ತಿರುವ ಪರಿಣಾಮಗಳನ್ನು ಯಾರಾದರೂ ಸ್ವಲ್ಪ ಯೋಚನೆ ಮಾಡಿದ್ದಾರೆಯೇ?

ಶ್ರೀ ಕೆ. ಎಂ. ತಮ್ಮಯ್ಯ (Kadur).—ಈಗ ಗಂಡಸರಿಗೂ ಲೂಪುಗಳನ್ನು ಅಳವಡಿಸು ತ್ತಾರೆ ಎಂದು ಹೇಳುತ್ತಾರೆ. ಅಲ್ಲದೆ ಇದರ ಬಗ್ಗೆ ಮದ್ರಾಸ್ ವಿಧಾನ ಸಭೆಯಲ್ಲಿ ಒಬ್ಬರು ಪ್ರಸ್ತಾಪ ಮಾಡಿದ್ದಾರೆ ಎಂದು ತಿಳಿದುಬಂದಿದೆ.

ಶ್ರೀ ಎಚ್. ಪುಟ್ಟದಾಸ.—ಇಲ್ಲಿ ಒಂದು ವಿಷಯ ಮಾತ್ರ ಹೇಳುತ್ತೇನೆ. ನನಗೆ ಇದರ ಬಗ್ಗೆ ಒಂದು ಅಭಿಮಾನವಿರುವುದರಿಂದ ಸರಕಾರಕ್ಕೆ ಹೇಳುತ್ತಿದ್ದೇನೆ. ನನ್ನ ಕ್ಷೇತ್ರದ ಹತ್ತಿರವೇ ಕೆಲವು ಡಾಕ್ಟರುಗಳು ಹಾಗೂ ಫ್ಯಾಮಿಲಿ ಪ್ಲಾನಿಂಗಿನಲ್ಲಿ ಆಸಕ್ತಿ ಇರುವ ಜನರಿಂದ ಕೂಡಿ ಎಷ್ಟೋ ಜನರಿಗೆ ಇದನ್ನು ಹೇಳಿಕೊಡಬೇಕು ಎನ್ನುವ ಒಂದು ಉದ್ದೇಶದಿಂದ ಮಾನ್ಯ ಮಂತ್ರಿಗಳು ಫ್ಯಾಮಿಲಿ ಪ್ಲಾನಿಂಗ್ ವೀಕ್ ಎನ್ನುವ ಒಂದು ಸಮಾರಂಭವನ್ನು ಏರ್ಪಾಡು ಮಾಡಿದ್ದರು. ಅಲ್ಲಿಗೆ ನನ್ನ ಕ್ಷೇತ್ರದ ಅಕ್ಕಪಕ್ಕದ ಊರುಗಳಿಂದಲೂ ಜನರು ಅಲ್ಲಿಗೆ ಬಂದಿದ್ದರು. ನಾನು ಆ ಸಮಾರಂಭ ನಡೆಯುವ ಪಕ್ಷದ ಕ್ಷೇತ್ರದ ಎಂ.ಎಲ್.ಎ. ಆಗಿದ್ದರೂ ಕೂಡ ನನಗೆ ಅಲ್ಲಿಗೆ ಬರಲು ಹೇಳದೇ ಇರುವುದು ನೋಡಿ ತುಂಬಾ ದುಃಖವಾಯಿತು. ಆ ಸಮಾರಂಭಕ್ಕೆ ನನ್ನ ಪಕ್ಕದ ಕ್ಷೇತ್ರದಲ್ಲಿದ್ದ ಒಬ್ಬರು ಕಾಂಗ್ರೆಸ್ಸು ಎಂ.ಎಲ್.ಎ. ರವರನ್ನು ಕರೆದು ಅಂದಿನ ಸಮಾರಂಭದ ಅಧ್ಯಕ್ಷರನ್ನಾಗಿ ಅಲ್ಲಿ ಫ್ಯಾಮಿಲಿ ಪ್ಲಾನಿಂಗ್ ವೀಕ್ ಮಾಡಿದರು. ಫ್ಯಾಮಿಲಿ ಪ್ಲಾನಿಂಗ್‌ನಲ್ಲಿ ಆಸಕ್ತಿ ಇರುವವನನ್ನು ಅಲ್ಲಿಗೆ ಹೇಳಿ ಕಳುಹಿಸದೆ ಹೋದುದು ನೋಡಿ ತುಂಬಾ ದುಃಖವಾಯಿತು. ನಾನು ಆ ದಿವಸ ನನ್ನ ಊರಿನಲ್ಲೇ ಇದೆ.

Sri K. PUTTASWAMY.—I did not like to disturb you from your Studies.

ಶ್ರೀ ಎಚ್. ಪುಟ್ಟದಾಸ.—ಫ್ಯಾಮಿಲಿ ಪ್ಲಾನಿಂಗ್‌ನಲ್ಲಿ ಇಂದು 20-30 ವರ್ಷದ ಯುವಕರುಗಳು ಹಾಳಾಗಿ ಅವರ ನೈತಿಕ ಮಟ್ಟವನ್ನು ಹಾಳುಮಾಡಿಕೊಳ್ಳುತ್ತಿದ್ದಾರೆ. ಇದನ್ನು ನೋಡಿದರೆ ಸರಕಾರ ಯಾವ ರೀತಿಯಾಗಿ ಅವರ ನೀತಿ ಅನುಸರಿಸುತ್ತಿದ್ದಾರೆನ್ನುವುದು ಗೊತ್ತಾಗುತ್ತದೆ.

ಇಷ್ಟನ್ನು ಹೇಳಿ ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟುದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಎಂ. ಇದಿನಬ್ಬ (ಮಂಗಳೂರು-II).—ಮಾನ್ಯ ಅಧ್ಯಕ್ಷರೇ, ಆರೋಗ್ಯ ಸಚಿವರು ಮಂಡಿಸಿರುವ ಬೇಡಿಕೆಗಳನ್ನು ಸ್ವಾಗತಿಸುತ್ತಾ ಒಂದೆರಡು ಮಾತುಗಳನ್ನು ಇಲ್ಲಿ ಹೇಳಬಯಸುತ್ತೇನೆ.

ಸ್ವಾತಂತ್ರ್ಯ ಪಡೆಯುವುದಕ್ಕೆ ಮೊದಲು ಎಂದರೆ ಇಪ್ಪತ್ತು ವರ್ಷಕ್ಕೆ ಮುಂಚೆ ನಮ್ಮ ದೇಶದ ಜನರ ಆರೋಗ್ಯ ಸ್ಥಿತಿ ಹೇಗಿತ್ತು ಎನ್ನುವುದನ್ನು ಸ್ವಲ್ಪ ಚಿಂತನೆ ಮಾಡಿ ನೋಡಿದರೆ ಅನೇಕ ವಿಚಾರಗಳು ಗೋಚರವಾಗುತ್ತವೆ. ಆರೋಗ್ಯದ ಮಟ್ಟಿಗೆ ನಮ್ಮ ದೇಶದಲ್ಲಿ ಅನೇಕ ಪ್ರಗತಿಯುತವಾದ ಕೆಲಸಗಳಾಗಿವೆ. ಕನ್ನಡ ದೇಶದ ಜನರ ಪ್ರಗತಿಗಾಗಿ ಇಪ್ಪತ್ತು ವರ್ಷಗಳಿಂದ ಅನೇಕ ಪ್ರಗತಿದಾಯಕವಾದ ಕೆಲಸಗಳು ಮಾಡುತ್ತಿರುವುದು ನಮಗೆ ಕಾಣುತ್ತಿವೆ. ಕನ್ನಡ ನಾಡಿನ ಬೇರೆ ಬೇರೆ ಭಾಗಗಳಲ್ಲಿ ಹಾಗೂ ನಗರಗಳಲ್ಲಿ ಅನೇಕ ಮುಖ್ಯವಾದ ಕೆಲಸಗಳು ನಡೆಯುತ್ತಿವೆ. ಇದರಲ್ಲಿ ಮುಖ್ಯವಾಗಿ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ವಿಚಾರವನ್ನು ಮಾತ್ರ ಇಲ್ಲಿ ಹೇಳಬಯಸುತ್ತೇನೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಂಗಳೂರು ಬಹಳ ದೊಡ್ಡ ಊರು. ಮಂಗಳೂರಿನಲ್ಲಿರುವ ಆಸ್ಪತ್ರೆ ಬಹಳ ದೊಡ್ಡದು. 20 ವರ್ಷದ ಹಿಂದೆ ನಮ್ಮ ಕಡೆಯಲ್ಲಿ ಒಂದು ಆಸ್ಪತ್ರೆಯಲ್ಲಿ ಹತ್ತಿಪ್ಪತ್ತು ಜನ ಕೂಡಲು ಮಾತ್ರ ಜಾಗ ಇತ್ತು. ಇಂದು ಮಂಗಳೂರಿನಲ್ಲಿ ನೋಡುವಾಗ ಎರಡು ದೊಡ್ಡ ಆಸ್ಪತ್ರೆಗಳಾಗಿ ಮತ್ತು ಜಿಲ್ಲೆಯಲ್ಲಿ ಅನೇಕ ಪಬ್ಲಿಕ್ ಹೆಲ್ತ್ ಇನ್‌ಸ್ಟಿಟ್ಯೂಷನ್ ಆಗಿರುವುದು ಕಣ್ಣಿಗೆ ಕಾಣಿಸುವಂತೆ ಇವೆ. ಇದರಿಂದ ಎಷ್ಟು ಪ್ರಗತಿಯಾಗಿದೆ ಎನ್ನುವುದು ಕಾಣುತ್ತದೆ. ಇದರಲ್ಲಿ ಮುಖ್ಯವಾಗಿ ನಾನು ಇಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಬಗ್ಗೆ ಮಾತ್ರ ಹೇಳುತ್ತೇನೆ. ಇಷ್ಟು ಪ್ರಗತಿಯಾಗಿದೆ ಎಂದು ಹೇಳಿದರೂ ಕೂಡ ಕೆಲವು ಲೋಪದೋಷಗಳು ಇವೆ. ಆದುದರಿಂದ ಇದರಲ್ಲಿ ಸುಧಾರಣೆಯಾಗಬೇಕು ಎಂದು ಸಲಹೆ ಕೊಡಲು ಅಪೇಕ್ಷೆ ಪಡುತ್ತೇನೆ.

5-30 P.M.

ಇನ್ನು ಮಂಗಳೂರಿನಲ್ಲಿ ಲೇಡಿ ಗೋಶನ್ ಹಾಸ್ಪಿಟಲ್ ಎಂಬ ಹೆಸರಿನ ಒಂದು ಹೆಂಗಸರ ಆಸ್ಪತ್ರೆ ಇದೆ. ವೆನ್‌ಲಾಕ್ ಆಸ್ಪತ್ರೆ ಗಂಡಸರದ್ದು ಮತ್ತೊಂದಿದೆ. ಬ್ರಿಟಿಸರ ಕಾಲದಲ್ಲಿ ಈ ಆಸ್ಪತ್ರೆ ಪ್ರಾರಂಭವಾಗಿ ಈ ಹೆಸರು ಇಡಲಾಗಿದೆ. ಬ್ರಿಟಿಷರ ಕಾಲದಲ್ಲಿಯು ಈ ಹೆಸರು ಅಷ್ಟು ಚೆನ್ನಾಗಿ ಇಲ್ಲ. ಆದುದರಿಂದ ಎಲ್ಲ ಜನರಿಗೆ ಒಪ್ಪಿಗೆಯಾಗುವ ಅನುಕೂಲವಾದ ಒಂದು ಹೆಸರನ್ನು ಈ ಆಸ್ಪತ್ರೆಗೆ ಇಡುವುದು ಒಳ್ಳೆಯದು. ಬ್ರಿಟಿಷರು ಇಟ್ಟ ಹೆಸರನ್ನು ತೆಗೆದು ಹಾಕಿ ಒಂದು ಹೊಸ ಹೆಸರು ಇಡಬೇಕು ಎಂದು ಸೂಚಿಸುತ್ತೇನೆ.

ದಕ್ಷಿಣ ಕನ್ನಡ ಜಿಲ್ಲೆಯ ಆಸ್ಪತ್ರೆಗಳಲ್ಲಿ ಯಾವ ರೋಗಿ ಬಂದರೂ ಆಸ್ಪತ್ರೆಯಲ್ಲಿ ಅನೇಕ ಬಾರಿ ಔಷಧವಿರುವುದಿಲ್ಲ. ಈಗ ಮಂಗಳೂರಿನಲ್ಲಿ ಮೆಡಿಕಲ್ ಕಾಲೇಜು ಇದೆ. ಬೇಕಾದಷ್ಟು ಸರ್ಜನರು ಡಾಕ್ಟರರು ಇದ್ದಾರೆ. ದೊಡ್ಡ ರೋಗ ಬಂದರೂ ಕೂಡ ಚಿಕಿತ್ಸೆ ಪಡೆಯಲು ಬೊಂಬಾಯಿ ಮದ್ರಾಸು ಬೆಂಗಳೂರಿಗೆ ಹೋಗಬೇಕಾಗಿಲ್ಲ. ಮಂಗಳೂರಿನಲ್ಲಿಯೇ ಚಿಕಿತ್ಸೆ ಪಡೆಯಲು ಎಲ್ಲ ಅನುಕೂಲತೆ ಇದೆ. ಇದು ಪ್ರಗತಿ ಚಿಹ್ನೆ ಅಲ್ಲವೇನು ? ಇದನ್ನು ಯಾರೂ ಮರೆಯಲು ಸಾಧ್ಯವಿಲ್ಲ. ಒಟ್ಟಿನಲ್ಲಿ ಆರೋಗ್ಯದ ದೃಷ್ಟಿಯಿಂದ ಪ್ರಗತಿಯಾಗಿದೆ. ಒಂದು ವೇಳೆ ಲೋಪದೋಷಗಳು ಇದ್ದರೆ ಹೇಳಬೇಕು ಮತ್ತು ಅವುಗಳ ನಿವಾರಣೆಗೆ ಸೂಕ್ತ ಸಲಹೆ ಮಾಡಬೇಕು.

ಈ ಸಂದರ್ಭದಲ್ಲಿ ಒಂದು ವಿಷಯ ಹೇಳಲು ಇಷ್ಟ ಪಡುತ್ತೇನೆ. ಮೆಡಿಕಲ್ ಕಾಲೇಜು ಖಾಸಗಿಯವರ ಕೈಯಲ್ಲಿ ಹೋಗುತ್ತಾ ಇವೆ. ಖಾಸಗಿಯವರು ನಡೆಸತಕ್ಕಂಥ ಕಾಲೇಜುಗಳಲ್ಲಿ ಶುಲ್ಕ ತೆಗೆದುಕೊಳ್ಳುತ್ತಾರೆ. ಇದರಿಂದ ಏನಾಗಿದೆ ಅಂದರೆ ಶುಲ್ಕ ಕೊಡತಕ್ಕ ಶಕ್ತಿ ಇರುವ ಶ್ರೀಮಂತರ ಮಕ್ಕಳು ಮೆಡಿಕಲ್ ಕಾಲೇಜಿನಲ್ಲಿ ಶಿಕ್ಷಣ ಪಡೆದು ಡಾಕ್ಟರರು ಆಗುತ್ತಾರೆ. ನಮ್ಮ ದೇಶದಲ್ಲಿ ನೂರಕ್ಕೆ ಎಂಭತ್ತು ಭಾಗ ಇರತಕ್ಕ ಹಳ್ಳಿಗಾಡಿನ ಪ್ರದೇಶದ ಬಡವರ ಮಕ್ಕಳಿಗೆ ಮೆಡಿಕಲ್ ಕಾಲೇಜಿಕ್ಕೆ ಹೋಗಿ ಶುಲ್ಕ ಕೊಟ್ಟು ಶಿಕ್ಷಣ ಪಡೆದು ಡಾಕ್ಟರ ಆಗುವ ಪರಿಸ್ಥಿತಿ ಇರುವುದಿಲ್ಲ. ಆದುದರಿಂದ ಈ ಕಡೆ ಸರಕಾರ ಗಮನ ಕೊಟ್ಟು ಗ್ರಾಮಾಂತರ ಪ್ರದೇಶದ ಬಡವರ ಮಕ್ಕಳು ಡಾಕ್ಟರ ಆಗುವ ಹಾಗೆ ಅನುಕೂಲತೆ ಮತ್ತು ಸೌಲಭ್ಯ ಒದಗಿಸಲು ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳುತ್ತೇನೆ.

ಮೆಡಿಕಲ್ ಕಾಲೇಜಿಗೆ ಪ್ರವೇಶ ಕೊಡುವ ವಿಚಾರದಲ್ಲಿ ಎಷ್ಟು ಮಾರ್ಕ್ಸ್ ಅಂದರೆ ಅಂಕ ಪಡೆಯುವ ವಿಚಾರದಲ್ಲಿ ಒಂದು ಸೂಚನೆ ಮಾಡುತ್ತೇನೆ. ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳಿಗೆ 80 ಪರ್ಸೆಂಟ್ ಮೇಲೆ ಮಾರ್ಕ್ಸ್ ಪಡೆದು ಕಾಲೇಜಿಕ್ಕೆ ಪ್ರವೇಶ ಪಡೆಯುವುದು ತುಂಬಾ ಅನನು ಕೂಲತೆ ಉಂಟು ಮಾಡಿದೆ. ಆದುದರಿಂದ ಗ್ರಾಮಾಂತರ ಪ್ರದೇಶದ ಜನರ ವಿಚಾರದಲ್ಲಿ ಈ ಅಂಕ ಮಟ್ಟಿಗೆ ನಡಿಲು ಧೋರಣೆ ತಾಳಿ ಹಳ್ಳಿಗಳ ಜನರಿಗೆ ಹೆಚ್ಚೆಚ್ಚು ಸ್ಥಾನ ಸಿಕ್ಕುವಂತೆ ಮಾಡಬೇಕು ಎಂದು ಬಹು ವಿನಯ ಪೂರ್ವಕವಾಗಿ ಸಲಹೆ ಮಾಡಲು ಅಪೇಕ್ಷೆ ಪಡುತ್ತೇನೆ.

ಗ್ರಾಮಾಂತರ ಪ್ರದೇಶದಲ್ಲಿರುವ ಆಸ್ಪತ್ರೆಗಳಲ್ಲಿ ಡಾಕ್ಟರರು ಕೆಲಸ ಮಾಡುವುದಕ್ಕೆ ಯಾರೂ ಬರಲು ಒಪ್ಪುವುದಿಲ್ಲ. ಗ್ರಾಮಾಂತರ ಪ್ರದೇಶದಲ್ಲಿ ಜನಗಳು ಹೆಚ್ಚು ಇದ್ದಾರೆ. ಅವರು ಕಷ್ಟದಲ್ಲಿದ್ದಾರೆ. ಅಲ್ಲಿ ಡಾಕ್ಟರರು ಬೇಕು. ಆದರೆ ಈ ಕಾಲದಲ್ಲಿ ಹಳ್ಳಿಗಳಿಗೆ ಹೋಗಲು ಯಾರು ಒಪ್ಪುವುದಿಲ್ಲ. ಆದುದರಿಂದ ಮೆಡಿಕಲ್ ಕಾಲೇಜಿಕ್ಕೆ ಅಡ್ಮಿಷನ್ ಕೊಡುವಾಗ್ಗೆ ಕಡ್ಡಾಯವಾಗಿ ಒಂದು ಕಂಡೀಷನ್ ಹಾಕಿ ಮೆಡಿಕಲ್ ಕೋರ್ಸು ಮುಗಿದ ಮೇಲೆ 3 ವರುಷ ಅಥವಾ 5 ವರುಷ ಹಳ್ಳಿಗಳಲ್ಲಿ ಕೆಲಸ ಮಾಡಬೇಕು ಎಂದು ಕಡ್ಡಾಯವಾಗಿ ಮಾಡಿದರೆ ಗ್ರಾಮಾಂತರ ಪ್ರದೇಶದಲ್ಲಿರುವ ಆಸ್ಪತ್ರೆಗಳಲ್ಲಿ ಕೆಲಸ ಮಾಡಲು ಡಾಕ್ಟರರು ಸಿಕ್ಕಬಹುದು, ಇದನ್ನು ಏತಕ್ಕೆ ಹೇಳುತ್ತೇನೆ ಅಂದರೆ ಇಂದು ಹಳ್ಳಿಗಳಲ್ಲಿ ಡಾಕ್ಟರರು ಇಲ್ಲ, ಹೋಗುವುದಕ್ಕೆ ಯಾರೂ ಒಪ್ಪುವುದಿಲ್ಲ. ಆದುದರಿಂದ ಸರಕಾರ ಇದನ್ನು ಗಮನಿಸಬೇಕು ಎಂದು ಹೇಳುತ್ತೇನೆ.

ನನ್ನ ಕ್ಷೇತ್ರವಾದ ಮಂಗಳೂರು ಎರಡನೇ ಕ್ಷೇತ್ರದಲ್ಲಿ ಅನೇಕ ರೂರಲ್ ಆಸ್ಪತ್ರೆಗಳನ್ನೂ, ಒಂದು ಹೆಲ್ತ್ ಯೂನಿಟ್‌ಗಳನ್ನು ಮಾಡುವುದು ಅಗತ್ಯವಾಗಿದೆ. ಕರಾವಳಿ ಪ್ರದೇಶದಲ್ಲಿರುವ ಬೆಂಗ್ರೆ ಮತ್ತು ಬೊಳ್ಳೂರು ಬೆಂಗರೆ ಊರಿನಲ್ಲಿ ಔಷಧಿ ಸಿಕ್ಕುವುದಿಲ್ಲ ಅದಕ್ಕೆ ಯಾವ ಏರ್ಪಾಡೂ ಇಲ್ಲ. ಇಲ್ಲಿ ಆಸ್ಪತ್ರೆ ಸೂಲಗಿತ್ತಿ ಇಲ್ಲ. ಬಜಾರ್, ಜಪ್ಪಿನಮೊಗ್ರು, ಗ್ರಾಮಗಳಿಗೆ ಒಂದು ಆಸ್ಪತ್ರೆ ಬೇಕು. ಅದೇ ರೀತಿ ಪಾವೂರು ಹರೇಕಳ ಬೊಳಿಯಾರು, ಕೋಟೆಕಾರ್ ಗ್ರಾಮಗಳಿಗೂ ಆಸ್ಪತ್ರೆಯ ಸೌಲಭ್ಯ ಬೇಕು. ಅಲ್ಲದೆ ಬೆಂಗರೆ, ಬೋಳೂರು ಬೆಂಗ್ರೆಗಳಲ್ಲಿ ಔಷಧಿಗೆ ಯಾವ ಏರ್ಪಾಡೂ ಇಲ್ಲ. ಇಲ್ಲಿಗೆ ಕೂಡ ಆಸ್ಪತ್ರೆಯನ್ನು ಒದಗಿಸಿ ಕೊಡಬೇಕು. ಈ ಗ್ರಾಮಗಳು ಪಟ್ಟಣಕ್ಕೆ ದೂರ ಇರುವುದರಿಂದ ಯಾವ ಸವಲತ್ತು ಇರುವುದಿಲ್ಲ. ಆದುದರಿಂದ ಇಲ್ಲಿ ರೂರಲ್ ಆಸ್ಪತ್ರೆ ಮಾಡಿ ಗ್ರಾಮಾಂತರ ಪ್ರದೇಶದ ಜನರಿಗೆ ಉಪಕಾರವಾಗುವ ಹಾಗೆ ಮಾಡಬೇಕೆಂದು ಹೇಳಲು ಅಪೇಕ್ಷೆ ಪಡುತ್ತೇನೆ.

ಮುಲ್ಕಿ ಆಸ್ಪತ್ರೆಯನ್ನು ಮಂಗಳೂರು ತಾಲ್ಲೂಕ್ ಬೋರ್ಡು ನಡೆಸುತ್ತಿದೆ. ಈ ತಾಲ್ಲೂಕು ಬೋರ್ಡಿಗೆ ಈ ಆಸ್ಪತ್ರೆ ಇಟ್ಟುಕೊಂಡು ಕೆಲಸ ಮಾಡಲಕ್ಕೆ ಕಷ್ಟವಾಗಿದೆ. ಆದುದರಿಂದ ಮುಲ್ಕಿ ಆಸ್ಪತ್ರೆಯನ್ನು ಸರ್ಕಾರದವರೇ ವಹಿಸಿಕೊಂಡು ನಡೆಸಿದರೆ ಜನರಿಗೆ ಒಳ್ಳೆಯದಾಗುತ್ತದೆ, ಮಂಗಳೂರು ಅಭಿವೃದ್ಧಿ ಬೋರ್ಡಿಗೆ ಉಪಕಾರ ಮಾಡಿದ ಹಾಗೆ ಆಗುತ್ತದೆ. ಅಲ್ಲದೆ ಆ ಹಣ ಬೇರೆ ಅಭಿವೃದ್ಧಿಗೆ ಖರ್ಚು ಮಾಡಬಹುದು ಎಂದು ಸಲಹೆ ಕೂಡ ಮಾಡಲು ಅಪೇಕ್ಷೆ ಪಡುತ್ತೇನೆ.

ಗ್ರಾಮಾಂತರ ಪ್ರದೇಶದಲ್ಲಿ ಸೂಲಗಿತ್ತಿ ಇರತಕ್ಕ ವ್ಯವಸ್ಥೆ ಇಲ್ಲ. ಆದುದರಿಂದ ಗ್ರಾಮಾಂತರ ಪ್ರದೇಶಕ್ಕೆ ಸೂಲಗಿತ್ತಿ ಕೊಡಬೇಕು. ಎರಡು ಸಾವಿರ ಮೂರು ಸಾವಿರ ಜನ ವಸತಿ ಇರತಕ್ಕ ಗ್ರಾಮಕ್ಕೆ ಸೂಲಗಿತ್ತಿ ಇರತಕ್ಕ ವ್ಯವಸ್ಥೆ ಮಾಡಿದರೆ ಜನರಿಗೆ ತುಂಬಾ ಅನುಕೂಲವಾಗುತ್ತದೆ.

ಮಂಗಳೂರು ನಗರದಲ್ಲಿಯ ಲೇಡಿ ಗೋಶನ್ ಆಸ್ಪತ್ರೆ ಮತ್ತು ವೆನ್‌ಲಾಕ್ ಆಸ್ಪತ್ರೆಗಳಲ್ಲಿ ಸರಿಯಾದ ಮೇಲ್ವಿಚಾರಣೆ ಇಲ್ಲದೆ ಅನ್ಯಾಯವಾಗುತ್ತಿದೆ. ಬಡವರು ಆಸ್ಪತ್ರೆಗೆ ಬಂದರೆ ಅವರಿಗೆ ಬೆಡ್ ಸಿಕ್ಕುವುದಿಲ್ಲ. ಈ ದೂರು ಬಂದಿವೆ. ಕೇರಳದ ಕಡೆಯಿಂದ ಬರತಕ್ಕಂಥ ಜನರಿಗೆ ಬೆಡ್ ಸಿಕ್ಕುತ್ತದೆ ಆದರೆ ದಕ್ಷಿಣ ಕನ್ನಡ ಜಿಲ್ಲೆಯವರಿಗೆ ಬೆಡ್ ಸಿಕ್ಕುವುದಿಲ್ಲ. ಇದಕ್ಕೆ ಗಮನ ಕೊಟ್ಟು ರೋಗಿಗಳಿಗೆ ಬೆಡ್ಡು ಸಿಕ್ಕುವ ಸವಲತ್ತು ಒದಗಿಸಬೇಕು ಎಂದು ಅತಿ ವಿನಯದಿಂದ ಸರಕಾರಕ್ಕೆ ಕೇಳಿಕೊಳ್ಳುತ್ತೇನೆ.

ಪುತ್ತೂರು ಆಸ್ಪತ್ರೆಯಲ್ಲಿ ಸರಿಯಾಗಿ ನೋಡಿಕೊಳ್ಳುವುದಿಲ್ಲ. ಎಲ್ಲದಕ್ಕೂ ದುಡ್ಡು ಕೊಡ ಬೇಕಾಗುತ್ತದೆ. ಆಸ್ಪತ್ರೆಗಳಿಗೆ ಒಂದೊಂದು ಅಡ್ವೈಜರಿ ಕಮಿಟಿ ಇದೆ. ಈ ಅಡ್ವೈಜರಿ ಕಮಿಟಿಯಲ್ಲಿ ತಾಲ್ಲೂಕಿನ ಎಂ.ಎಲ್.ಎ. ಮತ್ತು ತಾಲ್ಲೂಕು ಬೋರ್ಡ್ ಮೆಂಬರ್‌ಗಳನ್ನು ಸೇರಿಸಬೇಕು. ಮಂತ್ರಿಗಳು ಒಳ್ಳೆಯ ಅಭಿಪ್ರಾಯ ಇಟ್ಟುಕೊಂಡು ಕೆಲಸ ಮಾಡಿದರೂ ಕೂಡ ದೇವರು ಕೊಟ್ಟರೂ ಪೂಜಾರಿ ಬಿಡ ಎನ್ನುವ ಹಾಗೆ ಆಗಿದೆ. ಇದರಿಂದ ಕೈಗೆ ಬಂದ ತುತ್ತು ಬಾಯಿಗೆ ಬರುವುದಿಲ್ಲ. ಆದುದರಿಂದ ಕೆಳ ದರ್ಜೆಯ ಅಧಿಕಾರಿಗಳ ಬಗ್ಗೆ ಗಮನ ಇರಬೇಕು. ಬಲವಾದ ಮೇಲ್ತನಿಖೆ ಇರಬೇಕು.

(ಶ್ರೀ ಬಿ. ಎಂ. ಇದಿನಬ್ಬ)

ಇನ್ನು ಲೇಡಿ ಗೋಷನ್ ಆಸ್ಪತ್ರೆಯಲ್ಲಿ ಶುಚಿತ್ವ ಇಲ್ಲ, ವೆನ್‌ಲಾಕ್ ಆಸ್ಪತ್ರೆಯಲ್ಲಿ ಶುಚಿತ್ವ ಇಲ್ಲ. ಎಲ್ಲಿ ನೋಡಿದರೂ ಕೊಳಕು ಇರುತ್ತದೆ. ಇದನ್ನು ನೋಡಿದರೆ ಹೆದರಿಕೆ ಬರುತ್ತದೆ. ಈ ರೀತಿ ಇರಬಾರದು. ಡಾಕ್ಟರರು ನರ್ಸುಗಳು ದಯಾಪೂರಿತರಾಗಿರಬೇಕು. ಅವರು ದಯಾ ಮೂರ್ತಿಯಾಗಬೇಕು. ಇವರ ಮಾತಿನ ಸೌಜನ್ಯದಿಂದಲೇ ಅರ್ಧರೋಗ ಮಾಯವಾಗಬೇಕು. ಇದರಿಂದ ಎಷ್ಟು ಒಳ್ಳೆಯದಾಗುತ್ತದೆ ಎನ್ನುವುದನ್ನು ಡಾಕ್ಟರರು ನರ್ಸುಗಳು ಗಮನಿಸಬೇಕು. ಮಂಗಳೂರು ಆಸ್ಪತ್ರೆಗಳಲ್ಲಿ ಕೇರಳದಿಂದ ಬಂದಿರತಕ್ಕ ನರ್ಸುಗಳು ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ. ಕೆಲವು ಸಂದರ್ಭದಲ್ಲಿ ನರ್ಸುಗಳು ಮೋಜಿನಲ್ಲಿ ಇರುತ್ತಾರೆ. ಆದರೆ ಜನ ಬಂದಾಗ ರೋಗಿಗಳು ಬಂದಾಗ್ಗೆ ಹಾಗೆ ಮಾಡುವುದು ಸರಿಯಲ್ಲ. ಆದುದರಿಂದ ಆಸ್ಪತ್ರೆಗಳಲ್ಲಿ ಕೆಲಸ ಯಾವ ರೀತಿ ನಡೆಯುತ್ತಿದೆ ಎಂಬುದನ್ನು ತಿಳಿದುಕೊಳ್ಳಲು ಅನಿರೀಕ್ಷಿತ ಭೇಟಿ ಕೊಡುವುದು ಒಳ್ಳೆಯದು. ನಮ್ಮ ಆರೋಗ್ಯ ಮಂತ್ರಿಗಳು ಆಸ್ಪತ್ರೆಗಳಿಗೆ ಈ ರೀತಿ ಭೇಟಿ ಕೊಟ್ಟಿರುವುದನ್ನು ಪತ್ರಿಕೆಗಳಲ್ಲಿ ಓದಿದ್ದೇವೆ. ಅದೇ ರೀತಿಯಾಗಿ ಮಂಗಳೂರು ಆಸ್ಪತ್ರೆಗೆ ಅವರು ವೇಷ ಬದಲಿಸಿಯಾದರೂ ಅನಿರೀಕ್ಷಿತ ಭೇಟಿ ಕೊಬೇಕೆಂದು ಕೇಳಿಕೊಳ್ಳುತ್ತೇನೆ. ಅವರು ಒಳ್ಳೇ ಕೆಲಸ ಮಾಡಿದರೂ ಕೂಡ ಕೆಲವು ಕಡೆ ನಡೆಯುವ ಅನ್ಯಾಯದಿಂದ ನಿಮ್ಮ ಹೆಸರು ಹಾಳಾಗುತ್ತದೆ, ಸರಕಾರದ ಹೆಸರು ಹಾಳಾಗುತ್ತದೆ. ಒಳ್ಳೇ ಕೆಲಸ ಮಾಡಬೇಕು ಬಡವರ ಉದ್ಧಾರವಾಗಬೇಕು ಎನ್ನುವುದಕ್ಕೆ ಈ ರೀತಿ ಅನಿರೀಕ್ಷಿತ ಭೇಟಿಯಿಂದ ಭಯಬರಬೇಕು. ಆದುದರಿಂದ ತಾವು ಸಂದರ್ಶನ ಕೊಡಬೇಕೆಂದು ಹೇಳಲು ಅಪೇಕ್ಷೆ ಪಡುತ್ತೇನೆ.

ಕರಾವಳಿ ಪ್ರದೇಶದಲ್ಲಿ ಫೈಲೇರಿಯಾ ರೋಗ ಇದೆ. ಈ ಆನೇಕಾಲು ರೋಗಕ್ಕೆ ಔಷಧಿ ಕೊಡಬೇಕು. ಹಾಗು ಇದನ್ನು ನಿರ್ಮೂಲನ ಮಾಡಬೇಕು. ಈ ಆನೇಕಾಲು ರೋಗ ಕರಾವಳಿ ಪ್ರದೇಶಕ್ಕೆ ಬಂದು ಹೋಗುವ ಜನರ ಮೂಲಕ ಬೇರೆ ಕಡೆ ಹಬ್ಬುವುದಕ್ಕೆ ಅವಕಾಶವಿದೆ. ಇದು ಒಂದು ಅಂಟು ರೋಗವಾಗಿದೆ. ಇದನ್ನು ತಡೆಗಟ್ಟುವುದಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳುವ ವ್ಯವಸ್ಥೆ ಮಾಡಬೇಕು ಎಂದು ಸೂಚಿಸುತ್ತೇನೆ.

ಬಂಟವಾಳದ ಮಾನ್ಯ ಸದಸ್ಯರು ಬಂಟವಾಳದಲ್ಲಿ ಒಂದು ಆಸ್ಪತ್ರೆ ಆಗಬೇಕು, 12 ವರ್ಷದಿಂದ ಆಗಿಲ್ಲ ಎಂದು ಹೇಳುವ ಮಾತನ್ನು ಕೇಳುತ್ತೇವೆ. ಇದು ನಿಜವಾಗಿ ಶೋಚನೀಯ. ಬಂಟವಾಳ ಬಹಳ ದೊಡ್ಡ ಪೇಟೆ. ಅಲ್ಲಿ ಒಂದು ಉತ್ತಮ ಆಸ್ಪತ್ರೆ ಇಲ್ಲವೆಂದರೆ ಬಹಳ ದುಃಖಮಯವಾದ ವಿಚಾರ. ಈ ಕಡೆ ಕೂಡ ನಮ್ಮ ಮಾನ್ಯ ಸಚಿವರು ಗಮನ ಕೊಡಬೇಕೆಂದು ನಾನು ಹೇಳಲಿಕ್ಕೆ ಅಪೇಕ್ಷೆ ಪಡುತ್ತೇನೆ.

ಆಯುರ್ವೇದದಲ್ಲಿ ಕೆಲಸ ಮಾಡತಕ್ಕ ಡಾಕ್ಟರುಗಳಿಗೆ ಹೆಚ್ಚಿನ ಮಾನ್ಯತೆ ಕೊಡಬೇಕು. ಇವೊತ್ತು ಅಲೋಪತಿ ವೈದ್ಯ ಪದ್ಧತಿ ಬಂದಿದೆ. ಅದಕ್ಕೆ ಮೊದಲಿನಿಂದಲೂ ಆಯುರ್ವೇದ ಪದ್ಧತಿ ನಮ್ಮಲ್ಲಿದ್ದು ಅನೇಕ ರೋಗಗಳನ್ನು ನಿವಾರಣೆ ಮಾಡುತ್ತಿದ್ದಾರೆ. ಆಯುರ್ವೇದದಲ್ಲಿ ಒಳ್ಳೊಳ್ಳೆಯ ಔಷಧಿಗಳೂ ಒಳ್ಳೊಳ್ಳೆಯ ಡಾಕ್ಟರುಗಳೂ, ಪಂಡಿತರೂ ಇದ್ದಾರೆ ಎನ್ನುವುದನ್ನು ನಾನು ಕಣ್ಣಾರೆ ಕಂಡ ನಿದರ್ಶನವನ್ನು ಹೇಳುತ್ತೇನೆ. ಒಂದು ಸಂದರ್ಭದಲ್ಲಿ ನನಗೆ ಬೇಕಾದ ದೊಡ್ಡ ಮನುಷ್ಯರೊಬ್ಬರು ದೊಡ್ಡ ರೋಗದಲ್ಲಿ ಬಳಲುತ್ತಿದ್ದರು. ಅದು ರಕ್ತ ಕಾರುವ ರೋಗ. ಅವರನ್ನು ಮಂಗಳೂರಿನ ವೆನ್‌ಲಾಕ್ ಆಸ್ಪತ್ರೆಯಲ್ಲಿ ತಂದು ಹಾಕಿ ಅಲ್ಲಿರತಕ್ಕ ಎಂ.ಡಿ.ಗಳು, ಲಂಡನ್, ಅಮೆರಿಕಾದಿಂದ ಬಂದಿರುವ ಎಲ್ಲ ಡಾಕ್ಟರುಗಳೂ ಕೂಡಿ ಒಂದು, ಒಂದೂವರೆ ತಿಂಗಳು ಔಷಧೋಪಚಾರ ಮಾಡಿದರೂ ಕೂಡ ಪ್ರಯೋಜನವಿಲ್ಲ ರಕ್ತ ಕಾರುವುದನ್ನು ನಿಲ್ಲಿಸಲಿಕ್ಕಾಗಲಿಲ್ಲ. ಒಬ್ಬ ಆಯುರ್ವೇದ ಪಂಡಿತರು, ಹಳ್ಳಿಯವರು, ಆರು ಗಂಟೆಯಲ್ಲಿ ರಕ್ತ ಕಾರುವುದನ್ನು ನಿಲ್ಲಿಸುತ್ತೇನೆ; ಒಂದೂವರೆ ತಿಂಗಳು ಔಷಧಿ ಕೊಟ್ಟರೂ ಆಗದೆ ಇರುವುದನ್ನು ನಾನು ಕೇವಲ ಆರು ಗಂಟೆಗಳಲ್ಲಿ ನಿಲ್ಲಿಸುತ್ತೇನೆಂದು ಹೇಳಿದರು. ಅದನ್ನು ನಂಬಲಿಕ್ಕೆ ಯಾರಿಗೂ ಸಾಧ್ಯವಿರಲಿಲ್ಲ ಮತ್ತು ಡಾಕ್ಟರುಗಳೂ ಅದನ್ನು ಒಪ್ಪಲಿಲ್ಲ. ಕೊನೆಗೆ ರೋಗಿಯ ಸಂಬಂಧೀಕರು ಡಾಕ್ಟರಲ್ಲಿ ಹೋಗಿ, ಹೇಗಿದ್ದರೂ ಸಾಯತಕ್ಕ ಮನುಷ್ಯ ಎಂದು ಭಾವಿಸಿ ಆಯುರ್ವೇದ ಚಿಕಿತ್ಸೆ ನಡೆಸಲು ಅವಕಾಶ ಕೊಡಿ ಎಂದು ಹೇಳಿ ಅವರನ್ನು ಒಪ್ಪಿಸಿದರು. ಆಯುರ್ವೇದ ಪಂಡಿತರು ಹಾಲಿನಲ್ಲಿ ಕುಂಕುಮ ಕೇಸರಿ ಹಾಕಿ, ಆಯುರ್ವೇದ ಭಸ್ಮವನ್ನು ಕೊಟ್ಟು, ಎರಡು ಗಂಟೆಗಳಲ್ಲಿ ಅರ್ಧ ಕಡಮೆಯಾಗುತ್ತದೆ, ಆರು ಗಂಟೆಗಳಲ್ಲಿ ಸಂಪೂರ್ಣ ಕಡಮೆಯಾಗುತ್ತದೆ ಎಂದು ಹೇಳಿದರು. ಹಾಗೆಯೇ ಔಷಧಿ ಕೊಟ್ಟ ಎರಡು ಗಂಟೆಗಳಲ್ಲಿ ಅರ್ಧ ಕಡಮೆಯಾಗಿ, 6 ಗಂಟೆಗಳಲ್ಲಿ ಸಂಪೂರ್ಣವಾಗಿ ರಕ್ತ ಕಾರುವುದು ನಿಂತಿತು. ಕೊನೆಗೆ ಆ ಮನುಷ್ಯ ಮತ್ತೆ ಮೂರು ವರ್ಷ ಬದುಕಿದ್ದು ಆ ನಂತರ ತೀರಿ ಹೋದರು. ಆಯುರ್ವೇದ

ದಲ್ಲಿ ಇಂಥ ಮದ್ದುಗಳಿವೆಯಲ್ಲ ಎನ್ನುವುದನ್ನು ಡಾಕ್ಟರುಗಳು ಕಂಡುಕೊಂಡರು. ಡಾಕ್ಟರುಗಳು ಎಷ್ಟು ಕಲಿತರೂ ಕೆಲವು ಆಯುರ್ವೇದ ಔಷಧಿಗಳನ್ನು ಇನ್‌ಜೆಕ್ಷನ್ ಮತ್ತು ಬೇರೆ ಮೂಲಕ ಪ್ರಯೋಗ ಮಾಡುತ್ತಿದ್ದಾರೆ. ಆದ್ದರಿಂದ ಆಯುರ್ವೇದ ಪದ್ಧತಿಗೂ ಸಾಕಷ್ಟು ಅವಕಾಶ ಕೊಡಬೇಕು.

ಉಳ್ಳಾಲ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಸರಿಯಾದ ಔಷಧಿಗಳಿಲ್ಲ, ಬ್ಯಾಂಡೇಜ್ ಬಟ್ಟೆ ಕೂಡ ಸಿಕ್ಕುವುದಿಲ್ಲ. ಅಲ್ಲಿ 18 ಸಾವಿರ ಜನಸಂಖ್ಯೆ ಇದೆ. ಬೇರೆ ಬೇರೆ ಗ್ರಾಮದಿಂದ ಬರುವವರು 60 ಸಾವಿರ ಜನ ಆಗಬಹುದು. ಕಾಲಕಾಲಕ್ಕೆ ಔಷಧಿ ಒದಗಿಸಿಕೊಡಬೇಕು ಎಂದು ಹೇಳುತ್ತಿದ್ದೇವೆ. ಉಳ್ಳಾಲದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕೂಡ ಸಾಕಷ್ಟು ಔಷಧಿಗಳನ್ನು ಒದಗಿಸಿಕೊಡುವಂಥ ಕ್ರಮ ಮಾಡಬೇಕು. ಅಲ್ಲದೆ ಈ ಕೇಂದ್ರಕ್ಕೆ ಒಬ್ಬ ಲೇಡಿ ಡಾಕ್ಟರನ್ನು ಕೊಡಬೇಕು. ಹೆರಿಗೆಯಾಗುವ ಹೆಂಗಸರು ಹೆಚ್ಚಾಗಿರುವ ಪ್ರದೇಶವಾಗಿದ್ದು, ನಗರಕ್ಕೆ ಬಹಳ ದೂರ ಎಂದರೆ ಸುಮಾರು 11 ಮೈಲಿ ಆಗುತ್ತದೆ. ಲೇಡಿ ಡಾಕ್ಟರೊಬ್ಬರನ್ನೂ ಕೆಲವು ಹಾಸಿಗೆಗಳನ್ನೂ ಒದಗಿಸಿಕೊಟ್ಟರೆ ಒಳ್ಳೆಯದು ಎಂದು ಸಲಹೆ ಮಾಡುತ್ತೇನೆ.

ಮಾನ್ಯ ಆರೋಗ್ಯ ಸಚಿವರು ಮಂಡಿಸಿರತಕ್ಕ ಬೇಡಿಕೆಯನ್ನು ಸ್ವಾಗತಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†Smt. WINNIFRED F. FERNANDES (Coondapur).—Hon. Speaker, Sir, speaking about the Demand for Public Health I must say, next to food medical problem comes. It is a very important aspect for the welfare of the common man. Regarding the functioning of the hospitals, the less said the better. Just now, hon. member on this side gave a clear picture about the state of affairs of the hospitals and I do not want to repeat them. But, that is the story everywhere. To whichever hospital you go, you will see shortage of linen, no medicine, no injections and lack of attention towards the patients. So, I request the hon. Minister to see that the necessary medicines, injections and linen etc. are supplied in adequate quantity to meet the requirements there. Also, there should be adequate number of doctors and nurses and other staff in attendance. Besides medicines and injections life saving medicines should also be kept there for emergency cases. Hon. Minister who is a man of not words but of action to see that special instructions are issued to the concerned authorities to see all the essential requirements of the hospitals are met in full. I request the Minister and the concerned authorities to pay surprise visits to all hospitals in the State so that they may get a clear picture of the state of the hospitals in the matter of medicine and staff as well.

Last year, participating in the budget discussion, I had pointed out certain difficulties about Coondapur hospital. Of course, there is much progress since then and I must thank the Minister for this. I had referred to X-Ray in that hospital which had gone out of order during the past three years and I had requested immediate action to get it repaired and put into service so that the poor patients who come there may derive the benefit of it. I regret to say, even now it has not been repaired and I do not know for what purpose it is kept there when it is not put to use. When I met the hon. Minister last year and appraised him of the fact, he told me that he would issue orders and also sanction some amount for its repairs. I do not know why this has not been attended to by the concerned authorities and I cannot understand how

(SMT. WINNIFRED F. FERNANDES)

the orders of the Minister are not implemented. I request the Minister to see, at least it is got repaired at once. I even doubt whether the medical authorities have got some understanding with the private doctors who maintain X-Ray plants. Because, people who come to the hospital for X-Ray treatment, have to go to private doctors and must spend 30 to 40 rupees. When there is a Government X-Ray apparatus, I do not know why these people must be made to spend money outside for this facility ? I request the hon. Minister to see to this at once.

Next, about staff. Coondapur hospital has got 77 beds and there are only 6 nurses. At present, there are only three, I am told. The Joint Director of Health Services inspected the hospital last month and he will bear witness to what I say now. There are only three nurses for 77 beds and more patients may also come there. One nurse has to attend with the lady doctors for the Family Planning Campaign; one for the day duty and one for the night duty. What attendance and what nursing can the patients expect and get from a single nurse on duty ? Are you helping this Family Planning by attaching a nurse out of the three, so that the patients in the hospital may die and go to grave ? So, Sir, the hon. Minister must see that the strength of nurses is increased sufficiently immediately. I also asked the Minister to expand this hospital because it is a headquarters hospital. For that purpose, the Magistrate's court which was adjacent to this hospital was shifted and it is vacant now but no steps have been taken to have additional beds and extend the hospital wards. So, I once again request the Minister that immediate action should be taken to house this hospital in that building also and I invite the hon. Minister to come and inaugurate the additional ward hospital.

About sanitation, cleanliness of the hospital. I am unable to find words to explain. When you enter the hospital, you should normally feel the smell of disinfectants and dettol. But, here, you get a stinking smell. About the latrines, I am unable to say anything at all ; their condition is worst. Those who go there will simply look at them and go elsewhere. Such is the condition of the latrines. About the water supply, I do not know whether the well there was cleaned at all. There is greasy substance on the top and I do not know whether the Joint Director has even seen it all. The electric appliances in the hospital are not in working condition. If one goes near the water tap, one will get a mild shock and nobody has cared to look into it. So, I request the hon'ble Minister and his subordinates to go there and see things and set them right at a very early date.

Regarding payments to contractors who supply bread, milk and so on, they are not made regularly. I have received complaints from the contractor who is supplying milk to the hospital that for the last three or four months he has not received payment. How can he supply without payments ? This should be set right.

There are many villages situated in Coondapur Taluk. They are in malanad area. There are no proper communication and the patients are put to hardship if they have to go to headquarters hospital. I therefore request you to open some family planning centre. Rural Public Health Centres should be opened and where there are family health centres at present, telephones should be installed there so that if there are any emergent cases, the doctors can phone to the head quarters and get patients there. For this ambulance is essential. Out of the budget provision you must make provision for an ambulance van to the Coondapur hospital.

Regarding vaccination work, of course it is the utmost duty of the Panchayat and Taluk Boards. But we have to protect the people from small pox. In 1965 there was an epidemic in Coondapur and we had sent an indent for vaccine. It was supplied free of cost. But just in December I have received a bill for Rs. 3,000 being the cost of this vaccine. We take health tax from the tax-payer and give to the Government; but the Government is asking payment for supply of vaccine and it comes to about Rs. 3,000. How can a panchayat give that much of amount because we are already collecting health tax and giving it. The supply of vaccine should not be charged and it should be free supply.

Lastly about the Family Planning, the loop. It is stated that this loop wears out of action and I have got two instances where a mother has given birth to a child along with the loop. I think you have not succeeded in this loop system. Women have given birth along with the loop. It is only a farce and most of the women who have taken to these complain of bleeding and pain. I feel we have not come to the correct discovery of it. In regard to the limitation of the family, you say that there should be only three childern. Supposing a parent has only three daughters and wishes to have a son or vice versa, what should be done in that case ? You cannot pass an order without any sense in it.

I think the hon'ble minister for fulfilling my request at a very early date and I thank the Chair for giving me this opportunity.

ಶ್ರೀ ಎಸ್. ವಿ. ಅಗ್ನಿಹೋತ್ರಿ.—ಮಾನ್ಯ ಸಭಾಪತಿಗಳೇ, ಈ ದಿವಸ ನಮ್ಮೆದುರಿಗಿರುವ ಆರೋಗ್ಯ ಇಲಾಖೆಯು 12 ಕೋಟಿ 28 ಲಕ್ಷ 76 ಸಾವಿರ ರೂಪಾಯಿಗಳ ಬೇಡಿಕೆಯನ್ನು ಅನುಮೋದಿಸುತ್ತಾ ಕೆಲವು ನ್ಯೂನತೆಗಳನ್ನು ತಿಳಿಸಿ ಸಲಹೆ ನೀಡಲು ಇಚ್ಛಿಸುತ್ತೇನೆ. ಈಗ ಇಲ್ಲಿಯವರೆಗೆ ಈ ಆರೋಗ್ಯ ಇಲಾಖೆಯ ಬೇಡಿಕೆ ಬಗ್ಗೆ ನಮ್ಮ ಮಾನ್ಯ ಸದಸ್ಯರು ಉತ್ತಮವಾದ ಸಲಹೆಗಳನ್ನು ಕೊಟ್ಟಿದ್ದಾರೆ. ನಾನೂ ಕೂಡ ನನ್ನ ಅನುಭವದಮೇಲೆ ಕೆಲವು ವಿಚಾರಗಳನ್ನು ಹೇಳುತ್ತೇನೆ. ಹೋದ ಸಲ ಡಾ. ನಾಗಪ್ಪ ಆಳ್ವರವರು ಮಂತ್ರಿಗಳಾಗಿದ್ದರು, ಈಗ ಶ್ರೀ ಪುಟ್ಟಸ್ವಾಮಿಯವರಿದ್ದಾರೆ, ಅವರು ಎಲ್ಲೆಲ್ಲಿಗೆ ಹೋಗುತ್ತಾರೋ ಅಲ್ಲೆಲ್ಲಾ ಆರೋಗ್ಯ ಸುಧಾರಿಸುತ್ತದೆ ಎಂಬ ಗ್ಯಾರಂಟಿಯಿದೆ. ಅವರು ದಕ್ಷರೆಂದು ಹಿಂದೆಯೇ ಹೆಸರು ಗಳಿಸಿದ್ದಾರೆ. ಆದುದರಿಂದ ಈ ಖಾತೆಯಲ್ಲೂ ದಕ್ಷತೆಯಿಂದ ಕೆಲಸಮಾಡುತ್ತಾರೆ ಎಂಬ ನಂಬಿಕೆ ಇದೆ. ಸರಕಾರಿ ಧೋರಣೆ ಜನರಿಗೆ ಉತ್ತಮವಾದ ಔಷಧಿ ಕೊಡಬೇಕು, ಅವರ ಆರೋಗ್ಯ ಸುಧಾರಿಸಬೇಕು ಎಂದಿದ್ದರೂ ಆ ರೀತಿ ಯೋಗ್ಯ ರೀತಿಯಿಂದ ಮಾಡುವುದಕ್ಕಾಗುವುದಿಲ್ಲ, ಜನರಿಗೆ ಬೇಕಾದ ಸೌಕರ್ಯ ಸಿಕ್ಕುತ್ತಿಲ್ಲ ಎಂದು ಹೇಳಬಯಸುತ್ತೇನೆ. ಕಾಂಗ್ರೆಸ್ ಸರಕಾರ ಬಂದನಂತರ ಮೆಡಿಕಲ್ ಕಾಲೇಜಿನ ಸೌಕರ್ಯ ಅಲ್ಲಲ್ಲಿ ಒದಗಿಸಿದ್ದಾರೆ, ಯಾವ ದೇಶವೂ ಮಾಡದಿರುವಷ್ಟು ಸೌಕರ್ಯ ನಮ್ಮ ದೇಶದಲ್ಲಿ ಕಲ್ಪಿಸಿದೆ.

(ಶ್ರೀ ಎಸ್. ವಿ. ಅಗ್ನಿಹೋತ್ರಿ)

ಆದರೆ ಬೇಕಾದಷ್ಟು ಆಸ್ಪತ್ರೆಗಳನ್ನು ತೆರೆದರೂ ಸಾಕಷ್ಟು ಉಪಯೋಗವಾಗಿಲ್ಲ. ಆಸ್ಪತ್ರೆಗಳನ್ನು ತೆರೆದರೆ ಸಾಲದು, ಅವುಗಳ ಮೇಲಿನ ಮೇಲ್ವಿಚಾರಣೆ ಮುಖ್ಯವಾದುದು. ಉದಾಹರಣೆಗೆ ಹೇಳಬೇಕಾದರೆ, ನಮ್ಮ ಧಾರವಾಡ ಜಿಲ್ಲೆಯ ಆಸ್ಪತ್ರೆಯಲ್ಲಿ ಎಕ್ಸ್‌ರೇ ಮಿಷನ್ ಇದೆ, ಅದು 3 ದಿವಸ ಸರಿಯಾಗಿದ್ದರೆ 5 ದಿವಸ ಕೆಟ್ಟಿರುತ್ತದೆ. ಅದನ್ನು ಹೇಳಿದ್ದರೂ ಬೇರೊಂದನ್ನು ತರಿಸಿಲ್ಲ ಅಥವಾ ಕೆಟ್ಟಿರುವುದನ್ನು ರಿಪೇರಿ ಸಹ ಮಾಡಿರುವುದಿಲ್ಲ. ಡಾಕ್ಟರನ್ನು ಕೇಳಿದರೆ ಮೇಲಕ್ಕೆ ಬರೆದರೆ ಜಾಗ್ರತೆ ರಿಪೇರಿಯಾಗುವುದಾಗಲಿ ಅಥವಾ ಬೇರೆ ತರಿಸುವುದಾಗಲಿ ಆಗುವುದಿಲ್ಲ, ತಮ್ಮ ಮರ್ಯಾದೆಯೂ ಉಳಿಯುವುದಿಲ್ಲ, ಆದುದರಿಂದ ಒಬ್ಬ ಸೇವಕನನ್ನು ಗೊತ್ತು ಮಾಡಿ ಎಕ್ಸ್‌ರೇ ಯಂತ್ರ ಸರಿಯಾಗಿದೆಯೋ ಇಲ್ಲವೇ ಎಂಬುದನ್ನು ಜನರಿಗೆ ತಿಳಿಸುವ ಏರ್ಪಾಡು ಮಾಡುತ್ತೇವೆ, ಚೆನ್ನಾಗಿದ್ದಾಗ ರೋಗಿಗಳನ್ನು ಕರೆದುಕೊಂಡು ಬನ್ನಿ ಎಂದು ಹೇಳಿದರು. ಅಲ್ಲಿ ಮೆಡಿಕಲ್ ಕಾಲೇಜಿದ್ದು ಅದಕ್ಕಾಗಿ 3—4 ಕೋಟಿ ರೂಪಾಯಿ ಖರ್ಚು ಮಾಡಿ ಕಟ್ಟಡ ಕಟ್ಟಿದ್ದಾರೆ, ಅಂಥ ಕಡೆ ಎರಡು ಎಕ್ಸರೇ ಯಂತ್ರಗಳಿದ್ದರೂ ಸರಿಯಾದ ಸಹಾಯ ದೊರೆಯುತ್ತಿಲ್ಲ. ಧಾರವಾಡ ಜಿಲ್ಲೆಯಲ್ಲಿ ಮಾತ್ರ ಹೀಗಿದೆಯೋ ಅಥವಾ ಇತರ ಜಿಲ್ಲೆಗಳಲ್ಲೂ ಹೀಗೆ ಇದೆಯೋ? ರೋಗಿಗಳನ್ನು ಆಸ್ಪತ್ರೆಗೆ ಕರೆದು ಕೊಂಡು ಹೋದರೆ ಸರಿಯಾಗಿ ನೋಡಿಕೊಳ್ಳುವುದಿಲ್ಲ, ರೋಗಿಗಳ ಜೊತೆಯಲ್ಲಿ ಬಂದಿರುವವರು ಹೊರಗೆ ಹೋದನಂತರ ಡಾಕ್ಟರು, ನರ್ಸುಗಳು ಮುಂತಾದವರು ರೋಗಿಗಳ ಕಡೆ ಸರಿಯಾಗಿ ಲಕ್ಷ್ಯಕೊಡುವುದಿಲ್ಲ, ಅಲ್ಲಿ ಕೆಲಸಮಾಡುವ ಕಾಂಪೌಂಡರು ಮುಂತಾದವರೇ ಆಸ್ಪತ್ರೆಯಲ್ಲಿ ರೋಗಿಗಳಿಗೆ ಒದಗಿಸುವ ಆಹಾರವನ್ನು ತಿಂದು ತಿನ್ನಲಾರದಂಥ ಆಹಾರವನ್ನು ರೋಗಿಗಳಿಗೆ ಕೊಡುವುದುಂಟು.

ಇನ್ನು ಮೆಂಟಲ್ ಹಾಸ್ಪಿಟಲ್ ವಿಷಯ. ಧಾರವಾಡದಲ್ಲಿ ಒಂದು ಮೆಂಟಲ್ ಹಾಸ್ಪಿಟಲ್ ಇದೆ. ಆ ಮೆಂಟಲ್ ಹಾಸ್ಪಲ್‌ಗೆ ಕರೆದುಕೊಂಡು ಹೋಗಿ ಬಿಟ್ಟರೆ ಪೇಷಂಟ್ ಯಾರೋ ಡಾಕ್ಟರ್ ಯಾರೋ ಗೊತ್ತೇ ಆಗುವುದಿಲ್ಲ. ಮೆಂಟಲ್ ಸರ್ಜರಿಯಲ್ಲಿ ವಿದ್ಯೆ ಕಲಿತವರು ಎಕ್ಸ್‌ಪರ್ಟ್ಸ್ ಆದಂತಹ ಜನರನ್ನು ಹಾಕುವುದನ್ನು ಬಿಟ್ಟು ಬರೀ ಆಪರೇಷನ್ ಮಾಡುವವರು ಒಬ್ಬರನ್ನು ಅಲ್ಲಿಗೆ ಹಾಕಿದ್ದೀರಿ.

6-00 P.M.

Sri B. P. KADAM (Karwar).—May I know from the hon'ble Member whether he has personally benefited from the Mental Hospstal at Dharwar ?

Sri S. V. AGNIHOTRI. —I have cured a doctor. ಇನ್ನು ಔಷಧಿ ವಿಚಾರ. ಒಬ್ಬ ಡಾಕ್ಟರು ಹೇಳುತ್ತಾ ಇದ್ದರು ಲೈಫ್ ಸೇವಿಂಗ್ ಡ್ರಗ್ಸ್, ಲೈಫ್ ಟೇಕಿಂಗ್ ಡ್ರಗ್ಸ್ ಅಂತ. ಲೈಫ್ ಸೇವಿಂಗ್ ಡ್ರಗ್ಸನ್ನು ಸರ್ಕಾರದವರು ಬೇಕಾದಷ್ಟು ಒದಗಿಸಿದರೂ ಕೂಡ ಆ ಡ್ರಗ್ಸ್ ಹಾಸ್ಪಿಟಲ್‌ನಲ್ಲಿ ಸಿಕ್ಕುವುದಿಲ್ಲ. ಏಕೆಂದರೆ ಪ್ರೈವೇಟ್ ಪ್ರಾಕ್ಟೀಸ್ ಅಲೋಡ್ ಅಂತ ಹೇಳುತ್ತೀರಿ, ಲೈಫ್ ಸೇವಿಂಗ್ ಡ್ರಗ್ಸನ್ನು ಅವರು ಇಲ್ಲಿ ಕೊಡುವುದಿಲ್ಲ ಬೇರೆ ಕಡೆ ಕೊಡುತ್ತಾರೆ. ಇಲ್ಲಿ ಕೊಡುವುದಕ್ಕೆ ಉಳಿಯುವುದೆಲ್ಲಾ ಲೈಫ್ ಟೇಕಿಂಗ್ ಡ್ರಗ್ಸೇ ಉಳಿಯುತ್ತವೆ. ಆದ್ದರಿಂದ ಒಬ್ಬ ರೋಗಿ ಆಸ್ಪತ್ರೆಗೆ ಹೋದ ಅಂದರೆ, ಮರಳಿ ಮನೆಗೆ ಬರುವ ಹಾಗೆಯೇ ಇಲ್ಲ. ಬೇಕಾದರೆ ಅವರುಗಳು ಲೈಫ್ ಟೇಕಿಂಗ್ ಡ್ರಗ್ಸನ್ನು ಅವರೇ ತೆಗೆದುಕೊಂಡು ಹೋಗಲಿ ನಮ್ಮ ಆಸ್ಪತ್ರೆಗಳಲ್ಲಿ ಲೈಫ್ ಸೇವಿಂಗ್ ಡಗ್ಸನ್ನು ಉಳಿಸಲಿ ಅಂತ ಅವರಿಗೆ ಸೂಚನೆ ಮಾಡುತ್ತೇನೆ.

ಧಾರವಾಡ ಡಿಸ್ಟ್ರಿಕ್ಟ್ ಪ್ಲೇಸ್ ಅಂತ ಹೇಳುತ್ತಾ ಇದ್ದೀರಿ. ಉತ್ತಮವಾದ ಸ್ಥಳ ಅಂತ ಹೇಳುತ್ತಾ ಇದ್ದೀರಿ, ರಾಯಚೂರು, ಬಿಜಾಪುರ, ಗುಲ್ಬರ್ಗ ಈ ಎಲ್ಲ ಕಡೆಯಿಂದಲೂ ಜನರು ಅಲ್ಲಿಗೆ ಬಂದು ಮುಂದೆ ಕಾರವಾರಕ್ಕೆ ಹೋಗಬೇಕು ಅಂತಹ ಪ್ರದೇಶದಲ್ಲಿ ಒಂದು ಸಿವಿಲ್ ಹಾಸ್ಪಿಟಲ್ ಇದೆ. ಯಾರಾದರೂ ಒಬ್ಬ ಪೇಷಂಟ್ ಸತ್ತರೆ ಆ ಹೆಣವನ್ನು ಒಂದು ರೂಮಿನಲ್ಲಿ ಇಡುತ್ತೀರಿ, ಆ ರೂಮೂ 12 ಅಡಿ ಅಗಲ 10 ಅಡಿ ಉದ್ದ ಇದೆ. ಒಬ್ಬ ಸತ್ತರೇನೋ ಸರಿ, ಎಂದಾದರೂ ಒಂದು ದಿವಸ 7—8 ಮಂದಿ ಸತ್ತರೆ ಆಗ ಏನು ಮಾಡುತ್ತಾರೆ? ಅಲ್ಲಿ ಏನು ವ್ಯವಸ್ಥೆ ಇದೆ ಅಂದರೆ ಪುಸ್ತಕದ ಷೆಲ್ಫಿನಾಗೆ ಪುಸ್ತಕ ಜೋಡಿಸಿ ಇಟ್ಟಿರುತ್ತಾರಲ್ಲಾ ಹಾಗೆ ಒಂದು ಷೆಲ್ಫ್ ಇಟ್ಟಿದ್ದಾರೆ ಅದರ ಮೇಲೆ ಒಂದರ ಮ್ಯಾಲೊಂದು ಹೆಣ ಜೋಡಿಸುತ್ತಾರೆ. ಗೆಳೆಯರ ಬಳಗ ಅಂತ ಹೇಳಿ ಒಂದು ಸಂಘ ಮಾಡಿಕೊಂಡಿದ್ದೆವು, ಅದಕ್ಕೆ ನನ್ನ ಅಧ್ಯಕ್ಷ ಅಂತ ಮಾಡಿದ್ದರು, ಒಂದು ದಿವಸ ಆ ದಿನದ ಕೆಲಸ ಕಾರ್ಯಗಳ ಡ್ಯೂಟಿ ನನ್ನ ಪಾಲಿಗೆ ಬಿದ್ದಿತ್ತು. ಆ ದಿವಸ ಆ ಗೆಳೆಯರ ಬಳಗದವರ ಪೈಕಿ ಒಬ್ಬ ಸತ್ತು ಹೋಗಿದ್ದ,

ಹಣಕೊಟ್ಟಿರಲಿಲ್ಲ ಅದನ್ನು ತೆಗೆದುಕೊಂಡು ಹೋಗಿ ಆ ರೂಮಿನಲ್ಲಿ ಹಾಕಿದ್ದರು. ಸಾಯಂಕಾಲ 5 ಗಂಟೆ ಆಗಿ ಹೋಗಿತ್ತು, ಈಗ ಹೆಣ ಕೊಡೋದಿಲ್ಲ ಮುಂಜಾನೆ ಕೊಡ್ತಿವಿ ಹೋಗ್ರಿ ಅಂತ ಅಂದರಂತೆ ಅದಕ್ಕೆ ನನಗೆ ಆ ಹೆಣ ತೆಗೆಸಿಕೊಂಡು ಬನ್ರಿ ಅಂತ ಹೇಳಿದರು, ನಾನು ಒಂದೇ ಹೆಣ ಇರ್ತದೆ, ಹೋಗೋದು, ತೊಗೊಂಡು ಬರೋದು ಎಂದು ಹೋದೆ ಹೋಗಿ ಅಲ್ಲಿ ನೋಡಿದಾಗ ಅಲ್ಲಿ ನಾಲ್ಕಾರು ಹೆಣಗಳನ್ನು ಷೆಲ್ಫ್ ನ ಮೇಲೆ ಹಾಕಿದ್ದರು, ಯಾವುದು ಏನು ಅಂತ ಒಂದೂ ನನಗೆ ಗೊತ್ತಾಗಲಿಲ್ಲ. ಆಗ ನಾನು ಡಾಕ್ಟರ್‌ಗೆ ಹೇಳಿದೆ, 'ಡಾಕ್ಟರ್ ಸಾಹೇಬ್ರೆ ಸ್ವಲ್ಪ ತಡೀರಿ ಇಂಥ ಹೆಣ ಅಂತ ಇನ್ನೂ ನನಗೆ ಗೊತ್ತಾಗಿಲ್ಲ, ಅವರ ಸಂಬಂಧೀಕರು ಬರ್‍ತಾರೆ ಬಂದ ಮೇಲೆ ತೆಗೆದುಕೊಂಡು ಹೋಗ್ತಾರೆ' ಅಂತ ಹೇಳಿದೆ. ಏಕೆಂದರೆ ಯಾವುದೋ ಹೆಣ ತೆಗೆದುಕೊಂಡು ಹೋಗಿ ಬಿಡೋದು ಆಮೇಲೆ ಅದರ ವಾರಸುದಾರರು ಬಂದು ನಮ್ಮ ಹೆಣ ಇಲ್ಲ ಅಂತ ಗೊಂದಲ ಆದೀತು, ಹಾಗೆ ಆಗಬಾರದು ಅಂತ ಹೇಳಿದೆ. ಅದರ ಸಂಬಂಧಿಕರು ಬಂದಮೇಲೆ ಬಿಡಿಸಿಕೊಂಡು ಹೋದರು ಅಂತ ಅನ್ರಿ. ಡಾಕ್ಟರ್ ಆಗಬೇಕಾದವನು ಎಂ.ಬಿ.ಬಿ.ಎಸ್. ಪಾಸ್ ಮಾಡಿದವನಿರಬೇಕು, ದೈವ ದೃಷ್ಟಿ ಇರಬೇಕು, ಯೋಗ್ಯರು ಇರಬೇಕು, ಸಾಕ್ಷಾತ್ ದೇವರ ಪ್ರತಿನಿಧಿಗಳಂತೆ ಕೆಲಸ ಮಾಡಬೇಕು. ಆ ರೀತಿ ಮಾಡಿದರೆ ಒಂದು ರೀತಿಯಿಂದ ಜನರಿಗೆ ಉಪಕಾರ ಮಾಡಿದ ಅಂತ ಜನ ಹೇಳುತ್ತಾರೆ. ಇದು ಆದದ್ದು 4-5 ವರ್ಷದ ಹಿಂದಿನ ಮಾತು, ಇವತ್ತೂ ಕೂಡ ಅದೇ ರೀತಿ ಇದೆ. ನಾನು ದಿವಸಕ್ಕೆ 3-4 ಸಾರಿ ಸಿವಿಲ್ ಹಾಸ್ಪಿಟಲ್‌ನಲ್ಲೇ ಇರುತ್ತೇನೆ. ಅಲ್ಲಿ ವಿಷಯ ನನಗೆ ಗೊತ್ತಿದೆ, ಆಗಿನ ಪರಿಸ್ಥಿತಿ ಈಗಲೂ ಬದಲಾವಣೆಯಾಗಿಲ್ಲ ಅನ್ನುವುದಕ್ಕೆ ಆ ಒಂದು ಉದಾಹರಣೆಯನ್ನು ಹೇಳಿದೆ 10 ಅಡಿ ಉದ್ದ 12 ಅಡಿ ಅಗಲ ಇರುವ ಆ ರೂಮು, ಆ ಷೆಲ್ಫ್ ಎಲ್ಲಾ ಅದೇ ರೀತಿ ಇವತ್ತಿಗೂ ಕೂಡ ಇವೆ.

ಇನ್ನು ನರ್ಸ್‌ಸ್ ಬಗ್ಗೆ ಹೇಳಬೇಕೆಂದರೆ, ಸೆಲೆಕ್ಷನ್ ಮಾಡುವ ಮುಂಚೆ ಈ ನರ್ಸ್‌ಸ್ ಆಗಿದ್ದವರು ಉತ್ತಮರಾಗಿರಬೇಕು, ನೋಡುವುದಕ್ಕೆ 'ಚಂದ' ಇರಬೇಕು. ರೆಕ್ರೂಟ್‌ಮೆಂಟ್ ರೂಲ್ಸ್‌ನಲ್ಲೇ ಚಂದ ಆಗಿರಬೇಕು ಅಂತ ಹೇಳಿ ಒಂದು ಕ್ವಾಲಿಫಿಕೇಷನ್ ಹಾಕಿದ್ದಾರೆ. ರೂಲ್ಸ್ ಓದಿ ನೋಡಿರಿ ನಿಮಗೇ ಗೊತ್ತಾಗುತ್ತದೆ. ಏಕೆ ಚಂದವಾಗಿರಬೇಕೆಂದರೆ ಔಷಧಿ ಕೊಡುವಾಗ ಈ ನರ್ಸ್ ಬಂದರೆ ಕೆಲವೇ ದಿವಸದಲ್ಲಿ ಪ್ರಾಣ ಹೋಗುವವನಿದ್ದರೂ ಕೂಡ ಆತನಿಗೆ ಆಕೆ ಧೈರ್ಯ ಕೊಡಬೇಕು, ಸರಿಯಾದ ಟ್ರೀಟ್‌ಮೆಂಟ್ ಕೊಟ್ಟು ಆತ ಬದುಕುವಂತೆ ಮಾಡಬೇಕು. ಈ ರೀತಿ ರಿಕ್ರೂಟ್‌ಮೆಂಟ್ ರೂಲ್ ಇದ್ದರೂ ಕೂಡ ಒಬ್ಬಾಕೆ ನರ್ಸ್ ಬಂದಿದ್ದಳು, ಆಕೆ ಒಂದು ಹಲ್ಲ ದವಡೆಯಿಂದ ಈಚೆ ಕಡೆ ಇತ್ತು.

ಶ್ರೀಮತಿ ನಾಗರತ್ನಮ್ಮ ಹಿರೇಮಠ (ಗಾಂಧಿನಗರ).—ರೂಪವತಿಯರಾಗಿದ್ದರೆ ಸಂತೋಷವಾಗುತ್ತದೆ ಅಂತ ಏನು ?

ಶ್ರೀ ಎಸ್. ವಿ. ಅಗ್ನಿಹೋತ್ರಿ.—ನಾನು ಬಣ್ಣ ನೋಡಿ ಸೆಲೆಕ್ಟ್ ಮಾಡಿರಿ ಅಂತ ಹೇಳುವುದಿಲ್ಲ. ಯಾರನ್ನು ಸೆಲೆಕ್ಟ್ ಮಾಡುತ್ತೀರಿ ಅಂತಹವರನ್ನು ನೋಡಿದರೆ ಮನುಷ್ಯ ಬದುಕಬೇಕು, ನೋಡಿದ ಕೂಡಲೇ ಸಾಯಬಾರದು ಅಂತಹವರನ್ನು ಸೆಲೆಕ್ಟ್ ಮಾಡಬೇಕೆಂದು ಹೇಳುತ್ತೇನೆ. ಒಬ್ಬ ಪೇಷಂಟಗೆ, ನಮ್ಮ ನೆಂಟರ ಹೈಕಿನೇ ಅವರು, 10 ಗಂಟೆಗೆ ಹಣ್ಣು ಕೊಟ್ಟು ಮಾತನಾಡಿಸಿಕೊಂಡು ಅವರ ಕಡೆಯವರು ಹೋದರು, 11 ಗಂಟೆಗೆ ನಾನು ಆಗಲೇ ಹೇಳಿದ ನರ್ಸ್ ಡ್ಯೂಟಿಗೆ ಬಂದಳು, ಆತ ಅಂತಿಮ ಸ್ಥಿತಿಯಲ್ಲಿ ಇದ್ದ. ಆಕೆ ಆತನಿಗೆ ಇಂಜಕ್ಷನ್ ಕೊಟ್ಟಳು. ಅದೇನು ಇಂಜಕ್ಷನ್ ಕೊಟ್ಟದ್ದಕ್ಕೇ ಆತ ಸತ್ತು ಹೋದನೋ ಅಥವಾ ಆಕೆಯನ್ನು ನೋಡಿಯೇ ಸತ್ತು ಹೋದನೋ ಗೊತ್ತಿಲ್ಲ. ಅಂತೂ ಆತ ಸತ್ತ ಅಂತ ತಿಳಿದುಕೊಂಡದ್ದಾಯಿತು. ಆದ್ದರಿಂದ ಅಂತಹ ನರ್ಸ್‌ಗಳನ್ನು ರಿಟೈರ್ ಮಾಡಿರಿ. ಅಂತಹವರನ್ನು ದಯಮಾಡಿ ಇಡಬೇಡಿರಿ ಅಂತ ಹೇಳಿ ಡಾಕ್ಟರ್‌ಗೆ ಹೇಳಿದೆ. ಇನ್ನು ಮೂರನೆಯದಾಗಿ ನಾನು ಹೇಳಬೇಕಾದ್ದು ಈ ಫ್ಯಾಮಿಲಿ ಪ್ಲಾನಿಂಗಿನ ವಿಚಾರ : ಈ ವಿಚಾರದಲ್ಲಿ ಸರ್ಕಾರದಲ್ಲಿ ಸರ್ಕಾರದವರು ತಮ್ಮ ನೌಕರರ ಬಗ್ಗೆ ಮಾತ್ರ ಒಂದು ಕಾನೂನಿನ ನಿರ್ಬಂಧ ಹಾಕಿದ್ದಾರೆ. ಆ ನಿರ್ಬಂಧ ಏನೆಂದರೆ—ಸರ್ಕಾರಿ ನೌಕರಿಯಲ್ಲಿರತಕ್ಕ ಮಂದಿ ಹೆಚ್ಚು ಮಕ್ಕಳನ್ನು ಹಡೆದರೆ, ಅಂದರೆ, ಮೂರು ಮಕ್ಕಳಿಗಿಂತ ಜಾಸ್ತಿ ಮಕ್ಕಳನ್ನು ಹಡೆದರೆ ಅವರಿಗೆ ಇನ್‌ಕ್ರಿಮೆಂಟ್ ಕೊಡಕೂಡದು ಎಂದು ಹೇಳಿದ್ದಾರೆ.

ಒಬ್ಬ ಮಾನ್ಯ ಸದಸ್ಯರು.—ನಿಮಗೆಷ್ಟು ಮಕ್ಕಳು ? ಆ ಸರ್‌ಕ್ಯುಲರ್ ನಿಮಗೂ ಎಲ್ಲರಿಗೂ ಅನ್ವಯವಾಗುತ್ತದೆ......

ಶ್ರೀ ಎಸ್. ವಿ. ಅಗ್ನಿಹೋತ್ರಿ.—ಅದು ಹೇಗ್ರಿ ಸಾಧ್ಯವಾಗುತ್ತದೆ ! ನಮಗಾಗಲೆ ಸುಮಾರು 10-11 ಮಕ್ಕಳಾಗಿವೆ. ನೀವು ಇನ್ನೂ ಹಡೀರಿ ಎಂದರೆ ನಮಗೆ ಅದು ಖಂಡಿತ ಸಾಧ್ಯವಿಲ್ಲ. ನೀವು ಒಂದು ಬಹುಮಾನ ಕೊಡುತ್ತೇವೆಂದರೂ ಅದು ಮಾತ್ರ ಸಾಧ್ಯವಿಲ್ಲ.

(ಶ್ರೀ ಎಸ್. ಎ. ಅಗ್ನಿಹೋತ್ರಿ)

ಆದರೆ ಸರ್ಕಾರದವರೀಗ ನೌಕರಿಯಲ್ಲಿರತಕ್ಕ ಮಂದಿಗೆ ಮೂರು ಮಕ್ಕಳಿಗಿಂತ ಜಾಸ್ತಿ ಹಡೆದರೆ, ಅಂದರೆ, ಸರ್ಕಾರದವರು ಮಾಡಿರತಕ್ಕ ಆ ಸರ್ಕ್ಯುಲರ್ ತಾರೀಖಿನಿಂದ ಈಚೆಗೆ ಮೂರು ಮಕ್ಕಳಿಗಿಂತ ಜಾಸ್ತಿ ಹಡೆದರೆ ಅವರಿಗೆ ಇನ್‌ಕ್ರಿಮೆಂಟ್ ಸಿಕ್ಕುವುದಿಲ್ಲ ಎಂದು ಹೇಳಿದ್ದಾರೆ ; ಅವು ಬಂದಾಗುತ್ತವೆ ಎಂದು ಹೇಳಿದ್ದಾರೆ. ನಾನು ಮೊನ್ನೆ ಒಂದು ಪೇಪರಿನಲ್ಲಿ ಓದಿದೆ—47 ವರ್ಷಗಳ ಒಬ್ಬಾಕೆ 27 ಮಕ್ಕಳನ್ನು ಹಡೆದಿದ್ದಾಳೆ ಎಂದು. ಅದು ಹೇಗೆ ಎಂದರೆ—ಒಂದೊಂದು ಸಲಕ್ಕೆ ಮೂರು ಮೂರು ಮಕ್ಕಳಂತೆ ಮೂರು ಸಲ ಹಡೆದಿದ್ದಾಳೆ. ಅನಂತರ ಒಂದೊಂದು ಸಲಕ್ಕೆ ಎರಡು ಮಕ್ಕಳಂತೆ ಐದು ಸಲ ಹಡೆದಿದ್ದಾಳೆ. ಹೀಗೆ 19 ಮಕ್ಕಳಾದ ಮೇಲೆ ಆಕೆ ಒಂದೊಂದು ಸಲಕ್ಕೆ ಒಂದೊಂದರಂತೆ 8 ಮಕ್ಕಳನ್ನು ಹಡೆದಿದ್ದಾಳೆ. ಈ ವಿಚಾರ ಪತ್ರಿಕೆಯಲ್ಲಿ ಬಂದಿದೆ. ಹೀಗೇನೇ ನಮ್ಮ ನೌಕರ ವರ್ಗದಲ್ಲಿರತಕ್ಕ ಮಂದಿ ಒಂದೊಂದು ಸಲಕ್ಕೆ ಮೂರು ಮೂರು ಮಕ್ಕಳಂತೆ ಹಡೆದರೆ ಮುಂದೇನು ಅವರ ಗತಿ ? ಆದುದರಿಂದ ಸರ್ಕಾರದವರು ಅವರು ಈಗೇನು ಒಂದು ಸರ್ಕ್ಯುಲರನ್ನು ತೆಗೆದಿದ್ದಾರೆ ಅದನ್ನು ಸ್ವಲ್ಪ ತಿದ್ದುಪಡಿ ಮಾಡಬೇಕೆಂದು ಹೇಳುತ್ತೇನೆ. ಒಬ್ಬ ಹೆಣ್ಣುಮಗಳು ಮೂರು ವರ್ಷದಲ್ಲಿ ಮೂರು ಮಕ್ಕಳನ್ನು ಹಡೆಯುವ ಕಡೆ ಆಕೆ ಒಂದೊಂದು ವರ್ಷದಲ್ಲೂ ಐದ್ಹೈದು ಮಕ್ಕಳನ್ನೋ ಅಥವಾ, ಮೂರು ಮೂರು ಮಕ್ಕಳನ್ನು ಹಡೆದರೆ 9—15 ಮಕ್ಕಳಾಗುತ್ತವೆ. ಆಗ ಸರ್ಕಾರದವರು ಆಕೆಗೆ ನೀನು ವರ್ಷಕ್ಕೆ ಇಷ್ಟೇ ಮಕ್ಕಳನ್ನು ಹಡೆಯಬೇಕು ಎಂದು ನಿರ್ಬಂಧ ಮಾಡಲಿಕ್ಕೆ ಬರುತ್ತದೆಯೇ ! ಅದು ಅಸಾಧ್ಯ. ಆದುದರಿಂದ ಈಗ ಸರ್ಕಾರದವರು ಹೊರಡಿಸಿರುವ ಸರ್ಕ್ಯುಲರನ್ನು ಸ್ವಲ್ಪ ತಿದ್ದುಪಡಿ ಮಾಡಬೇಕೆಂದು ಸಲಹೆ ಮಾಡುತ್ತೇನೆ. ಅದು ಹೇಗೆ ತಿದ್ದುಪಡಿ ಮಾಡಬೇಕೆಂದರೆ ನೌಕರಿಯಲ್ಲಿರತಕ್ಕ ಹೆಣ್ಣುಮಕ್ಕಳು ಮೂರು ಬಾರಿಗಿಂತ ಹೆಚ್ಚು ಹಡೆಯಬಾರದು ಎಂದು ಅದನ್ನು ತಿದ್ದುಪಡಿ ಮಾಡಬೇಕು. ಅವರು ನಾಲ್ಕನೇ ಸಾರ್ತಿಗೆ ಹಡೆದರೆ ಅವರಿಗೆ ಇನ್‌ಕ್ರಿಮೆಂಟ್ ಬಂದ್ ಮಾಡಲಾಗುತ್ತದೆ ಎಂದು ಮಾಡಿದರೆ ಅದು ಸರಿ ಹೋಗಬಹುದು. ಹಾಗೆ ತಿದ್ದುಪಡಿ ಮಾಡದಿದ್ದರೆ ಮುಂದೆ ಈ ಕಾನೂನಿಗೆ ಧಕ್ಕೆ ಬರುತ್ತದೆ. ಇದು ಸರಿಯಲ್ಲ ಎಂದು ಹೇಳಿ ನಾನು ಈ ಫ್ಯಾಮಿಲಿ ಪ್ಲಾನಿಂಗಿನ ವಿಚಾರವನ್ನು ಮುಗಿಸುತ್ತೇನೆ.

ಇನ್ನು ನಾನು ಶುದ್ಧ ಆಯುರ್ವೇದದ ಬಗ್ಗೆ ಎರಡು ಮಾತುಗಳನ್ನಾಡಬೇಕಾಗಿದೆ. ಆಯುರ್ವೇದದಲ್ಲಿ ಡಿಪ್ಲೋಮಾ ಕೋರ್ಸನ್ನು ಮಾಡಿಕೊಂಡಿದ್ದವರಿಗೆ 1964 ರಲ್ಲಿ ಅವರಿಗೊಂದು ಐದೂವರೆ ವರ್ಷದ ಎಂ.ಬಿ.ಬಿ.ಎಸ್. ಕೋರ್ಸನ್ನು ಮಾಡುತ್ತೇವೆಂದು ಸರ್ಕಾರದವರು ಭರವಸೆಯನ್ನು ಕೊಟ್ಟಿದ್ದರು. ಅದಕ್ಕಾಗಿ ಒಂದು ಕಾಲೇಜನ್ನು ತೆರೆಯುವಾಗಿ ಹೇಳಿದ್ದರು. ಆ ಡಿಪ್ಲೊಮಾ ಕೋರ್ಸಿನವರು ಅದನ್ನು ಮುಗಿಸಿ ಆ ಒಂದು ವರ್ಷದ ಹೌಸ್ ಸರ್ಜನ್ ಕೋರ್ಸನ್ನು ಮುಗಿಸಿದಾಗ್ಯೂ ಸರ್ಕಾರದವರಿನ್ನೂ ಕಾಲೇಜನ್ನು ತೆರೆದಿಲ್ಲ. ಈ ಮಧ್ಯೆ ಅನೇಕರನ್ನು ಆಯುರ್ವೇದ ಬಾಬಿನಲ್ಲಿ ವೈದ್ಯರ ಪಟ್ಟಿಯಲ್ಲಿ ಅವರ ಹೆಸರನ್ನು ರಿಜಿಸ್ಟರ್ ಮಾಡಿಕೊಂಡಿದ್ದಾರೆ. ನಾಳೆ ಅವರೂ ಕೂಡ ನಮಗೆ ಆ ಡಿಪ್ಲೊಮಾದವರಿಗೆ ಅವಕಾಶ ಕೊಟ್ಟ ಹಾಗೆ ಆ ಎಂ.ಬಿ.ಬಿ.ಎಸ್. ಕೋರ್ಸಿಗೆ ಅವಕಾಶ ಮಾಡಿಕೊಡಿ ಎಂದು ಕೇಳತಕ್ಕ ಅವಕಾಶ ಉಂಟಾಗಬಹುದು. ಆದರೆ ಸರ್ಕಾರದವರು ಇದನ್ನು ಒಂದು ನ್ಯಾಯದೃಷ್ಟಿಯಿಂದ ನೋಡಬೇಕಾದ್ದು ಅಗತ್ಯ. ಆ ಡಿಪ್ಲೊಮಾ ಕೋರ್ಸಿನವರ ನಂತರ ಬಂದವರಿಗೆ ತಾವು ಆ ರೆಕಾಗ್ನಿಷನ್ನನ್ನು ಕೊಡುವುದೇನೂ ಬೇಡ. ಆ ಡಿಪ್ಲೊಮಾದವರೆಲ್ಲರೂ ಮೆಟ್ರಿಕ್ ಪಾಸ್ ಮಾಡಿದವರು. ಅವರು ಆರ್ಟ್ಸನ್ನು ತೆಗೆದುಕೊಂಡಿದ್ದರು ಸೈನ್ಸ್ ತೆಗೆದುಕೊಂಡಿರಲಿಲ್ಲ ಎಂದು ಮತ್ತೆ ಅವರನ್ನು ಪಿ.ಯು.ಸಿ.ಗೆ ಸೇರಬೇಕೆಂದು ಒಂದು ಆಜ್ಞೆಯನ್ನು ಹೊರಡಿಸಲಾಯಿತು. ಅದು ಬಹಳ ಕಷ್ಟ. ಆದರೆ ಸರ್ಕಾರದವರು ತಮಗೂ ಮತ್ತು ಈ ಸಭೆಗೂ ಗೌರವ ಬರುವಂತೆ ಇದನ್ನು ಮಾಡಬೇಕೆಂದೂ ಮತ್ತು ಆ ಡಿಪ್ಲೊಮಾ ಹೋಲ್ಡರುಗಳಿಗೆ ಆದಷ್ಟು ಬೇಗ ರೆಕಾಗ್ನಿಷನ್ ಕೊಡಬೇಕೆಂದೂ ಸರ್ಕಾರದವರಲ್ಲಿ ಒತ್ತಾಯ ಮಾಡಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಚ್. ಎನ್. ನಂಜೇಗೌಡ (ಅರಕಲಗೂಡು).—ಮಾನ್ಯ ಅಧ್ಯಕ್ಷರೇ ಆರೋಗ್ಯ ಮಂತ್ರಿಗಳು ಈ ದಿವಸ ಮಂಡಿಸಿರತಕ್ಕ 17 ಕೋಟಿ 75 ಲಕ್ಷ ಚಿಲ್ಲರೆ ರೂಪಾಯಿಗಳ ಬೇಡಿಕೆಗಳನ್ನು ನಾನು ವಿರೋಧಿಸುತ್ತ ಕೆಲವು ಮಾತುಗಳನ್ನು ಹೇಳಬೇಕೆಂದಿದ್ದೇನೆ.

ಬಹುಶಃ ನಮ್ಮ ರಾಜ್ಯ ಸರ್ಕಾರದ ಇನ್ನುಳಿದ ಬೇರೆ ಬೇರೆ ಇರತಕ್ಕ ಯಾವ ಇಲಾಖೆಗಳ ವಿಷಯದಲ್ಲೂ ಉಂಟಾಗದೆ ಇದ್ದಂಥ ಒಂದು ಭಾರಿ ಅಪನಂಬಿಕೆಗೆ ಈ ಖಾತೆ ಒಳಗಾಗಿದೆ. ಅದಕ್ಕೆ ಕಾರಣ ಈ ಇಲಾಖೆಗೆ ಯಾವ ಒಂದು ಲಾ ಅಂಡ್ ಆರ್ಡರೂ ಕೂಡ ಇಲ್ಲ. ಇರತಕ್ಕ ಲಾ ಅಂಡ್ ಆರ್ಡರುಗಳಿಗೆ ಈ ಇಲಾಖೆ ಮನ್ನಣೆ ಮರ್ಯಾದೆಗಳನ್ನು ಕೊಡುತ್ತಿಲ್ಲ ಅನ್ನುವುದೇ ಆಗಿದೆ. ಆದುದ

ರಿಂದ ಈ ದಿವಸ ಇದು ಸರ್ಕಾರದ ಗೌರವಕ್ಕೆ ಧಕ್ಕೆಯನ್ನು ತಂದಿದೆ. ಹಾಗೂ ಇಲ್ಲಿ ನಮ್ಮೆಲ್ಲರ ಟೀಕೆಗಳಿಗೂ ಗುರಿಯಾಗಿದೆ. ಇಲ್ಲಿ ಆಡಳಿತ ಪಕ್ಷದವರ ಸಂಖ್ಯೆ ಸಾಕಷ್ಟು ಜಾಸ್ತಿಯಾಗಿರುವುದರಿಂದ ಅವರು ಈ ಡಿಮ್ಯಾಂಡ್‌ಗಳನ್ನು ಇಲ್ಲಿ ಪಾಸ್ ಮಾಡಿಸಿಕೊಳ್ಳಬಹುದು. ಅದು ಪ್ರಾಮುಖ್ಯವಲ್ಲ. ಪ್ರತಿಯೊಂದು ಇಲಾಖೆಗೂ ಒಬ್ಬೊಬ್ಬ ಮುಖ್ಯಾಧಿಕಾರಿಗಳಿರುತ್ತಾರೆ. ಅವರೆಲ್ಲರಿಗೂ ಕಾನೂನು ಏನೆಂಬುದು ಚೆನ್ನಾಗಿ ಗೊತ್ತಿದೆ. ಅದನ್ನು ಅವರು ಅರಿತು ನಡೆದರೆ ಅವರಿಗೂ ಗೌರವ, ಸರ್ಕಾರಕ್ಕೂ ಗೌರವ. 1964 ರಲ್ಲಿ ಟೀಚಿಂಗ್ ಸ್ಟಾಫನ್ನು ನೇಮಕ ಮಾಡಿಕೊಳ್ಳಲು ಸರ್ಕಾರದವರು ಕೇಡರ್ ಅಂಡ್ ರಿಕ್ರುಟ್‌ಮೆಂಟ್ ರೂಲ್ಸ್‌ಗಳನ್ನು ರಚನೆ ಮಾಡಿದರು. ಆದರೆ ಆ ರೂಲ್ಸ್‌ಗಳಿಗೆ ಯಾವ ಮನ್ನಣೆಯನ್ನೂ ಕೊಡದೆ ಅಧಿಕಾರಿಗಳು ತಮ ತಮಗೆ ಬೇಕಾದವರಿಗೆ ಆ ಹುದ್ದೆಗಳನ್ನು ಕೊಟ್ಟರು. ಇದೇ ವಿಚಾರವಾಗಿ ನಾನು ಹಿಂದೆಯೂ ಕೂಡ ಬಹಳ ಅಪಾದನೆಗಳನ್ನು ಮಾಡಿದ್ದೇನೆ. ಆ ಅಪಾದನೆಗಳಿಗೆ ನಮ್ಮ ಮುಖ್ಯಮಂತ್ರಿಗಳೂ ಕೂಡ ಅಂಟಿಕೊಂಡಿದ್ದಾರೆ. ಆ ದಿವಸ ಮಂತ್ರಿಗಳು ನನ್ನ ಅಪಾದನೆಗಳಲ್ಲಿ ಹುರುಳಿಲ್ಲ ಎಂದರು. ಹಾಗಿದ್ದರೆ ಈ ದಿವಸ ಸರ್ಕಾರದವರು ಏಕೆ ಒಂದು ಜ್ಯುಡಿಷಿಯಲ್ ಕಮಿಟಿಯನ್ನು ಎನ್‌ಕ್ವೈರಿ ಮಾಡುವುದಕ್ಕೆ ಏರ್ಪಾಡು ಮಾಡಬಾರದು ? ಅದನ್ನು ಅವರು ನೇಮಕ ಮಾಡಿದರೆ ನಾನು ಆ ಕೇಸನ್ನು ರುಜುವಾತು ಮಾಡುವುದಕ್ಕೆ ತಯಾರಿದ್ದೇನೆ. ಆ ದಿವಸ ಇವರು ಯಾರಿಗೆ ಪ್ರಮೋಷನ್ ಕೊಡಬಾರದಾಗಿತ್ತೋ ಅವರಿಗೆ ಪ್ರಮೋಷನ್ ಕೊಟ್ಟಿದ್ದಾರೆ. ಅವರನ್ನು ರೀಡರನ್ನಾಗಿ ನೇಮಕ ಮಾಡಿದ್ದಾರೆ. ಹಾಗೆ ಅವರಿಗೆ ಆ ಹುದ್ದೆ ಸಿಕ್ಕಿದ್ದರಿಂದ 6 ಸಾವಿರ ರೂ.ಗಳನ್ನು ಅವರು ಲಂಚವಾಗಿ ಕೊಟ್ಟರು. ಲೆಕ್ಚರರ್ ಕೆಲಸಕ್ಕೆ ತಿಂಗಳಿಗೆ 300 ಚಿಲ್ಲರೆ ಸಂಬಳ. ರೀಡರ್ ಕೆಲಸಕ್ಕೆ ತಿಂಗಳಿಗೆ 700 ಚಿಲ್ಲರೆ ಸಂಬಳ. ಸಾಲದ್ದಕ್ಕೆ ಪ್ರಮೋಷನ್ ಬೇರೆ ಸಿಕ್ಕಿತು. ತಾನು ಯಾರ ಕೆಳಗಿದ್ದನೋ ಆ ವ್ಯಕ್ತಿ ಎಲ್ಲರಿಗಿಂತಲೂ ಮೇಲೆ ಬಂದದ್ದೂ ಆಯಿತು. ಇದು ಸ್ವಜನಪಕ್ಷಪಾತದಿಂದ ಆದ ಕೆಲಸ. ಹಿಂದಿದ್ದ ಮಂತ್ರಿಗಳು ಕಾನೂನನ್ನು ಮುರಿದು ಈ ಕೆಲಸ ಮಾಡಿದ್ದಾರೆ. 1964 ರಲ್ಲಿ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸನ್ನು ರಚನೆ ಮಾಡಿದ್ದರೂ ಅದನ್ನು ಜಾರಿಗೆ ಕೊಡಲಿಲ್ಲ ಎಂದು ಕೆಲವರು ಹೈಕೋರ್ಟಿಗೆ ರಿಟ್ ಅರ್ಜಿ ಹಾಕಿದರು ಆಗ ಸರ್ಕಾರದವರು ಅದರ ಮುಂದೆ ಹೋಗಿ ಒಂದು ಅಂಡರ್‌ಟೇಕಿಂಗನ್ನು ಮಾಡಿಕೊಂಡರು. ಅದೇನೆಂದರೆ ಆ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ನೇಮದ ಪ್ರಕಾರ ಅದನ್ನೆಲ್ಲಾ ಪುನರ್ವಿಮರ್ಶೆ ಮಾಡುತ್ತೇವೆಂದು ಒಪ್ಪಂದ ಮಾಡಿಕೊಂಡರು. ಅವರೆ ಹಾಗೆ ಮಾಡಲಿಲ್ಲ. ಆದರಿಂದ ಮತ್ತೆ ಸರ್ಕಾರದವರು ಕಂಟೆಂಪ್ಟ್ ಆಫ್ ಕೋರ್ಟ್ ಅನ್ನುವ ಇನ್ನೊಂದು ತಕ್ರಾರಿಗೆ ಗುರಿಯಾಗಬೇಕಾಯಿತು.

Sri K. PUTTASWAMY.—If the hon'ble member yields, I would like to clarify the position. When writ petitions were filed, the stand that the Government took was that the Cadre and Recruitment rules which were promulgated in the year 1964 suffers from inherent difficulties and as such they could not be implemented. It is no doubt true that the Government undertook before the High Court to frame fresh cadre and recruitment rules and make appointments on the basis of the rules that would be framed.

ಶ್ರೀ ಎಚ್. ಎನ್. ನಂಜೇಗೌಡ.—ಸ್ವಾಮಿ, ಶ್ರೀ ಕೆ. ಪುಟ್ಟಸ್ವಾಮಿಯವರು ಮಂತ್ರಿಗಳಾದ ಮೇಲೆ 1967ರಲ್ಲಿ ಮತ್ತೊಂದು ಹೊಸದಾಗಿ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸನ್ನು ಮಾಡಿದರು. ಆದರೆ ಆ ಹಿಂದೆ ಇದ್ದ ರೂಲ್ಸ್‌ನಲ್ಲಿ ಆಲ್‌ಇಂಡಿಯಾ ಮೆಡಿಕಲ್‌ಕೌನ್‌ಸಿಲ್‌ನವರು ಏನೊಂದು ಆ ಹುದ್ದೆಗೆ ಅಗತ್ಯವಾದ ಕ್ವಾಲಿಫಿಕೇಷನ್ ಇರಬೇಕೆಂದು ಒತ್ತಾಯ ಹಾಕಿದ್ದರೋ ಅದನ್ನು ಈ ಹೊಸ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸನಲ್ಲಿ ಕೈಬಿಡಲಾಗಿದೆ ಎಂದು ಕೇಳುತ್ತಿದ್ದೇನೆ. ಅದು ಸರಿಯಲ್ಲ ಅನ್ನುವುದಾದರೆ ಅವರು ಹೇಳಲಿ...........

Sri K. PUTTASWAMY.—Sir, the Indian Medical Council has recognised degrees, post-graduate degrees given by certain Universities and not that of Mysore University and Bangalore University, and Karnatak University. We have examined the length of course and also the curriculum of studies that is prescribed in several Universities, and the standard of instruction given in our State is not in any way inferior to the standard of instruction given elsewhere. Government

(SRI K. PUTTASWAMY)

were not prepared to see that the post-graduates turned out from the Universities in our State were not qualified for appointment. Therefore, we have recognised the degrees conferred by all the Universities in India as the qualifications required for our appointments.

ಶ್ರೀ ಎಚ್. ಎನ್. ನಂಜೇಗೌಡ.—ಬಹಳ ಸಂತೋಷವಾಯಿತು. ಆಲ್ ಇಂಡಿಯಾ ಮೆಡಿಕಲ್ ಕೌನ್ಸಿಲ್‌ನವರು ಹುಬ್ಬಳ್ಳಿ ಕರ್ಣಾಟಕ ಮೆಡಿಕಲ್ ಕಾಲೇಜಿಗೆ ಬಂದಾಗ ಅಲ್ಲಿ ಟೀಚಿಂಗ್ ಕೇಡರ್‌ನಲ್ಲಿ ಇದ್ದಂಥ ಉಪಾಧ್ಯಾಯರುಗಳು ನಮ್ಮ ಆಲ್ ಇಂಡಿಯಾ ಮೆಡಿಕಲ್ ಕೌನ್ಸಿಲ್ ರೂಲ್ಸ್ ಪ್ರಕಾರ ಪಾಸ್ ಮಾಡದಿರುವಂಥವರನ್ನು ರೆಕಗ್‌ನೈಜ್ ಮಾಡುವುದಿಲ್ಲವೆಂಬುವಾಗಿ ಹೇಳಿರುವುದು ನಿಜವೋ ಸುಳ್ಳೋ ? ಅದನ್ನು ತಿಳಿಸಬೇಕು.

Sri K. PUTTASWAMY.—Sir, I would like to inform the House that the Indian Medical Council have recognised degrees of certain Universities where a post-graduate student gets his M. D. in Medicine in six months, whereas in our University he has to study for two years.

ಶ್ರೀ ಎಚ್. ಎನ್. ನಂಜೇಗೌಡ.—ಅದಕ್ಕೆ ತಕ್ಕ ಕ್ರಮವನ್ನು ತೆಗೆದುಕೊಳ್ಳಬೇಕು. ಎರಡು ವರ್ಷಗಳಿಂದ ಸ್ಟಡಿ ಮಾಡಿದ್ದರೂ ಏನೂ ಆಗುವುದಿಲ್ಲವೇ ? They must recognise our degrees also; otherwise they will be bogus degrees.

ಶ್ರೀ ಕೆ. ಪುಟ್ಟಸ್ವಾಮಿ.—ಮೈಸೂರು ಯೂನಿವರ್ಸಿಟಿ ಡಿಗ್ರಿಗಳನ್ನು ರೆಕಗ್‌ನೈಜ್ ಮಾಡಲಿಲ್ಲ.

ಶ್ರೀ ಎಚ್. ಎನ್. ನಂಜೇಗೌಡ.—ಇಂಡಿಯನ್ ಮೆಡಿಕಲ್ ಕೌನ್ಸಿಲ್‌ನವರು ಮೈಸೂರು ರಾಜ್ಯದಲ್ಲಿ 2 ವರ್ಷ ಬಹಳ ಮುತುವರ್ಜಿ ವಹಿಸಿ ಕೊಡುವ ಶಿಕ್ಷಣವನ್ನು ಒಪ್ಪಲಿಲ್ಲ. ಆದರೆ ಕೆಲವು ಯೂನಿವರ್ಸಿಟಿಗಳು ಕೇವಲ 6 ತಿಂಗಳು ಅಥವಾ ಒಂದು ವರ್ಷದಲ್ಲಿ ಕೊಡುವ ಶಿಕ್ಷಣವನ್ನು ಹಾಗೂ ಡಿಗ್ರಿಗಳನ್ನು ಒಪ್ಪಿಕೊಂಡಿದ್ದಾರೆ. ಆದ್ದರಿಂದ ಸರ್ಕಾರದವರು ಈ ವಿಚಾರಗಳನ್ನು ಪರಿಶೀಲನೆ ಮಾಡಿ ನಮ್ಮ ಡಿಗ್ರಿಗಳಿಗೆ ಮಾನ್ಯತೆ ದೊರಕಿಸಲು ಅಗತ್ಯವಾದ ಕಾರ್ಯಕ್ರಮ ಕೈಗೊಳ್ಳಬೇಕು.

ಇನ್ನು ಇಂಡಿಯನ್ ಮೆಡಿಸಿನ್ ವಿಷಯದಲ್ಲಿ ಹೇಳುವುದಾದರೆ, ಅದನ್ನು ಈಗ ರೀಆರ್ಗನೈಜ್ ಮಾಡಿ ಒಂದು ವರ್ಷದ ಮೇಲೆ ಆಯಿತು. ಜಾಯಿಂಟ್ ಡೈರೆಕ್ಟರನ್ನು ನೇಮಕ ಮಾಡಿದ ಮೇಲೆ ಆಯುರ್ವೇದಕ್ಕೆ ಸಂಬಂಧವಾಗಿ ಇಂಡಿಯನ್ ಮೆಡಿಸಿನ್ ವಿಷಯದಲ್ಲಿ ಅವರು ಏನು ವರದಿಯನ್ನು ಒಪ್ಪಿಸಿದ್ದಾರೋ ತಿಳಿದುಬಂದಿಲ್ಲ. ಆ ವರದಿಯನ್ನು ಸರ್ಕಾರದವರು ಪರಿಶೀಲಿಸಿ ಅದಕ್ಕೆ ಮಾನ್ಯತೆ ಕೊಡುವುದಕ್ಕೆ ಮತ್ತು ಅದರ ಮಟ್ಟವನ್ನು ಹೆಚ್ಚು ಮಾಡುವುದಕ್ಕೆ ಏನೇನು ಕ್ರಮಗಳನ್ನು ತೆಗೆದು ಕೊಂಡಿದ್ದಾರೋ ಗೊತ್ತಿಲ್ಲ. ಜೊತೆಗೆ ಜಿ. ಸಿ. ಐ. ಎಂ. ಎಂಬುವಾಗಿ ಆಯುರ್ವೇದ ವಿಷಯದಲ್ಲಿ ಒಂದು ಡಿಗ್ರಿ ಕೊಡುತ್ತಾರೆ. ಅಂತಹವರಿಗೆ ಸರ್ಕಾರದವರು ಕೆಲಸಗಳನ್ನು ಯಾವರೀತಿ ಒದಗಿಸುತ್ತಾರೆಂಬುದನ್ನು ಜನ ಮಾತನಾಡಿಕೊಳ್ಳುತ್ತಿದ್ದಾರೆ. ಡೈರೆಕ್ಟರ್‌ರಾಗಿರುವವರು ಈ ಡಿಗ್ರಿಯನ್ನು ಪಾಸ್ ಮಾಡಿರುವವರ ಪೈಕಿ ಒಂದೇ ಜಾತಿಯವರನ್ನು ತೆಗೆದುಕೊಳ್ಳುತ್ತಾರೆಂಬುವಾಗಿ ಜನ ಮಾತನಾಡುತ್ತಾರೆ. ಬೇರೆ ಜನಾಂಗದವರನ್ನು ತಗೆದುಕೊಳ್ಳದೆ, ತಮ್ಮ ಒಂದೇ ಜಾತಿಯ ಜನಾಂಗದವರನ್ನು ತೆಗೆದುಕೊಳ್ಳುತ್ತಾರೆಂದು ಅನೇಕರು ಹೇಳುತ್ತಿದ್ದಾರೆ. ಮಾನ್ಯ ಮಂತ್ರಿಗಳಿಗೆ ಹೇಳುತ್ತೇನೆ. ಇರತಕ್ಕ ಅಂಕಿ ಅಂಶಗಳನ್ನು ತೆಗೆದುಕೊಂಡು ಅದರಲ್ಲಿ ಲೋಪದೋಷಗಳಿದ್ದರೆ ಅವನ್ನು ತಿದ್ದಿಕೊಳ್ಳಬೇಕು. ದೇಶದಲ್ಲಿ ಮಾತನಾಡತಕ್ಕ ವಿಷಯವನ್ನು ನಾನು ಹೇಳುತ್ತಿದ್ದೇನೆ. ನನಗೆ ಯಾರ ಮೇಲೂ ದ್ವೇಷವಿಲ್ಲ. ಒಂದು ವೇಳೆ ಆ ರೀತಿ ಆಗುತ್ತಿದ್ದರೆ, ಅದನ್ನು ತಪ್ಪಿಸಬೇಕು ಅದು ಇನ್ನು ಮುಂದೆ ಆಗಕೂಡದು.

ಶ್ರೀ ಜಿ. ದುಗ್ಗಪ್ಪ.—ಮಂತ್ರಿಗಳು ಅದನ್ನು ಪರಿಶೀಲನೆ ಮಾಡಿಸಿ ಉತ್ತರ ಹೇಳಲಿ ಜಿ.ಸಿ.ಐ.ಎಂ. ಡಿಗ್ರಿಯನ್ನು ಆಯುರ್ವೇದ ಕಾಲೇಜಿನಿಂದ ಪಾಸ್ ಮಾಡಿ ಬಂದಿರತಕ್ಕ ಹುಡುಗರು ಬಹಳ ಜನ ಈಗ ನಿರುದ್ಯೋಗಿಗಳಾಗಿದ್ದಾರೆ. ಅವರು ಇಲಾಖೆ ಮುಖ್ಯಾಧಿಕಾರಿಗಳ ಹತ್ತಿರ ಹೋದರೆ,

ಎಂ. ಬಿ. ಬಿ. ಎಸ್. ಪದವೀಧರರಾಗಿದ್ದರೆ ನಾವು ನೇಮಕ ಮಾಡಿಕೊಳ್ಳಬಹುದೆಂದು ಹೇಳುತ್ತಾರೆ. ನೀವು ಜಿ. ಸಿ. ಐ. ಎಂ. ರವರನ್ನೇನಾದರೂ ನೇಮಕ ಮಾಡಿದ್ದೀರಾ ? ಅವರು ಯಾವ ಕೋಮಿನವರು ಎಂಬುದನ್ನು ನೋಡಿಕೊಳ್ಳಿ.

ಶ್ರೀ ಎಚ್. ಎನ್. ನಂಜೇಗೌಡ.—ಇನ್ನು ಆಸ್ಪತ್ರೆಗೆ ಇಂಡೆಂಟ್ ಮಾಡುವ ವಿಷಯದಲ್ಲಿ 10 ವರ್ಷಗಳಿಂದ ಇದ್ದಂಥ ಅಂಕಿ ಅಂಶಗಳನ್ನು ತೆಗೆದುಕೊಂಡರೆ ರೋಗಿಗಳನ್ನು ಯಾವ ಪ್ರಮಾಣದಲ್ಲಿ ತೆಗೆದುಕೊಂಡಿದ್ದಾರೆ, ಜಿಲ್ಲಾ ಆಸ್ಪತ್ರೆಗಳಿಗೆ ಯಾವ ರೀತಿಯಲ್ಲಿ ಎಕ್ಸ್‌ಪರ್ಟ್ಸ್‌ನ್ನು ಹಾಕಿದ್ದಾರೆಂದರೆ, ಅದು ಈಗಲೂ ಒಂದೇ ರೀತಿಯಲ್ಲಿದೆ. ಔಷಧಿಗಳೂ ಸಹ ಅದೇ ಪ್ರಮಾಣದಲ್ಲಿದೆ. ಹೆಚ್ಚಿಗೆ ಮಾಡಲಿಲ್ಲ. ಹಾಸನ ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸಿಗೆ ಎಕ್ಸ್ ಪರ್ಟ್ಸ್‌ನ್ನು ಹಾಕಿಲ್ಲ. ಅಲ್ಲಿ ಒಬ್ಬೊಬ್ಬ ಫಿಸಿಷಿಯನ್, ಮತ್ತು ಸರ್ಜನ್ ಇದ್ದಾರೆ. ಈಗ ರೋಗಿಗಳು ಜಾಸ್ತಿಯಾಗಿರುತ್ತಾರೆ. ಆದರೆ ಔಷಧಿಗಳನ್ನು ಮಾತ್ರ ಮೊದಲಿನ ಪ್ರಮಾಣದಲ್ಲಿ ಸರಬರಾಜು ಮಾಡುತ್ತಿದ್ದಾರೆ. ಇತ್ತೀಚೆಗೆ ಅದು ಇನ್ನೂ ಕಡಿಮೆಯಾಗುತ್ತಿದೆ. ರೋಗಿಗಳ ಸಂಖ್ಯೆ ಹೆಚ್ಚಾದಂತೆ ಔಷಧಿಯನ್ನೂ ಸಹ ಹೆಚ್ಚು ಪ್ರಮಾಣದಲ್ಲಿ ಕೊಡಬೇಕು. ಟ್ಯೂಬರ್‌ಕ್ಯುಲಾಸಿಸ್ ಸೆಂಟರುಗಳು ಇರುವ ಕಡೆಗಳಲ್ಲಿರತಕ್ಕ ಡಾಕ್ಟರುಗಳನ್ನು ಅಫ್‌ಗ್ರೇಡ್ ಮಾಡಬೇಕು. ಸ್ಪೆಷಲಿಸ್ಟ್ಸ್ ಡಾಕ್ಟರುಗಳನ್ನು ಅಲ್ಲಿ ಹಾಕಬೇಕು. ಜನರಲ್ ಡಾಕ್ಟರುಗಳನ್ನು ಅಲ್ಲಿ ಹಾಕಬೇಡಿ. ಟಿ. ಬಿ. ಸೆಂಟರುಗಳಲ್ಲಿ ಮಾತ್ರ ಖಂಡಿತವಾಗಿ ಜನರಲ್ ಡಾಕ್ಟರುಗಳನ್ನು ಪೋಸ್ಟ್ ಮಾಡಬೇಡಿ. ಆ ಪೋಸ್ಟ್‌ಗಳನ್ನು ಅಪ್‌ಗ್ರೇಡ್ ಮಾಡಿ ಜಾಸ್ತಿ ಟ್ರೈನಿಂಗ್ ಆಗಿರುವ ವರನ್ನು ಮಾತ್ರ ಅಲ್ಲಿಗೆ ಪೋಸ್ಟ್ ಮಾಡಬೇಕು ಎಂಬುದಾಗಿ ನಾನು ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ.

ಇನ್ನು ಹೊಸ ಆಸ್ಪತ್ರೆಗಳ ಮಂಜೂರಾತಿಯ ವಿಷಯ. ತಾಲ್ಲೂಕು ಬೋರ್ಡ್‌ಗಳಿಗೂ ಈ ಅಧಿಕಾರವಿದೆ. ಒಂದು ಗ್ರಾಮದಲ್ಲಿ ಜನಸಂಖ್ಯೆ ಜಾಸ್ತಿ ಇದ್ದರೆ ಅಲ್ಲಿ ಒಂದು ಆಸ್ಪತ್ರೆ ಬರಬೇಕಾಗಿದ್ದರೆ, ಅವರು ದುಡ್ಡು ಕೊಡಬೇಕು. ಸೇಕಡ 50ರಷ್ಟು ತಾಲ್ಲೂಕು ಬೋರ್ಡಿನವರು ಕೊಡಬೇಕು. ಗ್ರಾಮಸ್ಥರು ನೇರವಾಗಿ ದುಡ್ಡು ಕೊಟ್ಟರೂ ಕೆಲವು ಕಡೆಗಳಲ್ಲಿ ಆಸ್ಪತ್ರೆ ತೆರೆಯುವುದಕ್ಕೆ ಅವಕಾಶವಿಲ್ಲ. ತಾಲ್ಲೂಕು ಬೋರ್ಡಿನವರಿಗೇ ಇಷ್ಟವಿರುವುದಿಲ್ಲ. ಅವರಿಗೆ ರಾಜಕೀಯ ವಿರುತ್ತದೆ. ಅವರಿಗೆ ಆಸ್ಪತ್ರೆ ಆಗುವುದು ಬೇಕಾಗಿರುವುದಿಲ್ಲ. ಅಂತಹ ಸಂದರ್ಭದಲ್ಲಿ ಸರ್ಕಾರದವರು ವಿನಾಯಿತಿ ಕೊಟ್ಟು ತಾವಾಗಿಯೇ ಜನಗಳು ಮುಂದೆ ಬಂದು ಸಹಾಯ ಮಾಡಿದಂಥ ಗ್ರಾಮಗಳಿಗೆ ನೇರವಾಗಿ ಆಸ್ಪತ್ರೆಗಳನ್ನು ಮಂಜೂರು ಮಾಡಬೇಕು. ಇದು ಪ್ರಾಮುಖ್ಯವಾದಂಥ ವಿಷಯ. ಜನಾರೋಗ್ಯ ಕಾಪಾಡುವ ಸಂದರ್ಭದಲ್ಲಿ ತಾಲ್ಲೂಕು ಬೋರ್ಡಿನವರಿಗೆ ಮೇಂಟನೆನ್ಸ್ ಕೆಪಾಸಿಟಿ ಇರುವುದಿಲ್ಲ.

ಶ್ರೀ ಕೆ. ಪುಟ್ಟಸ್ವಾಮಿ.—ಪಂಚಾಯಿತಿ ಬೋರ್ಡ್ ಇರುತ್ತದೆ.

ಶ್ರೀ ಎಚ್. ಎನ್. ನಂಜೇಗೌಡ.—ಅವರು ಇದ್ದರೂ, ಅದನ್ನು ಸರ್ಕಾರದವರು ಮಾಡಬೇಕು. ಏನಾದರೂ ಆಗಲಿ, ಅದಕ್ಕೆ ಸರ್ಕಾರದವರು ಗಮನಕೊಡಬೇಕು. ಹಳ್ಳಿಗಳಲ್ಲಿ ಭಾರೀ ಅವಶ್ಯಕತೆ ಇದೆ. ಹಳ್ಳಿಯವರಿಗೆ ಮೂಲಭೂತವಾಗಿ ಇದು ಅಗತ್ಯ. ವಾಸ್ತವವಾಗಿ ಗ್ರಾಮಾಂತರ ಪ್ರದೇಶಗಳ ಮೇಲೆ ಅಭಿಮಾನ, ಕರುಣೆ ಅನುಕಂಪವಿದ್ದರೆ ಆ ರೀತಿ ಮಾಡಲಿ. ಅದು ಏನೂ ಇಲ್ಲವೆಂದು ತೋರುತ್ತದೆ. ಯಾರಾರಿಗೆ ಏನೇನು ಅನುಕೂಲಗಳನ್ನು ಮಾಡಿಕೊಡಬೇಕೋ ಸರ್ಕಾರದವರು ಮಾಡಿಕೊಡಬೇಕು. ಹಿಂದೆ ಹಳ್ಳಿಗಳಲ್ಲಿ ದಾನ ಕೊಡುತ್ತಿದ್ದರು. ಈಗ ದಾನ ಕೊಟ್ಟರೂ ಉಪಯೋಗಿಸುವ ಚೈತನ್ಯವಿಲ್ಲ. ಒಟ್ಟಿನಲ್ಲಿ ಹಳ್ಳಿಗಳ ಕಡೆ ಆಸ್ಪತ್ರೆಗಳ ಮಂಜೂರಾತಿ ಆಗಬೇಕು. ಇದರಲ್ಲಿ ಸರಿಯಾದ ಏರ್ಪಾಟುಗಳನ್ನು ಮಾಡುವುದಕ್ಕೆ ತಕ್ಕ ಅವಕಾಶವನ್ನು ಮಾಡಿಕೊಡಬೇಕು.

ಇನ್ನು ವಾಷಿಂಗ್ ಪ್ಲಾಂಟನ್ನು ಕೊಂಡುಕೊಳ್ಳಬೇಕೆಂದು 3ನೇ ಪಂಚವಾರ್ಷಿಕ ಯೋಜನೆಯಲ್ಲಿಯೇ ಮಾಡಿದ್ದರು. ಅದನ್ನು ಇನ್ನೂ ಕೊಂಡುಕೊಳ್ಳಲಿಲ್ಲ. ಇದರಲ್ಲಿ ಏನೋ ರಾಜಕೀಯ ಇದೆ. ಒಂದೊಂದು ಆಸ್ಪತ್ರೆಯಲ್ಲಿ ಲಾಂಡ್ರಿಯ ಬಗ್ಗೆ ಏನೋ ಕಮಿಷನ್ ಸಿಗುತ್ತದೆಂದು ಕಾಣುತ್ತದೆ. ವಾಷಿಂಗ್ ಪ್ಲಾಂಟ್ ಏಕೆ ಕೊಡಬಾರದು ?

ಶ್ರೀ ಕೆ. ಪುಟ್ಟಸ್ವಾಮಿ.—10 ವರ್ಷಗಳಲ್ಲಿ ಕೊಂಡಿದ್ದನ್ನೇ ಇನ್ನೂ ಇನ್‌ಸ್ಟಾಲ್ ಮಾಡಿಲ್ಲ. ಈ ದೇಶದಲ್ಲಿ ಎಲ್ಲವೂ ಕಮಿಷನ್ನಿನಲ್ಲಿಯೇ ನಡೆಯುತ್ತದೆಂದು ಹೇಳಿದರೆ ಹೇಗೆ ?

ಶ್ರೀ ಎಚ್. ಎನ್. ನಂಜೇಗೌಡ.—ಎಂ. ಎಸ್. ಮತ್ತು ಎಂ. ಡಿ. ಡಿಗ್ರಿ ಕೋರ್ಸಿಗೆ ಇಂಡಿಯನ್ ಮೆಡಿಕಲ್ ಕೌನ್ಸಿಲ್ಲಿನ ಅಂಗೀಕಾರವನ್ನು ಪಡೆಯುವುದಕ್ಕೆ ಸರ್ಕಾರ ಪ್ರಯತ್ನ ಮಾಡಬೇಕು. ಮತ್ತು ಅವರಿಗೆ ಬೇಕಾದ ಸಹಾಯ ಮತ್ತು ಸವಲತ್ತುಗಳನ್ನು ಸರ್ಕಾರದವರು ಒದಗಿಸಿಕೊಡಬೇಕು. ಅವರಿಗೆ ರಿಸರ್ಚಿಗೆ ಅನುಕೂಲವಾಗತಕ್ಕಂಥ ಉಪಕರಣಗಳು ಆಸ್ಪತ್ರೆಗಳಲ್ಲಿ ಇಲ್ಲ. ಅವರಿಗೆ ಆಸ್ಪತ್ರೆಗಳಲ್ಲಿ ಬೇಕಾದಂತಹ ಉಪಕರಣಗಳನ್ನು ಒದಗಿಸದೇ ಇದ್ದರೆ It will become a waste. ಆದ್ದರಿಂದ ಈ ಬಗ್ಗೆ ಸರ್ಕಾರದವರು ತಕ್ಕ ಕ್ರಮವನ್ನು ಕೈಗೊಳ್ಳಬೇಕೆಂದು ನಾನು ಹೇಳುತ್ತೇನೆ. We have invested certain amount, it has become a dead capital.

ಇನ್ನು ತಾಲ್ಲೂಕು ಹೆಡ್‌ಕ್ವಾರ್ಟರ್ಸ್ ಆಸ್ಪತ್ರೆಗಳಲ್ಲಿ ಲೇಡಿ ಡಾಕ್ಟರುಗಳನ್ನು ನೇಮಕ ಮಾಡತಕ್ಕ ವಿಷಯದಲ್ಲಿ ಹೋದ ಸಾರಿ ಇಂಟರ್‌ಪೆಲೇಷನ್ ಮೂಲಕ ಕೇಳಿದ್ದೆ, ಮತ್ತು ನನ್ನ ಭಾಷಣದಲ್ಲಿ ಕೂಡ ಹೇಳಿದ್ದೆ. ಆದರೂ ಸಹ ಸರ್ಕಾರದವರು ಆ ಬಗ್ಗೆ ಗಮನ ಕೊಟ್ಟಹಾಗೆ ಕಾಣಲಿಲ್ಲ. ಸಾಮಾನ್ಯವಾಗಿ ತಾಲ್ಲೂಕು ಹೆಡ್‌ಕ್ವಾರ್ಟರುಗಳಲ್ಲಿರತಕ್ಕ ಆಸ್ಪತ್ರೆಗಳಲ್ಲಿ ಲೇಡಿ ಡಾಕ್ಟರಿಗೆ ಕ್ವಾರ್ಟರ್ಸ್ ಕೂಡ ಕಟ್ಟಿಸಿರುತ್ತಾರೆ. ಹೀಗಿರುವಾಗ ಆ ಆಸ್ಪತ್ರೆಗಳಿಗೆ ಸರ್ಕಾರದವರು ಏತಕ್ಕೆ ಲೇಡಿ ಡಾಕ್ಟರನ್ನು ನೇಮಕ ಮಾಡಬಾರದು ? If you admit your inability to post lady doctors, you better dispose off them ಎಲ್ಲಾ ಕಡೆಗಳಲ್ಲೂ ರಾಜಕೀಯವನ್ನು ತರುತ್ತಾರೆ. ನಾವು ಹೇಳುವ ಮಾತನ್ನು ಕೇಳುವುದಿಲ್ಲ. ತಮಗೆ ಬೇಕಾದವರಿಗೆ, ಬೇಕಾದ ಕಡೆಗೆ ಲೇಡಿ ಡಾಕ್ಟರನ್ನು ಹಾಕಿದ್ದಾರೆ. ನಾನು ತಮಗೆ ಬೇಕಾದರೆ ಹತ್ತಾರು ನಿದರ್ಶನಗಳನ್ನು ಕೊಡುತ್ತೇನೆ. ಆದಕಾರಣ ನಾನು ಹೇಳುವುದು ಏನೆಂದರೆ, ತಾಲ್ಲೂಕು ಹೆಡ್‌ಕ್ವಾರ್ಟರಿಗೆ ಒಬ್ಬರು ಲೇಡಿ ಡಾಕ್ಟರನ್ನು ಕಡ್ಡಾಯವಾಗಿ ಹಾಕಬೇಕೆಂದು ಒಂದು ಪಾಲಸಿಯನ್ನು ಹಾಕಿಕೊಳ್ಳಬೇಕು. ಇಲ್ಲದೇ ಇದ್ದರೆ ಅಲ್ಲಿನ ಜನಗಳಿಗೆ ತೊಂದರೆಯಾಗುತ್ತದೆ. ಇದು ಬಹಳ ಪ್ರಾಮುಖ್ಯವಾದ ವಿಷಯ. ಇಷ್ಟು ಹೇಳಿ ಈ ಮೆಡಿಕಲ್ ಡಿಮ್ಯಾಂಡನ್ನು ನಾನು ಒಪ್ಪಿಕೊಳ್ಳುವುದಿಲ್ಲ. ಈ ಹಣವನ್ನು ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

Mr. DEPUTY SPEAKER.—Now, the House stands adjourned, for the day. We shall meet to-morrow at 12-00 Noon.

The House adjourned at Thirty Five Minutes past Six of the Clock, to meet again at Twelve of the Clock on Friday the 15th March 1968.